بِسۡمِ اللّٰہِ الرَّحۡمٰنِ الرَّحِیۡمِ نَحۡمَدُہٗ وَنُصَلِّیۡ عَلٰی رَسُوۡلِہِ الۡکَرِیۡمِ وَعَلٰی عَبۡدِہِ الۡمَسِیۡحِ الۡمَوۡعُوۡدِ

وَلَقَدۡ نَصَرَکُمُ اللّٰہُ بِبَدۡرٍ وَّاَنۡتُمۡ اَذِلَّۃٌ

ವರ್ಷ: 01

ಕನ್ನಡ **ಬದರ್** ವಾರ ಪತ್ರಿಕೆ

WEEKLY **BADAR** QADIAN KANNADA

ಸಂಚಿಕೆ: 33

ವಾರ್ಷಿಕ ಶುಲ್ಕ ರೂ.500/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

**27 ಆಗಸ್ಟ್ 2020, 27 ತಬ್‌ಲೀಗ್ 1399 ಹಿಜರಿ ಶಮ್‌ಸಿ, 07 ಮುಹರ್‍ರಮ್ 1442 ಹಿಜರಿ ಖಮರಿ.**


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– ಆಮೀನ್

اَللّٰهُمَّ اَيِّدْ اِمَامَنَا بِرُوْحِ الْقُدُسِ وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

اِنَّ اللّٰہَ لَا یَغۡفِرُ اَنۡ یُّشۡرَکَ بِہٖ وَیَغۡفِرُ مَا دُوۡنَ ذٰلِکَ لِمَنۡ یَّشَآءُ ۚ وَمَنۡ یُّشۡرِکۡ بِاللّٰہِ فَقَدِ افۡتَرٰۤی اِثۡمًا عَظِیۡمًا (النساء:49)

*(ಅನ್ನಿಸಾಅ್:49)*

ಅಂದರೆ: ಅವನೊಂದಿಗೆ ಸಹಭಾಗಿತ್ವ ಕಲ್ಪಿಸುವುದನ್ನು – ಶಿರ್ಕನ್ನು – ಖಚಿತವಾಗಿಯೂ ಅಲ್ಲಾಹನು ಕ್ಷಮಿಸಲಾರ. ಅದರ ಹೊರತಿರುವುದನ್ನು ತಾನಿಚ್ಛಿಸುವವರಿಗೆ ಅವನು ಕ್ಷಮಿಸುವನು.ಯಾವನಾದರೂ ಅಲ್ಲಾಹನಿಗೆ ಸಹಭಾಗಿಗಳನ್ನು ಕಲ್ಪಿಸಿದರೆ ಖಂಡಿತವಾಗಿಯೂ ಅವನು ಘೋರ ಪಾಪಕರವಾದ ಮಿಥ್ಯಾರೋಪವನ್ನು ಮಾಡುತ್ತಾನೆ.

## ಪ್ರವಾದಿ ಮುಹಮ್ಮದ್[ಸ]ರವರ ಉಪದೇಶ

### ಸಾಮೂಹಿಕ ನಮಾಝ್ ನಿರ್ವಹಿಸುವ ಪ್ರಾಮುಖ್ಯತೆ

- ಹಝ್ರತ್ ಅಬೂ ಹುರೈರ[ರ] ವರದಿ ಮಾಡುತ್ತಾರೆ, ರಸೂಲುಲ್ಲಾಹ್[ಸ] ಹೇಳಿದರು: ನೀವು ಇಖಾಮತ್ ತಕ್ಬೀರ್ ಆಲಿಸಿದರೆ ಅವಸರ ಪಡದೆ ಘನತೆಯಿಂದ ಆಗಮಿಸುವ ಪದ್ಧತಿ ರೂಢಿಸಿಕೊಳ್ಳಿ. ನಿಮಗೆ ಲಭಿಸಿದ ರಕಅತ್ ನಿರ್ವಹಿಸಿರಿ ಬಿಟ್ಟು ಹೋದ ರಕಅತ್ ಅನ್ನು ಮತ್ತೆ ಪೂರ್ಣಗೊಳಿಸಿರಿ. (ಬುಖಾರಿ ಕಿತಾಬುಲ್ ಅಝಾನ್, ಬಾಬ್ ಯಸ್‌ಆ ಇಲಸ್ಸಲಾತ್)

- ಹಝ್ರತ್ ಅಬೂಹುರೈರ[ರ] ವರದಿ ಮಡುತ್ತಾರೆ: ರಸೂಲುಲ್ಲಾಹ್[ಸ] ಹೇಳಿದರು: ಯಾರ ಕೈಯಲ್ಲಿ ನನ್ನ ಜೀವವಿದೆಯೋ ಆ ಅಲ್ಲಾಹನ ಆಣೆ!!, ನನ್ನ ಮನಸ್ಸಿನಲ್ಲಿ ಬರುವುದೇನಂದರೆ; ನಮಾಝಿಗೆ ಬಂದವರಲ್ಲಿ ನಾನು ಹೇಳುವೆನು; ಕಟ್ಟಿಗೆಗಳನ್ನು ಸಂಗ್ರಹಿಸಿರಿ ಮತ್ತು ಅಝಾನ್ ಕೊಡಿ ತದನಂತರ ಮತ್ತೊಬ್ಬನನ್ನು ನೀವು ಜನರಿಗಾಗಿ ನಮಾಝ್ ನಿರ್ವಹಿಸಿರಿ (ಇಮಾಮತ್ ಮಾಡಿರಿ) ಎಂದು ಹೇಳಿ ಅವರೆಲ್ಲರನ್ನು ಅಲ್ಲೆ ಬಿಟ್ಟು ನಮಾಝಿಗೆ ಬಂದಿರದ ಜನರ ಬಳಿ ಹೋಗಿ ಅವರ ಸಮೇತ ಅವರ ಮನೆಗಳನ್ನು ಸುಟ್ಟು ಹಾಕಬೇಕೆಂದು ಭಾವಿಸುತ್ತೇನೆ. ಯಾರ ಕೈಯಲ್ಲಿ ನನ್ನ ಜೀವವಿದೆಯೋ ಆ ಅಲ್ಲಾಹನ ಆಣೆ!! ಅವರಲ್ಲಿ ಯಾರಿಗೆ ಮಾಂಸದ ಒಂದು ದಪ್ಪದಾದ ಎಲುಬು ಅಥವಾ ಎರಡು ಕಾಲುಗಳು ಸಿಗುವುದು ಎಂದು ತಿಳಿಯುತ್ತಿದ್ದರೆ ಆತನು (ಅದಕ್ಕಾಗಿ) ಇಶಾಅ್ ನಮಾಝಿನಲ್ಲಿ ಅವಶ್ಯವಾಗಿ ಹಾಜರಿರುತ್ತಿದ್ದನು. (ಬುಖಾರಿ, ಕಿತಾಬುಲ್ ಅಝಾನ್, ಬಾಬ್ ವಜೂಬ್ ಸಲಾತುಲ್ ಜುಮ್‌ಅ)

- ಹಝ್ರತ್ ಅಬ್ದುಲ್ಲಾ ಬಿನ್ ಉಮರ್[ರ] ವರದಿ ಮಾಡುತ್ತಾರೆ, ರಸೂಲುಲ್ಲಾಹ್[ಸ] ಹೇಳಿದರು: ಸಾಮೂಹಿಕ ನಮಾಝ್ ಒಬ್ಬಂಟಿಯಾಗಿ ಮಾಡುವ ನಮಾಝಿಗಿಂತ ಇಪ್ಪತ್ತೇಳರಷ್ಟು ಅಧಿಕ ಪದವಿಗೆ ಅರ್ಹವಾಗಿದೆ. (ಬುಖಾರಿ ಕಿತಾಬುಲ್ ಅಝಾನ್, ಬಾಬ್ ಫಸ್ಲುಸ್ಸಲಾತಿಲ್ ಜುಮುಅ, ಮುದ್ರಣ 2003 ಖಾದಿಯಾನ್)

**ಮನುಷ್ಯನು ತನ್ನ ಅಸಂಬದ್ಧ ಹಾಗೂ ಕಲುಷಿತ ವಿಶ್ವಾಸಗಳನ್ನು, ಅಂತೆಯೇ ತನ್ನ ಸತ್ಕರ್ಮಗಳ ಗೊಂದಲಗಳಿಂದ ಖಾಲಿ ಮಾಡುವವರೆಗೆ ಸಾತ್ವಿಕನಾಗಲು ಸಾಧ್ಯವಿಲ್ಲ.**

**ದುಂದುವೆಚ್ಚ ಮಾಡುವವನು ತನ್ನ ಸಂಪತ್ತಿಗೆ ಹಾನಿ ಮಾಡುವವನಾಗುತ್ತಾನೆ. ಆದರೆ ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವವನು ಅದನ್ನು ಮರಳಿ ಪಡೆಯುತ್ತಾನೆ ಮತ್ತು ಖರ್ಚು ಮಾಡಿರುವುದಕ್ಕಿಂತ ಹೆಚ್ಚು ಪಡೆಯುತ್ತಾನೆ.**

## ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ಪವಿತ್ರ ಖುರ್‌ಆನಿನ ಸೂರ ಅಲ್ ಅಸ್ರ್‌ನಲ್ಲಿ ಎರಡು ವಿಧಗಳ ವಿವರಗಳು ಬರುತ್ತದೆ. ಒಂದು ಸಜ್ಜನ, ಸಾತ್ವಿಕ ಇನ್ನೊಂದು ಅವಿಶ್ವಾಸಿ ಹಾಗೂ ದುರಾಚಾರಿಗಳದ್ದು. ಅಲ್ಲಾಹನು ಹೀಗೆ ಹೇಳಿದನು: **ಇನ್ನಲ್ಲಾಹ ಲಫೀ ಖುಸ್ರ್** (ಅಲ್–ಅಸ್ರ್:03) ಇನ್ನೊಂದು ವಿಧದವರನ್ನು ಹೀಗೆ ಪ್ರತ್ಯೇಕಗೊಳಿಸಲಾಯಿತು. **"ಇಲ್ಲಲ್ಲಝೀನ ಆಮನೂ ವ ಆಮಿಲುಸ್ಸಾಲಿಹಾತ್.** (ಅಲ್–ಅಸ್ರ್:04) ಅರ್ಥ: ಒಂದು ವಿಧ ನಷ್ಟ ಹೊಂದಿದವರದ್ದಾಗಿದೆ ಆದರೆ ಸತ್ಯವಿಶ್ವಾಸಿಗಳು ಹಾಗೂ ಸತ್ಕರ್ಮ ನಿರತರು ಅದರ ಹೊರತಾಗಿದ್ದಾರೆ. ಅದರಿಂದ ತಿಳಿದುಬರುವುದು ಸತ್ಯವಿಶ್ವಾಸಿಗಳು ಮತ್ತು ಸತ್ಕರ್ಮ ನಿರತರು ನಷ್ಟಹೊಂದುವವರಲ್ಲ. ನೆನಪಿಡಿರಿ! **'ಸಲಾಹ್'** ಎಂಬ ಪದವು ಎಲ್ಲಿ ಯಾವುದೇ ತರಹದ ಪಿತೂರಿ ಇಲ್ಲವೋ ಅಲ್ಲಿ ಪ್ರಯೋಗಿಸಲ್ಪಡುತ್ತದೆ. ಮನುಷ್ಯನು ನನ್ನ ಅಸಂಬದ್ಧ ಹಾಗೂ ಕಲುಷಿತ ವಿಶ್ವಾಸಗಳನ್ನು ಹಾಗೂ ತನ್ನ ಸತ್ಕರ್ಮಗಳನ್ನು ಗೊಂದಲಗಳಿಂದ ಖಾಲಿ ಮಾಡುವವರೆಗೆ ಸಾತ್ವಿಕನಾಗಲು ಸಾಧ್ಯವಿಲ್ಲ. ಮುತ್ತಖಿ (ಭಯ ಭಕ್ತಿವುಳ್ಳವನು) ಪದ, ಎಲ್ಲ ರೀತಿಯ ಆಡಂಬರಗಳಿಂದ ದೂರವುಳಿದು ಸತ್ಯ ಹೊಂದುವವನಿಗೆ ಲಭಿಸುತ್ತದೆ. ಅದರಿಂದ ತಿಳಿದು ಬರುವುದೇನೆಂದರೆ ಮುತ್ತಖಿಯು ತುಂಬ ಶ್ರಮ ಹಾಗೂ ಪ್ರಯತ್ನ ಪಡಬೇಕಾಗುತ್ತದೆ. ಆ ಸ್ಥಿತಿಯಲ್ಲಿ ಅವನು ದುಷ್ಕರ್ಮದ ಪ್ರೇರಕ ಆತ್ಮಕ್ಕೆ ಅಧೀನದಲ್ಲಿರುತ್ತಾನೆ. ಅದರ ಮೇಲೆ ನಿಯಂತ್ರಣ ಸಾಧಿಸಿ ಮೇಲೆ ಬಂದಾಗ **"ಶಾಂತಿ ಪಡೆದ ಆತ್ಮಕ್ಕೆ"** ಸೇರಿದವ ನಾಗುತ್ತಾನೆ. ಮುತ್ತಖಿ ದುಷ್ಪ್ರೇರಕ ಆತ್ಮದಿಂದ ಹೊರಬಂದು ದೋಷಿಸುವ ಆತ್ಮಕ್ಕೆ ಒಳಗಾಗಿರುತ್ತಾನೆ. ಆ ಕಾರಣದಿಂದ ಮುತ್ತಖಿಯ ಪರವಾಗಿ ಹೇಳಲಾಗಿದೆ ಅವನು ನಮಾಝುನ್ನು ಸ್ಥಿರಪಡಿಸುವವನಾಗುತ್ತಾನೆ. ಅಂದರೆ ಅದರಲ್ಲಿ ಒಂದು ರೀತಿಯ ಹೋರಾಟದ ಸ್ಥಿತಿ ಇದೆ. ದುರ್ಭೋದನೆ ಮತ್ತು ಉಪದ್ರವಗಳು ಬಂದು ಅವನನ್ನು ವಿಚಲಿತಗೊಳಿಸುತ್ತದೆ. ಆದರೆ ಅವನು ಗಾಬರಿಗೊಳ್ಳುವುದಿಲ್ಲ. ಈ ಉಪದ್ರವಗಳು ಅವನನ್ನು ದಣಿಸುವುದಿಲ್ಲ. ಅವನು ಸಂಪತ್ತು ಖರ್ಚು ಮಾಡುವುದರಿಂದಲೂ ಸೈತಾನನು ಅವನನ್ನು ತಡೆಯುತ್ತಾನೆ ಮತ್ತು ದುಂದುವೆಚ್ಚ ಹಾಗೂ ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವುದು ಎರಡು ಸಮಾನ ಎಂದು ಸಾದರ ಪಡಿಸುತ್ತಾನೆ. ಆದರೆ ಈ ಎರಡರಲ್ಲಿ ಭೂಮಿ ಮತ್ತು ಆಕಾಶದಷ್ಟು ಅಂತರವಿದೆ. ದುಂದು ವ್ಯಚ್ಚ ಮಾಡುವವನು ತನ್ನ ಸಂಪತ್ತಿಗೆ ಹಾನಿ ಗೊಳಿಸುವವನಾಗುತ್ತಾನೆ. ಆದರೆ ಅಲ್ಲಾಹನ ಮಾರ್ಗದಲ್ಲಿ ಕರ್ಚು ಮಾಡುವವನು ಮರಳಿಪಡೆಯುತ್ತಾನೆ ಮತ್ತು ಖರ್ಚು ಮಾಡಿದುದಕ್ಕಿಂತ ಹೆಚ್ಚು ಪಡೆಯುತ್ತಾನೆ. ಆದುದರಿಂದಲೆ ಸೂರ ಅಲ್–ಬಖರದಲ್ಲಿ **"ವಮಿಮ್ಮಾ ರಝುಖ್‌ನಾಹುಮ್ ಯುನ್‌ಫಿಖೂನ್"** ಎಂದಿದ್ದಾನೆ.

ವಾಸ್ತವವೇನೆಂದರೆ 'ಸಲಾಹ್'ನ ಅವಸ್ಥೆಯಲ್ಲಿ ಮನುಷ್ಯನಿಗೆ ಎಲ್ಲಾ ರೀತಿಯ ಅಂದರೆ ವಿಶ್ವಾಸಗಳ ಪೈಕಿಯಾಗಲಿ ಅಥವಾ ಕರ್ಮಗಳ ಪೈಕಿಯಾಗಲಿ ಪರಿಶುದ್ಧನಾಗಿರುವುದು ಅನಿವಾರ್ಯ ವಾಗಿವಿರುತ್ತದೆ. ಉದಾಹರಣೆಗೆ ಮನುಷ್ಯನು ಶರೀರದ ಸ್ವಾಸ್ಥ್ಯಕ್ಕೆ ಅವನ ಎಲ್ಲಾ ಅಖ್ಲಾತ್ ಸರಿಯಾದ ರೀತಿಯಲ್ಲಿ ಇರಬೇಕಾಗುತ್ತದೆ, ಹೆಚ್ಚು ಕಡಿಮೆ ಆಗಿರಬಾರದು. (ಖಿಲ್ತ್ ಪದದ ಬಹುವಚನ, ಅಂದರೆ ಶರೀರಲ್ಲಿ ನಾಲ್ಕು ಖಿಲ್ತ್‌ಗಳಿರುತ್ತವೆ ಪಿತ್ತ, ಸೌದಾ, ರಕ್ತ ಹಾಗೂ ಕಫ) ಆದರೆ ಯಾವುದರ ಒಂದು ಖಿಲ್ತ್(ಅಂಶ)ವೂ ಹೆಚ್ಚಾದರೆ ಶರೀರ ಅಸ್ತವ್ಯಸ್ತವಾಗುತ್ತದೆ. ಅದರ ಹೆಸರೇ ಪವಿತ್ರ ಖುರ್‌ಆನಿನಲ್ಲಿ **"ಅಸ್ಸಿರಾತಲ್ ಮುಸ್ತಖೀಮ್"** ಎಂದು ಕರೆಯುತ್ತದೆ. ಸಲಾಹ್ ಅವಸ್ಥೆಯಲ್ಲಿ ಮನುಷ್ಯನು ದೇವನಿಗೆ ಸಮರ್ಪಿತನಾಗಿರುತ್ತಾನೆ. ಉದಾಹರಣೆಗೆ ಹಝ್ರತ್ ಅಬೂಬಕ್ಕರ್ ಸಿದ್ದೀಖ್[ರ] ರವರ ಸ್ಥಿತಿಯಂತೆ. ನಿಧಾನವಾಗಿ ಸಾತ್ವಿಕ ಮನುಷ್ಯನು ಪ್ರಗತಿ ಹೊಂದುತ್ತ **"ಶಾಂತಿಪಡೆದ ಆತ್ಮ"** ಸ್ಥಾನಕ್ಕೆ ತಲುಪುತ್ತಾನೆ. ಇಲ್ಲಿ ಅವನ ಹೃದಯ ವಿಶಾಲಗೊಳ್ಳುತ್ತದೆ. ಉದಾಹರಣೆಗೆ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರಿಗೆ ಉದ್ದೇಶಿಸಿ ಹೇಳಲಾಯಿತು **"ಅಲಮ್ ನಶ್‌ರಹ್ ಲಕ ಸದ್ರಕ್"** (ಅಲಮ್ ನಶ್‌ರಹ್: 02) ನಾವು ಹೃದಯ ವೈಶಾಲ್ಯದ ಸ್ಥಿತಿಯನ್ನು ಪದಗಳಲ್ಲಿ ವಿವರಿಸಲು ಸಾಧ್ಯವಿಲ್ಲ.

**(*ಮಲ್‌ಫೂಝಾತ್ ಸಂಪುಟ–01, ಪುಟ–171–172, ಮುದ್ರಣ 2018 ಖಾದಿಯಾನ್*)**

**ಪವಿತ್ರ ಖುರ್‌ಆನ್ ನಮಾಝ್ ಕುರಿತು ಆಜ್ಞೆ ನೀಡಿದಾಗಲೆಲ್ಲ ಜಮಾಅತ್ತಿನೊಂದಿಗೆ (ಸಾಮೂಹಿಕ) ನಮಾಝ್ ನಿರ್ವಹಿಸಬೇಕೆಂದು ಆಜ್ಞಾಪಿಸಿದೆ. ಯಾವ ವ್ಯಕ್ತಿ ಕಾರಣವಿಲ್ಲದೆ ಜಮಾಅತ್‌ನೊಂದಿಗೆ ನಮಾಝ್ ನಿರ್ವಹಿಸುವುದಿಲ್ಲವೋ ಅಂತಹವನು ಮನೆಯಲ್ಲಿ ನಮಾಝ್ ನಿರ್ವಹಿಸಿಕೊಂಡರೂ ಅವನ ನಮಾಝ್ ಆಗುವುದಿಲ್ಲ.**

ಹಝ್ರತ್ ಮುಸ್ಲಿಹ್ ಮೌಊದ್[ರ] ಹೇಳುತ್ತಾರೆ: ಜಮಾಅತ್ತಿನೊಂದಿಗೆ ನಮಾಝ್ ನಿರ್ವಹಿಸುವ ಅಗತ್ಯತೆವನ್ನು ಸಾಮಾನ್ಯವಾಗಿ ಮುಸ್ಲಿಮರು ಮರೆತು ಬಿಟ್ಟಿದ್ದಾರೆ. ಇದು ಮುಸ್ಲಿಮರಲ್ಲಿ ಒಡಕಿಗೆ ಮತ್ತು ಭಿನ್ನತೆಗೆ ಕಾರಣವಾಗಿದೆ. ಅಲ್ಲಾಹನು ಈ ಆರಾಧನೆಯಲ್ಲಿ ಹಲವು ವೈಯುಕ್ತಿಕ ಮತ್ತು ಸಾಮುದಾಯಿಕ ಅನುಗ್ರಹಗಳನ್ನು ಇಟ್ಟಿದ್ದನು. ಆದರೆ ವಿಷಾಧದ ಸಂಗತಿ ಏನೆಂದರೆ ಮುಸ್ಲಿಮರು ಅದನ್ನು ಮರೆತು ಬಿಟ್ಟಿದ್ದಾರೆ. ಪವಿತ್ರ ಖುರ್‌ಆನ್ ನಮಾಝ್ ಕುರಿತು ಆಜ್ಞೆ ನೀಡಿದ್ದಾಗಲೆಲ್ಲ ಜಮಾಅತ್ತಿನೊಂದಿಗೆ ನಮಾಝ್ ನಿರ್ವಹಿಸುವುದು ಧರ್ಮದ ಒಂದು ಮುಖ್ಯ ತತ್ವವಾಗಿದೆ. ಅದಾಗ್ಯೂ ಪವಿತ್ರ ಖುರ್‌ಆನಿನಲ್ಲಿ ವಚನಗಳು ಅವಲೋಕಿಸಿ

**(*ಪುಟ ಸಂಖ್ಯೆ 10 ರಲ್ಲಿ ಮುಂದುವರಿಸಲಾಗಿದೆ*)**

لَآ اِلٰهَ اِلَّا اللّٰهُ مُحَمَّدٌ رَّسُوْلُ اللّٰهِ

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرُّ مَا فِي الْعَالَمِ ۞ شَرُّ السُّمُوْمِ عَدَاوَةُ الصُّلَحَاءِ

## ಲಾಲಾ ಮುರಳಿಧರ ಸಾಹಿಬ್, ಆರ್ಯ ಸಮಾಜ, ಹೋಶಿಯಾರ್‌ಪುರ ಅವರಿಗೆ ಒಂದು ನೂರು ರೂಪಾಯಿಗಳ ಪಂಥಾಹ್ವಾನ: ದೈವಿಕ ಸಾನಿಧ್ಯ ಮತ್ತು ಆಧ್ಯಾತ್ಮಿಕ ಸಂತೋಷಗಳು ಖುರ್‌ಆನಿನಲ್ಲಿ ಅಧಿಕವಾಗಿವೆಯೋ ಅಥವಾ ವೇದಗಳಲ್ಲೋ?

ಖಾದಿಯಾನಿನ ಹಿಂದೂಗಳು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ರವರಿಂದ ದೃಷ್ಟಾಂತಗಳನ್ನು ಬಯಸಿದಾಗ ಅಲ್ಲಾಹನು ಅವರಿಗೆ ತಿಳಿಸಿದನು "ನಿನಗೆ ಜ್ಞಾನ ಭೋದನೆಯು ಹೋಶಿಯಾರ್‌ಪುರದಲ್ಲಿ ದೊರೆಯುವುದು. ಅಂದರೆ ವಿರೋಧಿಗಳು ಬಯಸುತ್ತಿರುವ ದೃಷ್ಟಾಂತವು ಹೋಶಿಯಾರ್‌ಪುರದಲ್ಲಿ ನಿಮಗೆ ದೊರೆಯುವುದು. ಅದರಂತೆ 22 ಜನವರಿ, 1886ರಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೋಶಿಯಾರ್‌ಪುರಕ್ಕೆ ಹೋದರು 40 ದಿನಗಳವರೆಗೆ ಅವರು ಒಬ್ಬಂಟಿಯಾಗಿ ಅಲ್ಲಾಹನ ಅರಾಧನೆಗಳಲ್ಲಿ ಮಗ್ನರಾದರು. ಆಗ ಅಲ್ಲಾಹನು ಅವರಿಗೆ ಒಂದು ಮಹೋನ್ನತವಾದ ಸುಧಾರಕನ ಸುಸಂದೇಶ ನೀಡಿದನು. ಅವರು 20 ಫೆಬ್ರವರಿ 1886ರಂದು "ಪೇಶ್‌ಗೋಯಿ ಮುಸ್ಲಿಹ್ ಮೌಊದ್" (ಒಬ್ಬ ಸುಧಾರಕನ ಭವಿಷ್ಯವಾಣಿ) ಯನ್ನು ಪ್ರಕಟ ಪಡಿಸಿದರು. ಆಗ ಅವರು ಇನ್ನೂ ಹೋಶಿಯಾರ್‌ಪುರದಲ್ಲಿಯೇ ಇದ್ದರು, ಲಾಲಾ ಮುರಳಿಧರ ಸಾಹಿಬ್ ಆರ್ಯ ಸಮಾಜ, ಹೋಶಿಯಾರ್‌ಪುರ ಅವರು ಚಿತ್ರ ಕಲಾ ಶಿಕ್ಷಕರಾಗಿದ್ದರು. ಸ್ವಯಂ ಹಾಜರಾಗಿ ಭಿನ್ನವಿಸಿಕೊಂಡರು. "ನಾನು ಇಸ್ಲಾಮಿನ ಶಿಕ್ಷಣದ ಬಗ್ಗೆ ಕೆಲವು ಪ್ರಶ್ನೆಗಳನ್ನು ಮಾಡಬಯಸುತ್ತೇನೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮನಪೂರ್ವಕವಾಗಿ ಅವರ ಬೇಡಿಕೆ ಸ್ವೀಕರಿಸಿದರು. ಆದರೆ ಹೇಳಿದರು: ಎರಡು ವರ್ಗಗಳ ಪ್ರಶ್ನೆಗಳು ಪ್ರಸ್ತುತವಾಗಬೇಕು. ಏಕೆಂದರೆ ಯಾರಾದರೂ ಆ ಪ್ರಶ್ನೋತ್ತರಗಳನ್ನು ಓದಿದರೆ ಅವನಿಗೆ ಎರಡೂ ಧರ್ಮಗಳನ್ನು ಪರಿಶೀಲಿಸಿ ತಿಳಿದುಕೊಳ್ಳುವ ಸಂದರ್ಭ ಒದಗಬೇಕು. ಅಂದ ಹಾಗೆ ಎರಡೂ ವರ್ಗಗಳೂ ಅದೇ ರೀತಿ ಒಪ್ಪಂದದನ್ವಯ 11 ಮತ್ತು 14 ಮಾರ್ಚ್ 1886 ಎರಡು ದಿನಗಳನ್ನು ಚರ್ಚೆಗಳಿಗಾಗಿ ನಿಗದಿಪಡಿಸಿದರು. ಇಬ್ಬರ ಉತ್ತರಗಳು ಪೂರ್ಣಗೊಳ್ಳುವರೆಗೆ ಚರ್ಚಿಸಬಾರದು ಎಂದು ನಿರ್ಣಯಿಸಲಾಯಿತು.

11 ಮಾರ್ಚ್ 1886 ರಾತ್ರಿ ವೇಳೆಗೆ ಸಭೆ ಸೇರಿತು. ಉತ್ತರಕ್ಕೆ ಪ್ರತಿ ಉತ್ತರ ನೀಡುವ ಸಮಯ ಬಂದಾಗ ಶಿಕ್ಷಕ ಸಾಹೇಬರು ತಡರಾತ್ರಿಯ ನೆಪ ಒಡ್ಡಿದರು. ಹಝ್ರತ್ ಮಸೀಹ್‌ಮೌಊದ್ ಅಲೈಹಿಸ್ಸಲಾಮ್ ಮತ್ತು ಅಲ್ಲಿದ್ದ ಹೆಚ್ಚಿನ ಉಪಸ್ಥಿತರು ಮಾಸ್ಟರ್ ಸಾಹಿಬ್ ಅವರಿಗೆ ಅಷ್ಟೊಂದು ರಾತ್ರಿಯಾಗಿಲ್ಲ ಎಂದು ಮನವರಿಕೆ ಮಾಡಿಕೊಟ್ಟರು. ಅಲ್ಲದೆ ಇದು ಇಬ್ಬರಿಗೂ ಸಂಬಂದಿಸಿದುದಾಗಿದೆ ಆದರೂ ಮಾಸ್ಟರ್ ಸಾಹಿಬ್ ಯಾರ ಮಾತಿಗೂ ಕಿವಿಗೊಡಲಿಲ್ಲ. ಅಂತಿಮವಾಗಿ ಎಲ್ಲ ಉಪಸ್ಥಿತರ ಮುಂದೆ ಈ ಮಾತನ್ನು ಇಡಲಾಯಿತು. ಇದರ ಉತ್ತರ ಅವಶ್ಯವಾಗಿ ಬರವಣಿಗೆಯಲ್ಲಿ ಬರಬೇಕಾಗಿದೆ. ಮಾಸ್ಟರ್ ಸಾಹಿಬ್ ಈ ಸಮಯವನ್ನು ಬಿಡಬಯಸುವುದಾದರೆ ಅವಶ್ಯವಾಗಿ ತಮ್ಮ ನೆಲೆಯಲ್ಲಿ ಪತ್ರಿಕೆಯಲ್ಲಿ ಈ ಉತ್ತರ ಶಾಮೀಲು ಮಾಡಲಾಗುವುದು. ಮನಸ್ಸಿಲ್ಲದ ಮನಸ್ಸಿನಲ್ಲಿ ಮುರಳಿಧರ್ ಸಾಹೇಬರು ಅದನ್ನು ಒಪ್ಪಿಕೊಂಡರು. ತಮ್ಮ ನೆಲೆಯಲ್ಲಿ ಈ ಉತ್ತರವನ್ನು ಪತ್ರಿಕೆಯಲ್ಲಿ ಸೇರಿಸಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು:

"ಅದೇ ಸಭೆಯಲ್ಲಿ ಬರವಣಿಗೆಗೆ ಸೇರುವುದು ಅವರಿಗೆ ಇಷ್ಟವಾಗಲಿಲ್ಲ, ಆ ಕಾರಣದಿಂದ ಅವರು ತಡಮಾಡದೆ ಎದ್ದು ಹೋದರು. ವಿಷಯವೇನೆಂದರೆ ಮಾಸ್ಟರ್ ಸಾಹೇಬರಿಗೆ ಚಿಂತೆ ಕಾಡುತ್ತಿತ್ತು, ಅದೇ ಸಮಯ ಉತ್ತರಕ್ಕೆ ಪ್ರತಿಯಾಗಿ ಉತ್ತರ ಪ್ರಸ್ತುತ ಪಡಿಸಿದರೆ ತನಗೆ ಏನೆಲ್ಲ ಅಪಮಾನಗಳು ಎದುರಾಗುತ್ತವೋ ಏನೋ ಎಂದು" (ಸುರ್ಮಾ ಚಶ್ಮ ಆರ್ಯ ರೂಹಾನಿ ಖಝಾಯೀನ್ ಸಂಪುಟ–2, ಪುಟ–54)

ಟಿಪ್ಪಣಿಯಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ಬರೆಯುತ್ತಾರೆ: ಮಿಯಾಂ ಶತ್ರುಘನ್ ಸಾಹಿಬ್ ಎಷ್ಟೋ ಸಲ ಮಾಸ್ಟರ್ ಸಾಹಿಬ್‌ರಲ್ಲಿ ವಿನಂತಿಸಿಕೊಂಡರು. ನೀವು ಉತ್ತರಕ್ಕೆ ಪ್ರತಿ ಉತ್ತರವನ್ನು ಬರೆಯಲು ಬಿಡಿ. ನಾವು ಸಂತೋಷದಿಂದ ಇಲ್ಲಿ ಕುಳಿತುಕೊಳ್ಳುತ್ತೇವೆ, ನಮಗೆ ಯಾವುದೇ ರೀತಿಯ ತೊಂದರೆ ಇಲ್ಲ, ಬದಲಾಗಿ ನಮಗೆ ಉತ್ತರ ಆಲಿಸುವ ಹಂಬಲವಿದೆ, ಹಾಗೆಯೇ ಹಲವು ಹಿಂದೂ ಸಾಹಿಬರುಗಳು ಸಹ ಸಮ್ಮತಿ ಸೂಚಿಸಿದರು ಆದರೆ ಮಾಸ್ಟರ್ ಸಾಹಿಬ್ ಏನು ತಿಳಿದುಕೊಂಡರೋ ಏನೋ ಯಾರ ಮಾತಿಗೂ ಒಪ್ಪದೆ ಎದ್ದು ಹೋದರು. (ಸುರ್ಮಾ ಚಶ್ಮ ಆರ್ಯ ರೂಹಾನ ಖಝಾಯೀನ್ ಸಂಪುಟ–2, ಪುಟ–55)

ಮಿಯಾಂ ಶತ್ರುಘನ್ ಸಾಹಿಬ್‌ರ ತಂದೆ ರಾಜ ರುದ್ರ ಸೇನ್ ಸಾಹಿಬ್ ಸಾಕೇತ್ ರಾಜ್ಯದ ಉಸ್ತುವಾರಿ – (ಆ ಸಮಯದಲ್ಲಿ ಈ ಪ್ರದೇಶ ಹಿಮಾಚಲ ಪ್ರದೇಶದ ಮಂಡಿ ಜಿಲ್ಲೆಯಲ್ಲಿತ್ತು) ಆ ದಿನಗಳಲ್ಲಿ ಹೋಶಿಯಾರ್‌ಪುರಕ್ಕೆ ಬಂದಿದ್ದರು ಮತ್ತು ಸಭೆಯಲ್ಲಿ ಹಾಜರಿದ್ದರು.

ಎರಡನೇಯ ಸಭೆಯ ಗತಿಯೂ ಹಾಗೆಯೇ ಆಯಿತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಮುಖಾಂತರ ಕೇಳಿ, ಹೇಳುತ್ತಾರೆ: ಎರಡನೆಯ ಸಭೆ 14ನೇ ಮಾರ್ಚ್ 1886ರಲ್ಲಿ ಹಗಲಿನ ಸಮಯ ಶೇಖ್ ಮೆಹರ್ ಅಲಿ ಸಾಹಿಬ್, ರಯೀಸೆ ಆಝಮ್, ಹೋಶಿಯಾರ್‌ಪುರ ಅವರ ಮನೆಯಲ್ಲಿ ಸೇರಿತು. ಒಪ್ಪಂದದನ್ವಯ ಮೊದಲು ಈ ವಿನೀತನು ಒಂದು ಲಿಖಿತ ಆಕ್ಷೇಪವನ್ನು ಪ್ರಸ್ತುತಪಡಿಸಿದನು. ಅದೇನಂದರೆ ಅಲ್ಲಾಹನು ಸೃಷ್ಟಿಕರ್ತನು ಎಂಬುದರ ನಿರಾಕರಣೆ ಮತ್ತು ಅವನ ವ್ಯವಸ್ಥೆ ಎಂದರೆ ಮುಕ್ತಿಯನ್ನು ನಿರಾಕರಿಸುವುದು ಆರ್ಯ ಸಮಾಜದವರ ತತ್ವವಾಗಿದೆ. ಆದ್ದರಿಂದ ದೇವನ ಏಕತ್ವ ಮತ್ತು ಅನುಗ್ರಹ ಎರಡು ದೂರವಾಗುತ್ತವೆ. ಈ ಆಕ್ಷೇಪ ಸಭೆಯಲ್ಲಿ ಸರ್ವಸಾಮಾನ್ಯರಲ್ಲಿ ಆಲಿಸಿಕೊಟ್ಟಾಗ ಮಾಸ್ಟರ್ ಸಾಹೇಬರ ಮೇಲೆ ಒಂದು ವಿಚಿತ್ರ ರೀತಿಯ ಸ್ಥಿತಿ ಕಂಡುಬಂತು. ಆ ಸ್ಥಿತಿಯನ್ನು ಮಾಸ್ಟರ್ ಸಾಹಿಬರೇ ಚನ್ನಾಗಿ ಬಲ್ಲರು. ಮಾಸ್ಟರ್ ಸಾಹೇಬರಿಗೆ ಆ ಸಮಯ ಏನೂ ತೋಚುತ್ತಿರಲಿಲ್ಲ. ಅದಕ್ಕೆ ಏನು ಉತ್ತರ ಕೊಡಬೇಕೆಂದು ತಿಳಿಯದೆ ಒಂದು ನೆಪ ಮಾತ್ರವಾಗಿ ಒಂದು ಕಾಲು ತಾಸಿನವರೆಗೆ ಅದೇ ನೆಪ ಮುಂದುವರಿಸಿದರು. ಇದು ಒಂದು ಪ್ರಶ್ನೆಯಲ್ಲ, ಬದಲು ಎರಡು ಪ್ರಶ್ನೆಗಳಾಗಿವೆ. ಅದಕ್ಕೆ ಉತ್ತರವಾಗಿ ಹೇಳಲಾಯಿತು – ವಾಸ್ತವದಲ್ಲಿ ಅದು ಒಂದೇ ಪ್ರಶ್ನೆಯಾಗಿದೆ. ತುಂಬ ಹೊತ್ತು ಕೋಪತಾಪದ ನಂತರ ಪ್ರಶ್ನೆಯ ಒಂದು ಭಾಗದ ಉತ್ತರ ಬರೆದು ಹೇಳಿದರು ಮತ್ತು ಎರಡನೆ ಭಾಗದ ಬಾಬ್ತು ಅದು ಮುಕ್ತಾಯಕ್ಕೆ ಸಂಬಂಧಪಟ್ಟದ್ದಾಗಿತ್ತು. ಉತ್ತರ ನೀಡಿದರು. ಅದರೆ ಉತ್ತರ ಪಡೆಯಲು ನಿರಾಕರಿಸಲಾಯಿತು, ನಿಮಗೆ ಏನೆಲ್ಲ ಬರೆಯಲಿಕ್ಕಿದೆಯೋ ಇದೇ ಸಭೆಯಲ್ಲಿ ಬರೆದು ಹೇಳಬೇಕು, ಮನೆಯಲ್ಲಿ ಕುಳಿತುಕೊಂಡು ಬರೆಯಲಿಕ್ಕಿದ್ದರೆ ಈ ಸಭೆಯ ಅವಶ್ಯಕತೆಯಾದರು ಏನಿತ್ತು. ಆದರೆ ಮಾಸ್ಟರ್ ಸಾಹಿಬ್ ಒಪ್ಪಲಿಲ್ಲ, ಬರೆಯಲಿಕ್ಕೆ ಸಾಧ್ಯವಾಗುವುದಾದರೂ ಹೇಗೆ ಅವರ ಸ್ಥಿತಿ ಡೋಲಾಯಮಾನವಾಗುತ್ತಿತ್ತು! ಸಂಕ್ಷಿಪ್ತವಾಗಿ ಹೇಳುವುದೇನೆಂದರೆ ಅವರು ಸುತಾರಾಂ ಬರೆಯಲು ಒಪ್ಪದಿದ್ದಾಗ ನೀವು ಎಷ್ಟು ಬರೆದಿರುವಿರೋ ಅದನ್ನೇ ಕೊಟ್ಟುಬಿಡಿ. ಆ ಉತ್ತರಕ್ಕೆ ಪ್ರತ್ಯುತ್ತರವನ್ನು ನಾವು ಬರೆಯುತ್ತೇವೆ ಆಗ ಅವರು ಹೇಳಿದರು: ಈಗ ನಮ್ಮ ಸಮಾಜದ ಕೆಲಸವಿದೆ, ನಾವು ಕುಳಿತುಕೊಳ್ಳಲಾರೆವು ಎಂದು. ವಿವಶರಾಗಿ ಅವರು ಹೋಗಲು ಸಿದ್ಧರಾದಾಗ ಅವರಿಗೆ ತಿಳಿಸಲಾಯಿತು – ನೀವು ಹೀಗೆ ಮಾಡುವುದು ಸರಿಯಲ್ಲ. ನಮ್ಮ ಮಧ್ಯೆ ಆದ ಒಡಂಬಡಿಕೆಯನ್ನು ನೀವು ಉಲ್ಲಂಘಿಸಿದ್ದೀರಿ, ನೀವು ಪೂರ್ತಿ ಉತ್ತರ ಬರೆಯಲಿಲ್ಲ. ನಮಗೆ ಸಹ ಅದರ ಉತ್ತರಕ್ಕೆ ಉತ್ತರ ಬರೆಯಲು ಬಿಡುತ್ತಿಲ್ಲ. ನೀವು ಬಯಸಿದರೂ ಬಯಸದಿದ್ದರೂ ಉತ್ತರಕ್ಕೆ ಉತ್ತರವನ್ನು ಸ್ವಯಂ ಬರೆದು ಪತ್ರಿಕೆಯಲ್ಲಿ ಸೇರಿಸಲಾಗುವುದು. ಈ ಮಾತು ಕೇಳುತ್ತಲೇ ಮಾಸ್ಟರ್ ಸಾಹಿಬ್ ತಮ್ಮ ಸಂಗಡಿಗರೊಂದಿಗೆ ಎದ್ದು ಹೊರಟು ಹೋದರು. ಉಪಸ್ಥಿತರಿದ್ದ ಸದಸ್ಯರೆಲ್ಲರು ತಿಳಿದುಕೊಂಡರು – ಮಾಸ್ಟರ್ ಸಾಹಿಬರ ಇವೆಲ್ಲ ಚಟುವಟಿಕೆಗಳು ಪಾಲಾಯನ ಮಾಡಲು ಒಂದು ನೆವನವಾಗಿತ್ತು ಎಂದು. (ಸುರ್ಮಾ ಚಶ್ಮ ಆರ್ಯ ರೂಹಾನಿ ಖಝಾಯೀನ್ ಸಂಪುಟ–2, ಪುಟ–54)

ಗ್ರಂಥ ನೋಡಿದರೆ ಸ್ಪಷ್ಟವಾಗಿ ತಿಳಿದು ಬರುತ್ತದೆ – ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ತರ್ಕಬದ್ಧ ಹಾಗೂ ಸಾಹಿತ್ಯಧಾರಿತ ಪರಿಪೂರ್ಣ ಭಾಷಣದ ಮುಂದೆ ಲಾಲ ಸಾಹಿಬರು ಪೆಚ್ಚಾಗಿದ್ದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ರವರ ಪ್ರತಿ ಭಾಷಣದ ವಿರೋಧವಾಗಿ ತುಂಬ ಕಷ್ಟದಿಂದ ಸಾರರಹಿತ ಎರಡು ಮೂರು ಸಾಲುಗಳ ಆಕ್ಷೇಪಗಳನ್ನು ಮುಂದಿಟ್ಟು ಉಳಿದುಬಿಡುತ್ತಿದ್ದರು. ಲಾಲಾ ಸಾಹಿಬರು ಕೇವಲ ಆಕ್ಷೇಪಗಳನ್ನು

*(ಪುಟ ಸಂಖೆ 10 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**"ಪ್ರವಾದಿ ಮುಹಮ್ಮದ್[ಸ] ಹೇಳಿದರು: ಎಪ್ಪತ್ತು ಸಾವಿರ ದೇವಧೂತರು ಸಅದ್[ರ]ರವರ ಜನಾಝದಲ್ಲಿ ಭಾಗವಹಿಸಿದ್ದಾರೆ, ಅವರು ಇದಕ್ಕು ಮುಂಚೆ ಎಂದೂ ಭೂಮಿಗೆ ಆಗಮಿಸಿರಲಿಲ್ಲ".**

**ಪ್ರವಾದಿ ಮುಹಮ್ಮದ್[ಸ]ರವರ ನಿಷ್ಠೆ ಮತ್ತು ಆತ್ಮೀಯತೆಯ ಮೂರ್ತಿರೂಪರಾಗಿದ್ದ ಬದರಿ ಸಹಾಬಿಯಾದ ಓಸ್ ಗೋತ್ರದ ಮುಖಂಡರಾದ ಹಝ್ರತ್ ಸಅದ್ ಬಿನ್ ಮುಆಝ್[ರ]ರವರು ಪ್ರಾಮಾಣಿಕತೆಯಲ್ಲಿ, ತ್ಯಾಗದಲ್ಲಿ, ಇಸ್ಲಾಮಿನ ಸೇವೆಯಲ್ಲಿ, ಪ್ರವಾದಿಯೊಂದಿಗಿನ ಪ್ರೇಮದಲ್ಲಿ, ಎಂತಹ ಉನ್ನತ ಸ್ಥಾನವನ್ನು ಹೊಂದಿದ್ದರೂ ಎಂದರೆ, ಬಹಳ ಕಡಿಮೆ ಜನರಿಗೆ ಅಂತಹ ಸ್ಥಾನವಿತ್ತು. ಅವರ ಪ್ರತಿಯೊಂದು ಚಲನೆವಲನದಿಂದ ಇಸ್ಲಾಮಿನ ಮತ್ತು ಇಸ್ಲಾಮಿನ ಸ್ಥಾಪಕರೊಂದಿಗೆ ಇರುವ ಪ್ರೀತಿ ಹೊರಹೊಮ್ಮುತ್ತಿತ್ತು, ಅದು ಅವರ ಆತ್ಮದ ಆಹಾರವಾಗಿತ್ತು. ಅವರು ತಮ್ಮ ಗೋತ್ರದ ಸರದಾರರಾಗಿದ್ದ ಕಾರಣ ಅವರ ಮಾದರಿ ಅನ್ಸಾರುಗಳ ಎಡೆಯಲ್ಲಿ ಪ್ರಬಲವಾದ ಪ್ರಭಾವ ಬೀರುತ್ತಿತ್ತು.**

**ಮೊಟ್ಟಮೊದಲು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದ ಜನರಲ್ಲಿ, ಮಕ್ಕದಲ್ಲಿ ಹಿಂಸೆಗಳನ್ನು ಅನುಭವಿಸಿದ, ಪ್ರವಾದಿ ಮುಹಮ್ಮದ್[ಸ]ರವರಿಗೆ ಕಾವಲು ನೀಡಿದ, ಇಸ್ಲಾಮ್ ಹಾಗೂ ಖಿಲಾಫತ್‌ನೊಂದಿಗೆ ನಿಷ್ಠೆಯ ಸಂಬಂಧ ಹೋಂದಿದ ಬದರಿ ಸಹಾಬಿಯಾದ ಸಅದ್ ಬಿನ್ ಅಬಿ ವಖ್ಖಾಸ್[ರ]ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ.**

---

**ಇತ್ತೀಚೆಗೆ ನಿಧನ ಹೊಂದಿದ ಮುಕರ್ರಮ್ ಮಾಸ್ಟರ್ ಅಬ್ದುಸ್ಸಮೀ ಸಾಹಿಬ್ ರಬ್ವಾಹ್, ಹಾಗೂ ಮುಕರ್ರಮ ಸಯ್ಯದ್ ಮುಜೀಬುಲ್ಲಾಹ್ ಸಾಹಿಬ್ ಲಂಡನ್ ಅವರಿಬ್ಬರ ಸದ್ಗುಣಗಳ ಬಗ್ಗೆ ಪ್ರಸ್ತಾವನೆ ಮತ್ತು ಅವರೆಲ್ಲರ ನಮಾಝೆ ಜನಾಝ ಗಾಯಿಬ್ ನಿರ್ವಹಣೆ.**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **17–07–2020** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ . اَلرَّحْمٰنِ الرَّحِيْمِ . مٰلِكِ يَوْمِ الدِّيْنِ .

إِيَّاكَ نَعْبُدُ وَإِيَّاكَ نَسْتَعِيْنُ . اِهْدِنَا الصِّرَاطَ الْمُسْتَقِيْمَ .

صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ .

ಕಳೆದ ವಾರದ ಖುತ್‌ಬದಲ್ಲಿ ಹಝ್ರತ್ ಸಅದ್ ಇಬ್ನ್ ಮಆಧ್ ಬಗ್ಗೆ ಪ್ರಸ್ತಾಪಿಸಲಾಗಿತ್ತು.ಅಹ್‌ಝಾಬ್ ಯುದ್ಧ ಮತ್ತು ಹಝ್ರತ್ ಸಅದ್ ಬಿನ್ ಮಆಧ್ ಬಗ್ಗೆ ಪ್ರಸ್ತಾಪಿಸುತ್ತಾ ಸೀರತ್ ಖಾತಮುನ್ನಬಿಯ್ಯೀನ್"ನಲ್ಲಿ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬರು[ರ] ಹೀಗೆ ಬರೆದಿರುವರು:

"ಈ ಯುದ್ಧದಲ್ಲಿ ಮುಸ್ಲಿಮರಿಗೆ ಹೆಚ್ಚಿನ ಜೀವನಷ್ಟ ಉಂಟಾಗಿಲ್ಲ. ಕೇವಲ ಐದಾರು ಮಂದಿ ಶಹೀದ್ ಆದರು. ಆದರೆ ಔಸ್ ಗೋತ್ರದ ನಾಯಕರಾದ ಸಅದ್ ಬಿನ್ ಮಆಧ್[ರ] ತೀವ್ರವಾಗಿ ಗಾಯಗೊಂಡು ಹುತಾತ್ಮರಾದರು. ಇದು ಮುಸ್ಲಿಮರಿಗೆ ಪರಿಹರಿಸಲು ಅಸಾಧ್ಯವಾದ ನಷ್ಟವಾಗಿತ್ತು. ಸತ್ಯನಿಷೇಧಿಗಳ ಸೈನ್ಯದಲ್ಲಿ ಕೇವಲ ಮೂರು ಮಂದಿ ಕೊಲ್ಲಲ್ಪಟ್ಟರು. ಆದರೆ ಈ ಯುದ್ಧದಿಂದ ಖುರೈಶಿಗಳಿಗೆ ಎಂತಹ ಧಕ್ಕೆ ಉಂಟಾಯಿತೆಂದರೆ, ಇದರ ನಂತರ ಯಾವತ್ತೂ ಮುಸ್ಲಿಮರ ವಿರುದ್ಧ ಗುಂಪಾಗಿ ಹೋರಾಡುವ ಅಥವಾ ಮದೀನದ ಮೇಲೆ ಆಕ್ರಮಣ ನಡೆಸುವ ಧೈರ್ಯ ಅವರಿಗೆ ಉಂಟಾಗಲಿಲ್ಲ. ಹೀಗೆ ಹಝ್ರತ್ ಪೈಗಂಬರರ[ಸ] ಭವಿಷ್ಯವಾಣಿ ಅಕ್ಷರಶಃ ಪೂರ್ತಿಯಾಯಿತು."

(ಸೀರತ್ ಖಾತುಮುನ್ನಬೀಯೀನ್, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ–595)

ಇದರ ಬಗ್ಗೆ ಕಳೆದ ಖುತ್‌ಬದಲ್ಲಿ ಹೇಳಲಾಗಿತ್ತು. ಇನ್ನು ಮುಂದೆ ನಮ್ಮನ್ನು ಆಕ್ರಮಿಸಲು ಸತ್ಯನಿಷೇಧಿಗಳಿಗೆಧೈರ್ಯವಿರದು ಎಂದು ಹಝ್ರತ್ ಪೈಗಂಬರರು ಹೇಳಿದ್ದರು. ಖಂದಕ್ ಯುದ್ಧ ವೇಳೆಯಲ್ಲಿ ಸಅದ್ ಬಿನ್ ಮಆಧ್‌ರ ಮುಂಗೈಯಲ್ಲಿ ತೀವ್ರ ಗಾಯವಾಯಿತು. ಇದರಿಂದ ಅವರು ಶಹೀದ್ ಆದರು. ಹಝ್ರತ್ ಆಯಿಶಾ[ರ] ಹೇಳುತ್ತಾರೆ: "ನಾನು ಖಂದಕ್ ಯುದ್ಧ ದಿವಸ ಹೊರಗೆ ಬಂದೆ, ಜನರು ನಡೆದ ದಾರಿಯಲ್ಲಿ ನಡೆದುಕೊಂಡು ಹೋಗುತ್ತಿದ್ದೆ. ಹಿಂದಿನಿಂದ ನಡಿಗೆಯ ಸದ್ದು ಕೇಳಿದೆ. ನಾನು ಹಿಂತಿರುಗಿ ನೋಡಿದೆ. ಹಝ್ರತ್ ಸಅದ್ ಬಿನ್ ಮಆದ್ ತನ್ನ ಸೋದರ ಪುತ್ರನಾದ ಹಾರಿಸ್ ಬಿನ್ ಔಸ್‌ರೊಂದಿಗೆ ಗುರಾಣಿಯನ್ನು ಹೊತ್ತುಕೊಂಡಿದ್ದರು. ಹಝ್ರತ್ ಸಅದ್ ಬಿನ್ ಮಆಧ್ ನನ್ನ ಸಮೀಪದಿಂದ ಯುದ್ಧಗೀತೆ ಹಾಡುತ್ತಾ ಹಾದುಹೋದರು: ಅದು ಹೀಗೆ:

**ಲಬಿಸ್ ಖಲೀಲನ್ ಯುದ್ರಿಕುಲ ಹೈಜಲ್‌ಹಮಲ್,**
**ಮಾ ಅಹ್ಸನಲ್ ಮೌತ ಇಝ್ಝಾ ಹಾನಲ್ ಅಜಲ್.**

ಅಂದರೆ: ನಡೆಯಲಿರುವ ಯುದ್ಧದಲ್ಲಿ ಹಾಜರಾಗುವ ವರೆಗೆ ಕಾದಿರು, ನಿಶ್ಚಿತ ಸಮಯದಲ್ಲಿ ಬರುವ ಮರಣ ಎಷ್ಟು ಉತ್ತಮ. ಹಝ್ರತ್ ಆಯಿಶಾ ಹೇಳುತ್ತಾರೆ: ಹಝ್ರತ್ ಸಅದ್ ಬಿನ್ ಮಆಧ್‌ರ ಮೈಯಲ್ಲಿ ಯುದ್ಧ ಕವಚವಿತ್ತು. ಆದರೆ ಅವರ ಎದೆಯ ಎರಡೂ ಭಾಗ, ಪಾರ್ಶ್ವಗಳು, ಅದರಿಂದ ಹೊರಗಿತ್ತು.ಅವರ ಶರೀರದ ಭಾರ ಹೆಚ್ಚಿಗೆ ಇದ್ದ ಕಾರಣ, ಅವರ ಎದೆ ವಿಶಾಲವಿದ್ದ ಕಾರಣ ಕವಚದಿಂದ ಹೊರಗೆ ಕಾಣುತ್ತಿತ್ತು. ಅವರ ಮೈ ಕವಚದಿಂದ ಹೊರಗೆ ಇದ್ದ ಕಾರಣ ಅವರ ಎದೆಯ ಎರಡು ಪಕ್ಕ ಗಾಯಗೊಂಡಿರಬಹುದು ಎಂದು ನಾನು ಊಹಿಸಿದೆ. ಹಝ್ರತ್ ಸಅದ್ ಬಿನ್ ಮಆಧ್ ಉದ್ದ ಮೈಕಟ್ಟಿನ, ಭಾರಿ ಶರೀರದ ವ್ಯಕ್ತಿಯಾಗಿದ್ದರು.

(ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್ ಭಾಗ–3, ಪುಟ–322, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1990)

ಹಝ್ರತ್ ಸಅದ್ ಬಿನ್ ಮಆಧ್‌ರನ್ನು ಇಬ್ನ್ ಅರಿಕ ಗಾಯಗೊಳಿಸಿದ್ದನು. ಇಬ್ನ್ ಅರಿಕನ ಹೆಸರು ಹಬ್ಬಾನ್ ಬಿನ್ ಬಿನ್ ಮನಾಫ್ ಎಂದಾಗಿತ್ತು.ಬನೂ ಆಮಿರ್ ಬಿನ್ ಲೂಯಿ ಗೋತ್ರದವನಾಗಿದ್ದನು. ಅರಿಕ ಎಂಬುದು ಅವನ ತಂದೆಯ ಹೆಸರಾಗಿತ್ತು. (ಅಲ್‌ಅಸಾಬ ಫೀ ತಮೀಝೀಅಅಹಾಬ ಲಿಇಬ್ನೆ ಹಜರ್ ಅಸ್ಖಲಾನಿ ಸಂಪುಟ–3, ಪುಟ–71, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2005)

ಹಝ್ರತ್ ಜಾಬಿರ್[ರ]ವರದಿ ಮಾಡುತ್ತಾರೆ: ಅವರು ಹೇಳುತ್ತಾರೆ: ಹಝ್ರತ್ ಸಅದ್ ಬಿನ್ ಮಆಧ್‌ರ ತೋಳಿನ ರಕ್ತನಾಳಕ್ಕೆ ಬಾಣ ತಗುಲಿದಾಗ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಕೈಯಿಂದ ಬಾಣದ ಅಂಚನ್ನು ಕಿತ್ತೆಗೆದು ಪುನಃ ಅದರ ತುದಿಯಿಂದಲೇ ಬರೆ ಹಾಕಿದರು. ಆ ಗಾಯವನ್ನು ಮುರಿದು ಬರೆ ಹಾಕಿದರು. ಅದು ಪುನಃ ಬಾವಾಯಿತು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅದನ್ನು ಪುನಃ ಮುರಿದು ಪುನಃ ಬರೆ ಹಾಕಿದರು. ಗಾಯಗೊಂಡಲ್ಲಿ ಬಾಣದ ತುದಿಯಿಂದ ಪುನಃ ಮುರಿದು ಬರೆ ಹಾಕಿದರು. (ಸಹೀಹ್ ಮುಸ್ಲಿಮ್ ಕಿತಾಬುಸ್ಸಲಾಮ್, ಹದೀಸ್–2208)

ಹಝ್ರತ್ ಆಯಿಶಾ ಹೇಳುತ್ತಾರೆ: ಸತ್ಯನಿಷೇಧಿಗಳಲ್ಲಿ ಒಬ್ಬ ವ್ಯಕ್ತಿಯಾದ ಇಬ್ನ್ ಅರಿಕ ಹಝ್ರತ್ ಸಅದ್ ಬಿನ್ ಮಆಧ್‌ರಿಗೆ ಬಾಣ

ಹೂಡಿದ್ದನು. ಅವನು ಒಂದು ಬಾಣ ಹೂಡುತ್ತಾ ಹೇಳಿದನು: ಇದೋ ನಾನು ಇಬ್ನ್ ಅರಿಕ ಆಗಿರುವನು. ಆ ಬಾಣ ಹಝ್ರ‌ತ್ ಸಅದ್ ಬಿನ್ ಮಆಧ್‌ರ ತೋಳಿನ ರಕ್ತನಾಳಕ್ಕೆ ತಗುಲಿತು. ಗಾಯಗೊಂಡಾಗ ಹಝ್ರ‌ತ್ ಸಅದ್ ಬಿನ್ ಮಆಧ್ ಅಲ್ಲಾಹನಲ್ಲಿ ಹೀಗೆ ದುಆ ಮಾಡಿದರು: ಹೇ ಅಲ್ಲಾಹ್ ಬನೂ ಖುರೈಝ್ಞಾ ವಿಷಯದಲ್ಲಿ ನನಗೆ ಸಮಾಧಾನವುಂಟಾಗುವ ವರೆಗೆ ನನಗೆ ಮರಣ ಬರದಿರಲಿ. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–3, ಪುಟ–322, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1990)

ಹಝ್ರ‌ತ್ ಆಯಿಶಾ(ರ) ವರದಿ ಮಾಡುತ್ತಾರೆ: ಖಂದಕ್ ದಿವಸ ಹಝ್ರ‌ತ್ ಸಅದ್(ರ) ಗಾಯಗೊಂಡರು. ಖುರೈಶಿನ ಒಬ್ಬ ವ್ಯಕ್ತಿಯಾದ ಹಬ್ಬಾನ್ ಬಿನ್ ಅರಿಕ ಅವರ ಮಣಿಕಟ್ಟಿಗೆ ಬಾಣ ಹೂಡಿದರು. ಸಮೀಪವಿದ್ದುಕೊಂಡು ಅವರ ಕ್ಷೇಮ ವಿಚಾರಿಸುವಂತಾಗಲು ಹಝ್ರ‌ತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮಸೀದಿಯಲ್ಲಿ ಅವರಿಗಾಗಿ ಒಂದು ಡೇರೆ ಹಾಕಿದರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–3, ಪುಟ–325, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1990)

ಹಝ್ರ‌ತ್ ಆಯಿಶಾ(ರ)ವರದಿ ಮಾಡುತ್ತಾರೆ: ಹಝ್ರ‌ತ್ ಸಅದರ ಗಾಯ ಒಣಗಿ ಸರಿಯಾಗಲು ತೊಡಗಿದಾಗ ಅವರು ಹೀಗೆ ದುಆ ಮಾಡಿದರು: ಹೇ ಅಲ್ಲಾಹ್, ನಿನ್ನ ರಸೂಲನ್ನು ನಿಷೇಧಿಸಿದ ಮತ್ತು ತಮ್ಮ ಊರಿನಿಂದ ಹೊರಗೆ ಹೋಗಲು ನಿರ್ಬಂಧಿಸಿದ ಸಮುದಾಯದ ವಿರುದ್ಧ ಜಿಹಾದ್ ಮಾಡುವುದಕ್ಕಿಂತ ಪ್ರಿಯವಾದ ಬೇರೆ ಸಂಗತಿ ನನಗಿಲ್ಲವೆಂದು ನಿನಗೆ ಗೊತ್ತು. ಹೇ ಅಲ್ಲಾಹ್, ನಮ್ಮ ಮತ್ತು ಅವರ ನಡುವಿನ ಯುದ್ಧವನ್ನು ನೀನು ಮುಕ್ತಾಯಗೊಳಿಸಿರುವನು ಎಂದು ನಾನು ಭಾವಿಸುತ್ತೇನೆ. ಖುರೈಶ್‌ರೊಂದಿಗೆ ಇನ್ನು ಯುದ್ಧ ಬಾಕಿಯಿದ್ದರೆ, ನನ್ನನ್ನು ಅವರ ವಿರುದ್ಧ ಹೋರಾಡಲು ಜೀವಂತವಾಗಿರಿಸು. ಇನ್ನು ಹೆಚ್ಚಿನ ಯುದ್ಧಗಳು ಬಾಕಿಯಿದ್ದರೆ, ನಿನ್ನ ಮಾರ್ಗದಲ್ಲಿ ಅವರ ವಿರುದ್ಧ ಜಿಹಾದ್ ಮಾಡುವಂತಾಗಲು ನನ್ನನ್ನು ಜೀವಂತ ಉಳಿಸು. ಆದರೆ ನಾನು ಭಾವಿಸುವಂತೆ ನಮ್ಮ ಮತ್ತು ಅವರ ನಡುವಿನ ಯುದ್ಧ ಕೊನೆಗೊಂಡಿದೆ ಎಂದಾದರೆ, ನನ್ನ ರಕ್ತನಾಳವನ್ನು ತೆರೆದು, ನನ್ನ ಈ ಗಾಯವನ್ನು ನನ್ನ ಶಹಾದತಿನ ಮಾರ್ಗವನ್ನಾಗಿ ಮಾಡು. ಹಝ್ರ‌ತ್ ಆಯಿಶಾ(ರ)ಹೇಳುತ್ತಾರೆ, ಅದೇ ರಾತ್ರಿ ಗಾಯ ಒಡೆದುಹೋಯಿತು ಅದರಿಂದ ರಕ್ತ ಹರಿಯತೊಡಗಿತು. ಮಸ್ಜಿದ್ ನಬವಿಯಲ್ಲಿ ಬನೂ ಗ಼ಫ್ಫಾರಿನ ಜನರು ಡೇರೆ ಹಾಕಿದ್ದರು.ರಕ್ತ ಹರಿದು ಅವರ ಬಳಿಗೆ ಅದು ತಲಪಿದಾಗ ಅವರು ಹೆದರಿದರು. ನಿಮ್ಮ ಬಳಿಯಿಂದ ನಮ್ಮ ಸಮೀಪ ಬರುತ್ತಿರುವ ಈ ರಕ್ತ ಯಾರದ್ದು ಎಂದು ಜನರು ಡೇರೆಯಲ್ಲಿದವರನ್ನು ಕೇಳಿದರು. ಹಝ್ರ‌ತ್ ಸಅದ್‌ರ ಗಾಯದಿಂದ ರಕ್ತ ಹರಿಯುತ್ತಿತ್ತು ಎಂದು ಕಂಡುಬಂತು. ಅದರಿಂದಲೇ ಅವರು ಮರಣಹೊಂದಿದರು.

ಹಝ್ರ‌ತ್ ಇಬ್ನು ಅಬ್ಬಾಸ್ ವರದಿ ಮಾಡುತ್ತಾರೆ: ಹಝ್ರ‌ತ್ ಸಅದ್ ಬಿನ್ ಮಆಧ಼ರ ರಕ್ತ ಹರಿಯತೊಡಗಿದಾಗ ಹಝ್ರ‌ತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಎದ್ದು ಅವರ ಬಳಿಗೆ ಹೋದರು. ಅವರನ್ನು ತಮ್ಮ ಶರೀರದೊಂದಿಗೆ ಅಂಟಿಸಿ ಕುಳಿತುಕೊಂಡರು. ರಕ್ತ ಹಝ್ರ‌ತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮುಖ ಮತ್ತು ದಾಡಿಗೆ ತಗುಲುತ್ತಿತ್ತು. ಯಾರಾದರೂ ಹಝ್ರ‌ತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಆ ರಕ್ತದಿಂದ ದೂರವಿರಿಸಲು ಪ್ರಯತ್ನಿಸುವಾಗ ಅಂದರೆ, ರಕ್ತ ಹರಿಯುವಾಗ ಜನರು ಅದು ಪೈಗಂಬರಿಗೆ ತಗುಲದಿರಲು ಶ್ರಮಿಸುತ್ತಿದ್ದರು, ಆದರೆ ಪೈಗಂಬರರು ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರ‌ತ್ ಸಅದರ ಹತ್ತಿರ ಹತ್ತಿರ ಹೋಗುತ್ತಿದ್ದರು. ಅನಂತರ ಹಝ್ರ‌ತ್ ಸಅದ್ ಶಹೀದ್ ಆದರು.

ಇನ್ನೊಂದು ವರದಿಯಲ್ಲಿ ಹೀಗೆ ಬಂದಿದೆ ಹಝ್ರ‌ತ್ ಸಅದ್ ಬಿನ್ ಮಆಧ಼ರ ಗಾಯ ಒಡೆಯಿತು. ಇದು ತಿಳಿದಾಗ ಹಝ್ರ‌ತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರ ಬಳಿಗೆ ಹೋದರು. ಅವರ ತಲೆಯನ್ನು ತನ್ನ ಮಡಿಯಲ್ಲಿ ಇರಿಸಿದರು. ಅವರನ್ನು ಬಿಳಿ ಚಾದರದಿಂದ ಹೊದಿಸಿದರು. ಅನಂತರ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ದುಆ ಮಾಡಿದರು: ಹೇ ಅಲ್ಲಾಹ್, ಸಅದ್ ನಿನ್ನ ಮಾರ್ಗದಲ್ಲಿ ಜಿಹಾದ್ ಮಾಡಿದ, ನಿನ್ನ ರಸೂಲನ್ನು ಸತ್ಯಪಡಿಸಿದ, ಅವನ ಮೇಲಿದ್ದ ಜವಾಬ್ದಾರಿಯನ್ನು ಈಡೇರಿಸಿದ, ಆದ್ದರಿಂದ ನೀನು ಅವನ ಆತ್ಮವನ್ನು ಅವನ ಸತ್ಕರ್ಮದೊಂದಿಗೆ ಸ್ವೀಕರಿಸು. ಹಝ್ರ‌ತ್ ಸಅದರಿಗೆ ಸ್ವಲ್ಪ ಪ್ರಜ್ಞೆಯಿದ್ದಾಗ ಹಝ್ರ‌ತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಈ ದುಆವನ್ನು ಕೇಳಿದರು, ಎಂದರೆ, ಮರಣ ಸಮೀಪಿಸಿದಾಗ ಅವರು ತಮ್ಮ ಕಣ್ಣುಗಳನ್ನು ತೆರೆದು ಹೀಗೆ ಹೇಳಿದರು: ರಸೂಲಲ್ಲಾಹ್, ನಿಮ್ಮ ಮೇಲೆ ಶಾಂತಿ ಇರಲಿ, ನೀವು ಅಲ್ಲಾಹನ ರಸೂಲ್ ಎಂದು ನಾನು ಸಾಕ್ಷ್ಯವಹಿಸುತ್ತೇನೆ. ಹಝ್ರ‌ತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮಡಿಯಲ್ಲಿ ಹಝ್ರ‌ತ್ ಸಅದ್ ತಲೆಯಿರಿಸಿ ಮಲಗಿದ್ದನ್ನು ಕಂಡಾಗ ಸಅದರ ಮನೆಯವರು ಸಅದರ ಮರಣ ಸಮೀಪಿಸಿದೆ ಎಂದು ಗೊತ್ತಾಗಿ ಹೆದರಿದರು. ಸಅದರ ಮನೆಯವರು ಹಝ್ರ‌ತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮಡಿಯಲ್ಲಿ ಹಝ್ರ‌ತ್ ಸಅದ್ ತಲೆಯಿರಿಸಿ ಮಲಗಿದ್ದನ್ನು ಕಂಡು ಹೆದರಿದ ಬಗ್ಗೆ ಹಝ್ರ‌ತ್ ಪೈಗಂಬರಿಗೆ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ತಿಳಿಸಲಾದಾಗ, ಹಝ್ರ‌ತ್ ಪೈಗಂಬರ್(ಸ) ಹೇಳಿದರು: ಮನೆಯಲ್ಲಿ ಈಗ ಇರುವ ಜನರ ಅದೇ ಸಂಖ್ಯೆಯಲ್ಲಿ ಮಲಕುಗಳು ಎಂದರೆ, ದೇವದೂತರು ಹಝ್ರ‌ತ್ ಸಅದರ ಮರಣದ ಸಮಯದಲ್ಲಿ ಇರಬೇಕೆಂದು ನಾನು ಅಲ್ಲಾಹನಲ್ಲಿ ಬೇಡುತ್ತೇನೆ. ಹೀಗೆ ಅವರು ದುಆ ಮಾಡಿದರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–3, ಪುಟ–325–326, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1990)

ಹಝ್ರ‌ತ್ ಅನಸ್ ವರದಿ ಮಾಡುತ್ತಾರೆ: ಹಝ್ರ‌ತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ತೆಳುವಾದ ರೇಶ್ಮೆ ಬಟ್ಟೆಯ ಜುಬ್ಬವನ್ನು ಕೊಡುಗೆಯಾಗಿ ನೀಡಲಾಗಿತ್ತು. ಹಝ್ರ‌ತ್ ಪೈಗಂಬರ್(ಸ) ರೇಶ್ಮೆ ಬಟ್ಟೆಯನ್ನು ಧರಿಸುವುದನ್ನು ತಡೆಯುತ್ತಿದ್ದರು. ಆ ಬಟ್ಟೆಯನ್ನು ನೋಡಿ ಜನರು ಅಚ್ಚರಿಗೊಂಡರು. ಹಝ್ರ‌ತ್ ಪೈಗಂಬರ್(ಸ) ಹೇಳಿದರು: ಯಾರ ಕೈಯಲ್ಲಿ ಮುಹಮ್ಮದಿನ(ಸ) ಜೀವವಿದೆಯೋ ಅವನ ಆಣೆ ಹಾಕಿ ಹೇಳುತ್ತೇನೆ, ಸ್ವರ್ಗದಲ್ಲಿ ಸಅದ್ ಬಿನ್ ಮಆಧ಼ರ ರೂಮಾಲು ಇದಕ್ಕಿಂತ ಸುಂದರವಾಗಿರುವುದು. ಇದು ಬುಖಾ಼ರಿಯ ಹದೀಸಾಗಿದೆ. (ಸಹೀಹ್ ಬುಖಾರಿ ಕಿತಬುಲ್ ಹದಿಯ, ಹದೀಸ್–2615)

ಜನರು ಪೈಗಂಬರರ(ಸ) ಕೈಯಲ್ಲಿ ಬಟ್ಟೆಯನ್ನು ಕಂಡಾಗ, ಅದನ್ನು ಪೈಗಂಬರ್(ಸ) ಉಪಯೋಗಿಸುವರು ಎಂದು ಭಾವಿಸಿದರು. ಪೈಗಂಬರ್(ಸ)ಅದರ ಉಪಯೋಗವನ್ನು ತಡೆದಿದ್ದರು. ಹೇಗಿದ್ದರೂ, ಪೈಗಂಬರ್(ಸ) ಅದನ್ನು ತೋರಿಸಿ ಹೇಳಿದರು, ನೀವು ಇದನ್ನು ನೋಡಿ ಅಚ್ಚರಿಗೊಳ್ಳುತಿರುವಿರೋ? ಸತ್ಯದಲ್ಲಿ ಜನರು ಅಚ್ಚರಿಗೊಂಡಿದ್ದರು ಎಂದು ಮತ್ತೊಂದು ಹದೀಸಿನಿಂದ ಸ್ಪಷ್ಟವಾಗುತ್ತದೆ. ಮುಸ್ಲಿಮಿನ ಹದೀಸಿನಲ್ಲಿ ಇರುವಂತೆ. ಅದರ ವರದಿ ಹೀಗಿದೆ: ಹಝ್ರ‌ತ್ ಬರಾ ಹೇಳುತ್ತಾರೆ, ಹಝ್ರ‌ತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವಸಲ್ಲಮರಿಗೆ ಒಂದು ರೇಶ್ಮೆಯ ನಿಲುವಂಗಿ ಕೊಡುಗೆಯಾಗಿ ನೀಡಲಾಯಿತು. ಅದನ್ನು ಅವರ ಸಹಾಬಿವರ್ಯರು ಮುಟ್ಟಲು ಆರಂಭಿಸಿದರು. ಅದರ ಮೃದುತ್ವದಲ್ಲಿ ಅಚ್ಚರಿ ವ್ಯಕ್ತಪಡಿಸಿದರು. ಆಗ ಹಝ್ರ‌ತ್ ಪೈಗಂಬರ್(ಸ)ಹೇಳಿದರು: ನೀವು ಇದರ ಕೋಮಲತೆಯ ಬಗ್ಗೆ ಅಚ್ಚರಿ ಪಡುತ್ತೀರೋ? ನಿಶ್ಚಯವಾಗಿಯೂ ಸ್ವರ್ಗದಲ್ಲಿ ಸಅದ್ ಬಿನ್ ಮಆಧ಼ರ ಕರವಸ್ತ್ರ ಇದಕ್ಕಿಂತ ಉತ್ತಮ ಮತ್ತು ಮೃದುವಾಗಿದೆ. (ಸಹೀಹ್ ಮುಸ್ಲಿಮ್ ಕಿತಾಬ್ ಫಝಾಎಲುಸ್ಸಹಾಬ 2468)

ಹಝ್ರ‌ತ್ ಜಾಬಿರ್(ರ) ರಿಂದ ಹೀಗೆ ವರದಿಯಾಗಿದೆ: ನಾನು ಹಝ್ರ‌ತ್ ಪೈಗಂಬರ್ ಹೇಳಿದ್ದಾಗಿ ಕೇಳಿದ್ದೇನೆ ಅವರು ಹೇಳುತ್ತಿದ್ದರು: ಸಅದ್ ಬಿನ್ ಮಆಧ಼ರ ಮರಣದಿಂದ ಅಲ್ಲಾಹನ ಸಿಂಹಾಸನವಾದ ಅರ್ಶ್ ನಡುಗಿತು. ಇದು ಬುಖಾ಼ರಿಯ ರಿವಾಯತ್ ಆಗಿದೆ.

(ಸಹೀಹ್ ಬುಖಾರಿ ಹದೀಸ್–3803)

ಮುಸ್ಲಿಮಿನಲ್ಲಿ ಈ ರೀತಿ ಇದೆ, ಹಝ್ರ‌ತ್ ಅನಸ್ ಬಿನ್ ಮಾಲಿಕ್ ವರದಿ ಮಾಡುತ್ತಾರೆ, ಅಲ್ಲಾಹನ ಪೈಗಂಬರ್(ಸ) ಹಝ್ರ‌ತ್ ಸಅದರ ಜನಾಝ಼ಾ ಇರಿಸಲಾದಾಗ ಹೇಳಿದರು, ಈ ಕಾರಣದಿಂದ ದಯಾವಂತನಾದ ಅಲ್ಲಾಹನ ಅರ್ಶ್ ನಡುಗಿದೆ. (ಸಹೀಹ್ ಮುಸ್ಲಿಮ್ ಹದೀಸ್–2467)

ಈ ಮಾತುಗಳ ವಿಶದ ವಿವರಣೆ ಹಝ್ರ‌ತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬರು ಹೀಗೆ ಬರೆಯುತ್ತಾರೆ:

ಔಸ್ ಗೋತ್ರದ ಸರದಾರ ಹಝ್ರ‌ತ್ ಸಅದ್ ಬಿನ್ ಮಆಧ಼ರ ಮುಂಗೈಗೆ ಗಾಯ ಖಂದಕ್ ಯುದ್ಧ ವೇಳೆಯಲ್ಲಿ ಉಂಟಾಗಿತ್ತು. ಅದು ಬಹಳ ಚಿಕಿತ್ಸೆ ಮತ್ತು ಶುಶ್ರೂಷೆಯ ನಂತರವೂ ವಾಸಿಯಾಗುತ್ತಿರಲಿಲ್ಲ. ಗಾಯ ವಾಸಿಯಾಗಿ ಪುನಃ ಗಾಯವಾಗುತ್ತಿತ್ತು. ಅವರು ಒಬ್ಬ ನಿಷ್ಠಾವಂತ ಸಹಾಬಿಯಾಗಿದ್ದರು. ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಅವರ ಕ್ಷೇಮದ ಬಗ್ಗೆ ವಿಶೇಷ ಗಮನವಿತ್ತು. ಆದ್ದರಿಂದ ಪೈಗಂಬರ್(ಸ)ಖಂದಕ್ ಯುದ್ಧದಿಂದ ಮರಳುವಾಗ ಅವರ ಬಗ್ಗೆ ಹೀಗೆ ನಿರ್ದೇಶಿಸಿದರು, ಅವರನ್ನು ಮಸೀದಿಯ ಅಂಗಳದಲ್ಲೇ ಒಂದು ಡೇರೆಯಲ್ಲಿ ಇರಿಸಬೇಕು. ಹೀಗೆ ಸುಲಭವಾಗಿ ಅವರ ಕ್ಷೇಮ ಸಮಾಚಾರ ಪೈಗಂಬರ್(ಸ)ತಿಳಿಯಬಹುದಾಗಿತ್ತು. ರಫೀದ ಎಂಬ ಓರ್ವ ಮುಸ್ಲಿಮ್ ಹೆಂಗಸನ್ನು ಅಲ್ಲಿ ಇರಿಸಲಾಗಿತ್ತು. ಅವರು ರೋಗಿಗಳ ಚಿಕಿತ್ಸೆ ಮತ್ತು ಶುಶ್ರೂಷೆಯಲ್ಲಿ ಪರಿಣತಿ ಹೊಂದಿದಳು, ಆ ಡೇರೆ ರೋಗಿಗಳನ್ನು ಇರಿಸಲಾಗುವ ಡೇರೆಯಾಗಿತ್ತು. ಸಾಮಾನ್ಯವಾಗಿ ಮಸೀದಿಯ ಅಂಗಳದಲ್ಲಿ ಡೇರೆ ಹಾಕಿಸಿ ಮುಸ್ಲಿಮ್ ಗಾಯಾಳುಗಳ ಚಿಕಿತ್ಸೆ ನಡೆಸುತ್ತಿದ್ದಳು. ಆದರೆ, ಈ ಅಸಾಧಾರಣವಾದ ಶ್ರದ್ಧೆಯಿದ್ದರೂ ಸಅದ್ ರಝಿಯಲ್ಲಾಹು ಅನ್‌ಹುರ ಸ್ಥಿತಿ ಸುಧಾರಿಸುತ್ತಿರಲಿಲ್ಲ. ಈ ಸಂದರ್ಭದಲ್ಲೇ ಬನೂ ಖುರೈಝರ ಘಟನೆ

ಉಂಟಾಯಿತು. ಈ ಕಾರಣದಿಂದ ಸಅದರಿಗೆ ಅಸಾಧಾರಣವಾದ ಕಷ್ಟ ಮತ್ತು ದುಃಖ ಸಹಿಸಬೇಕಾಯಿತು.ಅವರ ದೌರ್ಬಲ್ಯ ತುಂಬಾ ವರ್ಧಿಸಿತು. ಆ ದಿನಗಳಲ್ಲೇ ಸಅದ್ ಅತ್ಯಂತ ರೋದನದೊಂದಿಗೆ ಹೀಗೆ ದುಆ ಮಾಡಿದರು: ಹೇ ನನ್ನ ನಾಥಾ, ಈ ಸಮುದಾಯದ ವಿರುದ್ಧ ನಿನ್ನ ಧರ್ಮದ ಸಂರಕ್ಷಣೆಗಾಗಿ ಜಿಹಾದ್ ಮಾಡುವ ಆಶೆ ನನ್ನ ಹೃದಯದಲ್ಲಿ ಎಷ್ಟು ತುಂಬಿದೆ ಎಂದು ನಿನಗೆ ಗೊತ್ತು, ಆ ಸಮುದಾಯ ನಿನ್ನ ಪ್ರವಾದಿಯನ್ನು ನಿಷೇಧಿಸಿದೆ, ಅವರನ್ನು ತಮ್ಮ ನಾಡಿನಿಂದ ಹೊರಕ್ಕೆ ಅಟ್ಟಿದ್ದರು. ಹೇ ನನ್ನ ಯಜಮಾನ, ನನ್ನ ಯೋಚನೆ ಪ್ರಕಾರ ಈಗ ನಮ್ಮ ಮತ್ತು ಖುರೈಶಿಗಳ ನಡುವೆ ಯುದ್ಧ ಕೊನೆಗೊಂಡಿದೆ. ಆದರೆ, ನಿನ್ನ ಅರಿವಿನಲ್ಲಿ ಈಗ ಯಾವುದಾದರೂ ಯುದ್ಧ ಬಾಕಿಯಿದ್ದರೆ, ನನಗೆ ನಿನ್ನ ಮಾರ್ಗದಲ್ಲಿ ಅವರ ವಿರುದ್ಧ ಯುದ್ಧ ಮಾಡುವ ತನಕ ಸಾವಾಕಾಶ ನೀಡು.ಆದರೆ, ಅವರೊಂದಿಗೆ ನಮ್ಮ ಯುದ್ಧ ಕೊನೆಗೊಂಡಿರುವುದಾದರೆ, ನನಗೆ ಈಗ ಜೀವಂತವಾಗಿರಲು ಆಶೆಯಿಲ್ಲ. ನನಗೆ ಈ ಶಹಾದತಿನ ಮರಣ ಹೊಂದಲು ಬಿಡು. ಅದೇ ರಾತ್ರಿ ಸಅದರ ಗಾಯ ಒಡೆಯಿತು ಮತ್ತು ರಕ್ತ ಹರಿದು ಡೇರೆಯ ಹೊರಗೆ ತನಕ ಬಂತು, ಜನರು ಹೆದರಿ ಡೇರೆಯ ಒಳಗೆ ಹೋದರು, ಸಅದರ ಸ್ಥಿತಿ ಬದಲಾಗಿತ್ತು.ಕೊನೆಗೆ ಇದೇ ಅವಸ್ಥೆಯಲ್ಲಿ ಸಅದ್ ಜೀವತ್ಯಜಿಸಿದರು.

ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಸಅದ್ ರಝಿಯಲ್ಲಾಹುರ ಮರಣದ ತೀವ್ರ ದುಃಖವುಂಟಾಯಿತು ಹಾಗೂ ಸತ್ಯವಾಗಿಯೂ ಆ ಕಾಲದ ಪರಿಸ್ಥಿತಿಗಳಂತೆ ಸಅದ್ ರಝಿಯಲ್ಲಾಹುರ ಮರಣ ಮುಸ್ಲಿಮರಿಗೆ ಒಂದು ದೊಡ್ಡ ನಷ್ಟವಾಗಿತ್ತು. ಮುಹಾಜಿರುಗಳ ಎಡೆಯಲ್ಲಿ ಹಝ್ರತ್ ಅಬೂಬಕ್ಕರ್‌ರಿಗೆ(ರ) ಇದ್ದ ಹೆಚ್ಚು ಕಮ್ಮಿ ಅದೇ ಸ್ಥಾನ ಸಅದರಿಗೆ(ರ) ಅನ್ಸಾರುಗಳ ಎಡೆಯಲ್ಲಿ ಇತ್ತು. ಪ್ರಾಮಾಣಿಕತೆಯಲ್ಲಿ, ತ್ಯಾಗದಲ್ಲಿ, ಇಸ್ಲಾಮಿನ ಸೇವೆಯಲ್ಲಿ, ಪ್ರವಾದಿಯೊಂದಿಗಿನ ಪ್ರೇಮದಲ್ಲಿ, ಎಂತಹ ಉನ್ನತ ಸ್ಥಾನವನ್ನು ಹೊಂದಿದ್ದರೂ ಎಂದರೆ, ಬಹಳ ಕಡಿಮೆ ಜನರಿಗೆ ಅಂತಹ ಸ್ಥಾನವಿತ್ತು. ಅವರ ಪ್ರತಿಯೊಂದು ಚಲನೆವಲನದಿಂದ ಇಸ್ಲಾಮಿನ ಮತ್ತು ಇಸ್ಲಾಮಿನ ಸ್ಥಾಪಕರೊಂದಿಗೆ ಇರುವ ಪ್ರೀತಿ ಹೊರಹೊಮ್ಮುತ್ತಿತ್ತು, ಅದು ಅವರ ಆತ್ಮದ ಆಹಾರವಾಗಿತ್ತು.ಅವರು ತಮ್ಮ ಗೋತ್ರದ ಸರದಾರರಾಗಿದ್ದ ಕಾರಣ ಅವರ ಮಾದರಿ ಅನ್ಸಾರುಗಳ ಎಡೆಯಲ್ಲಿ ಪ್ರಬಲವಾದ ಪ್ರಭಾವ ಬೀರುತ್ತಿತ್ತು, ಇಂತಹ ಯೋಗ್ಯ ಆಧ್ಯಾತ್ಮಿಕ ಮಗನ ಮರಣದಿಂದ ಹಝ್ರತ್ ಪೈಗಂಬರ್(ಸ) ದುಃಖಿತರಾದದ್ದು ಸಹಜವಾಗಿತ್ತು. ಆದರೆ ಪೈಗಂಬರ್(ಸ) ಪರಿಪೂರ್ಣ ಸಹನೆಯಿಂದ ಇದ್ದರು. ಅಲ್ಲಾಹನ ಇಚ್ಛೆಯ ಮುಂದೆ ಸಮ್ಮತಿ ಮತ್ತು ತೃಪ್ತಿಯಿಂದ ತಲೆ ತಗ್ಗಿಸಿದರು.

ಸಅದರ(ರ) ಜನಾಝು ಎತ್ತಲ್ಪಟ್ಟಾಗ ಸಅದರ(ರ) ವೃದ್ಧ ತಾಯಿ ಸ್ನೇಹದ ಕಾರಣದಿಂದ ಸ್ವಲ್ಪ ಉಚ್ಚ ಸ್ವರದಲ್ಲಿವಿಲಾಪಿಸಿದರು ಮತ್ತು ಆ ಪ್ರಲಾಪದಲ್ಲಿ ಆ ಕಾಲದ ರೀತಿಯಂತೆ ಸಅದರ(ರ)ಕೆಲವು ಒಳಿತುಗಳನ್ನು ಹೇಳಿದರು. ಪೈಗಂಬರ್(ಸ) ಈ ಗೋಳಾಟದ ಶಬ್ದವನ್ನು ಕೇಳಿದರು. ಪೈಗಂಬರ್ ಸಲ್ಲಲ್ಲಾಹು ಅಲೈಹಿವಸಲ್ಲಮರಿಗೆ ವಿಲಾಪ ಮಾಡುವುದು ಸಾಮಾನ್ಯವಾಗಿ ಇಷ್ಟವಿಲ್ಲದಿದ್ದರೂ ಹೀಗೆ ಹೇಳಿದರು: ವಿಲಾಪ ಮಾಡುವವರು ಬಹಳ ಸುಳ್ಳು ಹೇಳುತ್ತಾರೆ, ಆದರೆ ಈಗ ಸಅದರ ತಾಯಿ ಹೇಳಿದ್ದೆಲ್ಲ ಸತ್ಯವೇ ಆಗಿದೆ. ಎಂದರೆ ಸಅದಿನ ಕುರಿತು ಹೇಳಲಾದ ಒಳಿತುಗಳೆಲ್ಲ ಸರಿಯೇ ಆಗಿದೆ.ಅದರ ನಂತರ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಜನಾಝು ನಮಾಝ್ ನಿರ್ವಹಿಸಿದರು. ದಫನ್ ಮಾಡಲು ಸ್ವತಃ ಎಲ್ಲರೊಂದಿಗೆ ಹೋದರು. ಖಬರ್ ತಯಾರಾಗುವ ತನಕ ಅಲ್ಲಿಯೇ ನಿಂತರು.ಕೊನೆಗೆ ದುಆ ಮಾಡಿದ ನಂತರ ಅಲ್ಲಿಂದ ಹೊರಟು ಹೋದರು.

ಬಹುಶಃ ಇದೇ ವೇಳೆ ಒಂದು ಸಂದರ್ಭದಲ್ಲಿ ಪೈಗಂಬರ್(ಸ) ಹೇಳಿದರು: **ಇಹ್ತಜ್ಜ ಅರ್ಶುರ್ರಹ್ಮಾನು ಲಿಮೌತಿ ಸಅದ್**. ಎಂದರೆ ಸಅದರ(ರ) ಮರಣದಿಂದ ದಯಾವಂತನಾದ ಅಲ್ಲಾಹನ ಅರ್ಶ್ ಕುಣಿದಾಡುತ್ತಿದೆ. ಇತರರು ನಡುಗಿತು ಎಂಬಿತ್ಯಾದಿ ಅರ್ಥವನ್ನುಹೇಳಿರುವರು. ಇಲ್ಲಿ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬರು ಕುಣಿದಾಡುತ್ತಿದೆ ಎಂದು ಹೇಳಿರುವರು. ಎಂದರೆ ಪರಲೋಕದಲ್ಲಿ ದೇವನ ಕಾರುಣ್ಯವು ಖುಶಿಯಿಂದ ಸಅದರ(ರ) ಆತ್ಮವನ್ನು ಸ್ವಾಗತಿಸುವುದು. ಅರ್ಶಿನ ಕುಣಿದಾಡುವಿಕೆಯಿಂದ ಇದಾಗಿದೆ ಅರ್ಥ. ಸ್ವಲ್ಪ ಕಾಲದ ನಂತರ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಸ್ವಲ್ಪ ರೇಶ್ಮೆಯ ಚಾದರುಗಳು ಇನಾಮಾಗಿ ಲಭಿಸಿತು. ಕೆಲವು ಸಹಾಬಿವರ್ಯರು ಅವುಗಳನ್ನು ನೋಡಿ ಅದರ ಕೋಮಲತೆ ಮತ್ತು ಮೃದುತ್ವದ ಬಗ್ಗೆ ಅಚ್ಚರಿಯಿಂದ ಪ್ರಸ್ತಾಪಿಸಿದರು ಮತ್ತು ಅದನ್ನು ಅಸಾಮಾನ್ಯವಾದ ವಸ್ತುವೆಂದು ಭಾವಿಸಿದರು. ಆಗ ಪೈಗಂಬರ್(ಸ) ಹೇಳಿದರು. ನೀವು ಇದರ ಕೋಮಲತೆ ಬಗ್ಗೆ ಅಚ್ಚರಿಗೊಂಡಿರುವಿರೋ? ಅಲ್ಲಾಹನಾಣೆ ಸ್ವರ್ಗದಲ್ಲಿ ಸಅದಿನ ಚಾದರ ಇದಕ್ಕಿಂತ ಮೃದು ಮತ್ತು ಅತ್ಯುತ್ತಮವಾಗಿರುವುದು. (ಸೀರತ್ ಖಾತುಮುನ್ನಬೀಯೀನ್, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್, ಪುಟ–613–614)

ಬುಖಾರಿ ಮತ್ತು ಮುಸ್ಲಿಮಿನ ಹದೀಸುಗಳಲ್ಲಿ ರೂಮಾಲು ಎಂದು ಹೇಳಲಾಗಿದೆ. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬರು(ರ) ಇಲ್ಲಿ ಚಾದರ ಎಂದು ತರ್ಜುಮೆ ಮಾಡಿರುವರು. ಹೇಗಿದ್ದರೂ ಅರಬಿಯ ಪದದ ಪ್ರಕಾರ ಇಲ್ಲಿ ಪ್ರಯೋಗಿಸಿದ ಪದ ಬಟ್ಟೆಗೆ ಹೇಳಲಾಗುತ್ತದೆ.

ಹಝ್ರತ್ ಸಅದರ(ರ) ತಾಯಿ ಅವರ ದುಃಖದಲ್ಲಿ ಈ ಪದ್ಯವನ್ನು ಹಾಡುತ್ತಿದ್ದರು:

**ವೈಲುನ್ ಉಮ್ಮು ಸಅದಿನ್ ಸಅದ, ಬರಾಅತನ್ ವಜದ,**<br>
**ಬಅದ ಅಯಾದು ಲಹು ವ ಮಜ್‌ದ, ಮುಕದ್ದಿಮನ್ ಸದ್ದ ಬಿಹಿ ಮಸದ್ದ.**

ಅಂದರೆ, ಸಅದಿನ ತಾಯಿಗೆ ಸಅದಿನ ಬೇರ್ಪಡೆಯಿಂದ ದುಃಖವುಂಟಾಗಿದೆ. ಅವರು ಬುದ್ಧಿವಂತಿಕೆ ಮತ್ತು ಸಾಹಸದ ರೂಪವಾಗಿದ್ದರು. ಅವರು ಶೌರ್ಯ ಮತ್ತು ಸಜ್ಜನಿಕೆಯ ಮೂರ್ತಿಭಾವವಾಗಿದ್ದರು. ಈ ಖುತುಕಾಲದ ಶ್ರೇಷ್ಠತೆ ಬಗ್ಗೆ ಏನು ಹೇಳಲಿ, ಅವರು ಎಲ್ಲ ಖಾಲಿ ಸ್ಥಳವನ್ನು ಭರ್ತಿ ಮಾಡುವ ಸರದಾರರಾಗಿದ್ದರು. ಆಗ ಪೈಗಂಬರ್(ಸ) ಹೇಳಿದರು:

**ಕುಲ್ಲುಲ್ ಬವಾಕಿ ಯಕ್ಝಿಬ್‌ನ ಇಲ್ಲ ಉಮ್ಮು ಸಅದ್.**

ಅಂದರೆ ಯಾವುದೇ ಮರಣಹೊಂದುವವರ ಬಗ್ಗೆ ಹೆಂಗಸರು ಸುಳ್ಳು ಹೇಳುತ್ತಾ ಅಳುತ್ತಾರೆ. ಅನಾವಶ್ಯವಾದ ಅತಿಶಯೋಕ್ತಿ ಮಾತನ್ನು ಆಡುತ್ತಾರೆ. ಸಅದಿನ ಮಾತೆಯ ಹೊರತು. ಇದು ತಬ್ಖಾತುಲ್ ಕುಬ್ರದ ಉಲ್ಲೇಖವಾಗಿದೆ. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್ ಭಾಗ–3, ಪುಟ–328, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1990)

ಹಝ್ರತ್ ಸಅದ್(ರ) ಭಾರವುಳ್ಳ ವ್ಯಕ್ತಿಯಾಗಿದ್ದರು. ಅವರು ಜನಾಝು ಎತ್ತಲ್ಪಟ್ಟಾಗ ಮುನಾಫಿಕೀನ್ ಹೇಳಿದರು: ನಾವು ಯಾವುದೇ ವ್ಯಕ್ತಿಯ ಜನಾಝು ಸಅದರಷ್ಟು ಹಗುರವಾಗಿ ನೋಡಿಲ್ಲ. ಇದು ಬನೂ ಖುರೈಝರ ಬಗ್ಗೆ ನೀಡಿದ ತೀರ್ಪಿನ ಕಾರಣದಿಂದ ಆಯಿತು ಎಂದುಹೇಳುತ್ತಿದ್ದರು. ಎಂದರೆ, ಅದನ್ನು ನಕಾರಾತ್ಮಕವಾಗಿ ಬಣ್ಣಿಸುತ್ತಿದ್ದರು. ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಇದರ ಬಗ್ಗೆ ತಿಳಿಸಲಾದಾಗ ಅವರು ಹೇಳಿದರು: ಯಾರ ಕೈಯಲ್ಲಿ ನನ್ನ ಜೀವವಿದೆಯೋ ಅವನ ಆಣೆ ಹಾಕಿ ಹೇಳುತ್ತೇನೆ, ಸಅದರ ಜನಾಝು ನಿಮಗೆ ಹಗುರವಾಗಿ ತೋರಲು ಕಾರಣವೇನೆಂದರೆ, ಸಅದರ ಜನಾಝುವನ್ನು ದೇವದೂತರು ಎತ್ತಿರುವರು, ಇನ್ನೊಂದು ವರದಿಯ ಪ್ರಕಾರ ಪೈಗಂಬರ್(ಸ) ಹೇಳಿದರು: ಎಪ್ಪತ್ತು ಸಾವಿರ ದೇವದೂತರು ಸಅದ್ ಬಿನ್ ಮಆಧ್‌ರಜನಾಝುದಲ್ಲಿ ಹಾಜರಿರುವರು. ಅಷ್ಟು ಇಂದಿಗಿಂತ ಮುಂಚೆ ಎಂದೂ ಭೂಮಿಯಲ್ಲಿ ಇಳಿದಿರಲಿಲ್ಲ. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–3, ಪುಟ–328, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1990) (ಉಸದುಲ್ ಗಾಬ ಫೀ ಮಾರಿಫತಿಸ್ಸಹಾಬ ಸಂಪುಟ–2, ಪುಟ–464, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2003)

ಹಝ್ರತ್ ಆಯಿಶಾ(ರ) ವರದಿ ಮಾಡುತ್ತಾರೆ: ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನುಹಝ್ರತ್ ಸಅದ್ ಬಿನ್ ಮಆಧ್‌ರ ಜನಾಝುದ ಮುಂದೆ ಮುಂದೆ ಹೋಗುವುದಾಗಿ ನೋಡಿದೆ.

(ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–3, ಪುಟ–329, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1990)

ಹಝ್ರತ್ ಅಬು ಸಈದ್ ಖುದ್‌ರಿ ಹೇಳುತ್ತಾರೆ: ಜನ್ನತುಲ್ ಬಖೀಯಲ್ಲಿ ಸಅದ್ ಬಿನ್ ಮಆಧಿಗಾಗಿ ಖಬರ್ ಅಗೆದ ಜನರಲ್ಲಿ ನಾನೂ ಸೇರಿದ್ದೆ, ನಾವು ಮಣ್ಣಿನ ಯಾವುದಾದರೂ ಭಾಗವನ್ನು ಅಗೆಯುವಾಗ ಕಸ್ತೂರಿಯ ಸುಗಂಧ ಬರುತ್ತಿತ್ತು, ಹೀಗೆ ನಾವು ಗೋರಿ ತನಕ ತಲುಪಿದುವು. ನಾವು ಖಬರ್ ತೋಡಿದ ನಂತರ ಪೈಗಂಬರ್(ಸ) ಅಲ್ಲಿಗೆ ಬಂದರು. ಹಝ್ರತ್ ಸಅದ್ ಬಿನ್ ಮಆಧ್‌ರ(ರ) ಜನಾಝು ಗೋರಿಯ ಬಳಿ ಇರಿಸಲಾಯಿತು. ಅನಂತರ ಪೈಗಂಬರ್(ಸ) ಜನಾಝು ನಮಾಝ್ ನಿರ್ವಹಿಸಿದರು. ಜನ್ನತುಲ್ ಬಖೀ ಜನರಿಂದ ತುಂಬುವಷ್ಟು ಹೆಚ್ಚಿನ ಜನರನ್ನು ಅಲ್ಲಿ ನಾನು ನೋಡಿದೆ ಎಂದು ವರದಿಗಾರ ಹೇಳುತ್ತಾರೆ. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–3, ಪುಟ–329–330, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1990)

ಅಬ್ದುರ್ರಹ್ಮಾನ್ ಜಾಬಿರ್ ತನ್ನ ತಂದೆಯಿಂದ ವರದಿ ಮಾಡುತ್ತಾರೆ: ಹಝ್ರತ್ ಸಅದರ ಗೋರಿ ತಯಾರಾದಾಗ ನಾಲ್ಕು ಜನರು, ಹಾರಿಸ್ ಬಿನ್ ಔಸ್, ಉಸೈದ್ ಬಿನ್ ಹಝೀರ್, ಅಬೂನಾಯಿಲ, ಸುಲ್ತಾನ್ ಇಬ್ನ್ ಸಲಾಮ ಮತ್ತು ಸಲ್ಮ ಬಿನ್ ವಖ್ಶ್ ಹಝ್ರತ್ ಸಅದರ(ರ) ಗೋರಿಗೆ ಇಳಿದರು. ಪೈಗಂಬರ್(ಸ) ಹಝ್ರತ್ ಸಅದರ(ರ) ಕಾಲಿನ ಭಾಗದಲ್ಲಿ ನಿಂತಿದರು. ಹಝ್ರತ್ ಸಅದರನ್ನು(ರ) ಖಬರಿಗೆ ಇಳಿಸಲಾದಾಗ ಪೈಗಂಬರರ(ಸ) ಮುಖದ ವರ್ಣ ಬದಲಾಯಿತು. ಪೈಗಂಬರ್(ಸ) ಮೂರು ಸಲ ಸುಬ್ಹಾನಲ್ಲಾಹ್ ಎಂದು ಹೇಳಿದರು. ಅವರೊಂದಿಗೆ ಎಲ್ಲ ಸಹಾಬಿವರ್ಯರೂ ಮೂರು ಸಲ

ಸುಬ್ಹಾನಲ್ಲಾಹ್ ಎಂದು ಹೇಳಿದರು. ಇದರಿಂದ ಜನ್ನತುಲ್ ಬಖೀ ಪ್ರತಿಧ್ವನಿಸಿತು. ಅನಂತರ ಪೈಗಂಬರ್(ಸ) ಮೂರು ಸಲ ಅಲ್ಲಾಹು ಅಕ್ಬರ್ ಎಂದು ಹೇಳಿದರು. ಅವರೊಂದಿಗೆ ಎಲ್ಲ ಸಹಾಬಿವರ್ಯರು ಮೂರು ಸಲ ಅಲ್ಲಾಹು ಅಕ್ಬರ್ ಎಂದು ಹೇಳಿದರು. ಇದರಿಂದ ಜನ್ನತುಲ್ ಬಖೀ ಅಲ್ಲಾಹು ಅಕ್ಬರ್‌ನಿಂದ ಪ್ರತಿಧ್ವನಿಸಿತು. ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಡನೆ ಕೇಳಲಾಯಿತು: ಹೇ ರಸೂಲಲ್ಲಾಹ್, ನಾವು ನಿಮ್ಮ ಮುಖದ ಬದಲಾವಣೆಯನ್ನು ಕಂಡೆವು ಮತ್ತು ತಾವು ಮೂರು ಸಲ ಸುಬ್‌ಹಾನಲ್ಲಾಹ್ ಎಂದು ಹೇಳಿದ್ದಿರಿ. ಇದರ ಕಾರಣವೇನು? ಪೈಗಂಬರ್(ಸ) ಹೇಳಿದರು: ಸಅದರಿಗೆ ಖಬರ್ ಸಂಕುಚಿತಗೊಂಡಿತು. ಅವರ ಮೇಲೆ ಅದು ಬಿಗುವಾಯಿತು. ಅದರಿಂದ ಯಾರಿಗಾದರೂ ಮೋಕ್ಷ ಲಭಿಸುತ್ತಿದ್ದರೆ ಸಅದರಿಗೆ ಖಂಡಿತ ಲಭಿಸುತ್ತಿತ್ತು. ಆನಂತರ ಅಲ್ಲಾಹನು ಅವರಿಗೆ ಅದನ್ನು ವಿಶಾಲ ಮಾಡಿಕೊಟ್ಟನು.
(ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–3, ಪುಟ–330, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1990)

ಮಿಸ್‌ವರ್ ಬಿನ್ ರಫಅ್ ಖುರ್ರಝಿ ಹೇಳುತ್ತಾರೆ: ಸಅದರ(ರ) ತಾಯಿ ಅವರನ್ನು ಗೋರಿಯಲ್ಲಿ ಇಳಿಸಲು ಬಂದರು. ಜನರು ಅವರನ್ನು ವಾಪಸ್ಸು ಕಳುಹಿಸಿದರು. ಪೈಗಂಬರ್(ಸ) ಹೇಳಿದರು ಅವರನ್ನು ಬರಲು ಬಿಡಿರಿ. ಅವರು ಬಂದರು ಮತ್ತು ಖಬರಿನಲ್ಲಿ ಕಲ್ಲು ಮತ್ತು ಮಣ್ಣು ಹಾಕುವುದಕ್ಕೆ ಮುಂಚೆ ಗೋರಿಯಲ್ಲಿ ಸಅದರನ್ನು ಕಂಡರು. ಅವರು ಹೀಗೆ ಹೇಳಿದರು: ನೀನು ಅಲ್ಲಾಹನ ಸಮೀಪವಿರುವೆ ಎಂದು ನನಗೆ ನಿಶ್ಚಯವಾಗಿಯೂ ಗೊತ್ತಿದೆ. ಪೈಗಂಬರ್(ಸ) ಸಅದರ ಖಬರಿನ ಹತ್ತಿರ ಅವರ ತಾಯಿಗೆ ಸಂತಾಪವನ್ನು ಸೂಚಿಸಿ ಒಂದು ಕಡೆ ಕುಳಿತುಕೊಂಡರು. ಮುಸ್ಲಿಮರು ಖಬರಿಗೆ ಮಣ್ಣು ಹಾಕಿ ಅದನ್ನು ಸರಿಪಡಿಸಿದರು ಮತ್ತು ಅದರ ಮೇಲೆ ನೀರನ್ನು ಸಿಂಪಡಿಸಿದರು. ಪೈಗಂಬರ್(ಸ) ಖಬರಿನ ಹತ್ತಿರ ಹೋಗಿ ಸ್ವಲ್ಪ ಸಮಯ ಅಲ್ಲಿ ನಿಂತರು ಮತ್ತು ದುಆ ಮಾಡಿ ಮರಳಿಹೋದರು.

ಹಝ್ರತ್ ಆಯಿಶಾ(ರ)ವರದಿ ಮಾಡುತ್ತಾರೆ: ಪೈಗಂಬರ್(ಸ) ಮತ್ತು ಅವರ ಎರಡು ಸಂಗಡಿಗರಾದ ಹಝ್ರತ್ ಅಬೂಬಕ್ಕರ್(ರ) ಮತ್ತು ಹಝ್ರತ್ ಉಮರಿನ(ರ) ನಂತರ ಮುಸ್ಲಿಮರಿಗೆ ಯಾರ ಅಗಲುವಿಕೆ ಸಅದರ(ರ) ಅಗಲುವಿಕೆಯಷ್ಟು ದುಃಖದಾಯಕವಾಗಿರಲಿಲ್ಲ. ಮರಣ ಸಮಯದಲ್ಲಿ ಸಅದರ(ರ) ವಯಸ್ಸು 37 ಆಗಿತ್ತು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–3, ಪುಟ–330–331, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1990)

ಪೈಗಂಬರ್(ಸ) ಸಅದರ(ರ) ತಾಯಿಯೊಂದಿಗೆ ಹೇಳಿದರು: ನಿಮ್ಮ ದುಃಖ ಕೊನೆಗೊಳ್ಳುವುದಿಲ್ಲವೇ ಮತ್ತು ನಿನ್ನ ಕಣ್ಣೀರು ಸುರಿಸುವುದು ನಿಲ್ಲುವುದಿಲ್ಲವೇ? ನಿನ್ನ ಮಗ ಮೊದಲ ವ್ಯಕ್ತಿಯಾಗಿದ್ದಾನೆ ಯಾರ ಮೇಲೆ ಅಲ್ಲಾಹನು ಮುಗುಳ್ನಕ್ಕನು. ಅವರಿಗಾಗಿ ಅರ್ಶ್ ನಡುಗಿತು.
(ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–3, ಪುಟ–332, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1990)

ಪೈಗಂಬರ್(ಸ) ಸಅದರನ್ನು ದಫನ್ ಮಾಡಿ ಮತ್ತು ಅವರ ಜನಾಝಾದಿಂದ ಮರಳಿ ಬಂದಾಗ ಅವರ ಕಣ್ಣೀರು ಅವರ ದಾಡಿಯ ಮೇಲೆ ಹರಿಯುತ್ತಿತ್ತು. (ಉಸದುಲ್‌ಗಾಬ ಫೀ ಮಾರಿಫತಿಸ್ಸಹಾಬ ಸಂಪುಟ–2, ಪುಟ–463, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2003)

ಹಝ್ರತ್ ಸಅದ್(ರ) ಹೇಳುತ್ತಾರೆ: ನಾನು ನಿಸ್ಸಂಶಯವಾಗಿಯೂ ಬಲಹೀನನಾಗಿರುವವನು. ಇದು ಸಅದಿಗೆ(ರ) ಸಂಬಂಧಿಸಿ ಒಂದು ವರದಿಯಾಗಿದೆ. ಅವರು ಹೇಳುತ್ತಾರೆ: ನಾನು ನಿಸ್ಸಂಶಯವಾಗಿಯೂ ದುರ್ಬಲನಾಗಿರುವವನು, ಆದರೆ ಮೂರು ಸಂಗತಿಗಳಲ್ಲಿ ನಾನು ಗಟ್ಟಿ ಇರುವೆನು. ಅವರು ಹೇಳಿದ ಮಾತುಗಳೇನೆಂದರೆ, ನಾನು ಬಹಳ ದುರ್ಬಲನಾಗಿರುವವನು. ಆದರೆ ಈ ಮೂರು ಸಂಗತಿಗಳು ನನ್ನೊಳಗೆ ತುಂಬಾ ಗಟ್ಟಿಯಾಗಿವೆ ಮತ್ತು ನಾನು ಅವುಗಳಂತೆ ನಡೆಯುತ್ತೇನೆ. ಮೊದಲ ಸಂಗತಿಯೇನೆಂದರೆ, ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಂದ ನಾನು ಏನನ್ನು ಕೇಳಿರುವೆನೋ ಅವುಗಳನ್ನು ಸತ್ಯವೆಂದು ತಿಳಿದಿದ್ದೇನೆ, ಅವುಗಳ ಬಗ್ಗೆ ಯಾವುದೇ ಸಂಶಯ ಅವರಿಗೆ ಉಂಟಾಗಿಲ್ಲ, ಎರಡನೆಯ ಸಂಗತಿಯೇನೆಂದರೆ ನನ್ನ ನಮಾಜಿನಲ್ಲಿ ನಮಾಜ್ ಹೊರತು ಬೇರೆ ಚಿಂತೆ ಬರಲು ನಾನು ಬಿಡುವುದಿಲ್ಲ, ನಮಾಜ್ ಮುಕ್ತಾಯಗೊಳಿಸುವ ವರೆಗೆ. ಅಂದರೆ ಬಹಳ ಶ್ರದ್ಧೆಯಿಂದ ನಮಾಜ್ ನಿರ್ವಹಿಸುತ್ತಿದ್ದರು. ಮೂರನೇ ಸಂಗತಿಯೇನೆಂದರೆ ಜನಾಝ ಮುಂದೆ ಬರುವಾಗ ನಾನು ನನ್ನನ್ನು ಅದರ ಸ್ಥಾನದಲ್ಲಿ ಮೃತನಾಗಿ ಭಾವಿಸಿ ಅದರೊಂದಿಗೆ ಏನನ್ನು ಕೇಳಲಾಗುವುದು ಎಂದು ಯೋಚಿಸುತ್ತೇನೆ. ಎಂದರೆ ಆ ಪ್ರಶ್ನೆ ಉತ್ತರಗಳು ನನ್ನೊಡನೆ ಆಗುತ್ತಿವೆ ಎಂದು ಭಾವಿಸುತ್ತೇನೆ. ಪರಲೋಕದ ಬಗ್ಗೆ ಅವರಿಗೆ ಚಿಂತೆ ಇತ್ತು.

(ಮಜ್ಮಅಝ್ಝವಾಎದ್ ಕಿತಾಬುಲ್ ಮನಾಖಿಬ್, ಹದೀಸ್–15689, ಸಂಪುಟ–9, ಪುಟ–375, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ಹಝ್ರತ್ ಆಯಿಶಾ(ರ) ಹೇಳುತ್ತಾರೆ: ಅನ್ಸಾರಿನ ಮೂರು ವ್ಯಕ್ತಿಗಳಿದ್ದರು ಅವರೆಲ್ಲಬನೂ ಅಬ್ದುಲ್ ಅಶ್‌ಅಲ್‌ನಿಂದವರಾಗಿದ್ದರು. ಪೈಗಂಬರ(ಸ) ನಂತರ ಯಾರಿಗೂ ಅವರ ಮೇಲೆ ಶ್ರೇಛ್ಠತೆಯನ್ನು ನೀಡಲಾಗುತ್ತಿರಲಿಲ್ಲ. ಅವರು ಹೆಸರು ಹೀಗೆ: ಸಅದ್ ಬಿನ್ ಮಆಧ್, ಹಝ್ರತ್ ಉಸೈದ್ ಬಿನ್ ಹುಝೈರ್, ಹಝ್ರತ್ ಅಬಾದ್ ಬಿನ್ ಬಶರ್.
(ಅಲ್‌ಅಸಾಬ ಫೀ ತಮೀಝಿಸ್ಸಹಾಬ ಲಿಇಬ್ನೆ ಹಜರ್ ಅಸ್‌ಖಲಾನಿ ಸಂಪುಟ–3, ಪುಟ–71, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1995)

ಇನ್ನು ಪ್ರಸ್ತಾಪಿಸಲಾಗುವ ಸಹಾಬಿಯ ಹೆಸರು ಹಝ್ರತ್ ಸಅದ್ ಬಿನ್ ಅಬೀ ವಖಾಸ್(ರ) ಹಝ್ರತ್ ಸಅದರ(ರ) ಕುಲನಾಮ ಅಬೂ ಇಸ್‌ಹಾಖ್ ಎಂದಾಗಿತ್ತು. ಅವರ ತಂದೆ ಹೆಸರು ಮಾಲಿಕ ಬಿನ್ ಉಹೈಬ್, ಕೆಲವು ವರದಿಗಳಲ್ಲಿ ಮಾಲಿಕ್ ಇಬ್ನ್ ವಹೈಬ್ ಎಂದೂ ಹೇಳಲಾಗಿದೆ. ಅವರ ತಂದೆ ತಮ್ಮ ಕುಲನಾಮ ಅಬೂ ವಖಾಸ್ ಎಂಬ ಹೆಸರಲ್ಲಿ ಪ್ರಸಿದ್ದರಾಗಿದ್ದರು. ಆದ್ದರಿಂದ ಅವರ ಹೆಸರು ಸಅದ್ ಬಿನ್ ಅಬೀ ವಖಾಸ್ ಎಂದು ಹೇಳಲಾಗಿದೆ. ಅವರ ತಾಯಿಯ ಹೆಸರು ಹಮ್‌ನ ಬಿನ್ತ್ ಸುಫ್‌ಯಾನ್ ಎಂದಾಗಿತ್ತು. (ಅಲ್‌ಇಸ್ತಿಯಾಬ್ ಫೀ ಮಾರಿಫತಿಲ್ ಅಸ್‌ಹಾಬ್, ಭಾಗ–2, ಪುಟ–606–607, ದಾರುಲ್ ಜೀಲ್ ಬೈರೂತ್) (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್ ಭಾಗ–3, ಪುಟ–101, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1990)

ಹಝ್ರತ್ ಸಅದ್ ಬಿನ್ ಅಬಿ ವಖಾಸರ ಸಂಬಂಧ ಖುರೈಶಿನ ಗೋತ್ರವಾದ ಬನೂ ಝುಹ್‌ರಾದೊಂದಿಗೆ ಆಗಿತ್ತು. (ಸೀರ'ತ್ ಖಾತುಮುನ್ನಬೀಯೀನ್, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ–123) (ಸೀರತ್ ಇಬ್ನೆ ಹಿಶ್ಶಾಮ್ ಸಂಪುಟ–1, ಪುಟ–680–681, ಮಕ್‌ತಬ ಮುಸ್ತಫಲ್‌ಬಾಬಿ ಅಲ್‌ಹಲ್‌ಬಿ ಮಿಸರ್ 1955)

ಪೈಗಂಬರ್(ಸ) ತಮ್ಮ ಜೀವಿತ ಕಾಲದಲ್ಲಿ ಸ್ವರ್ಗದ ಸುವಾರ್ತೆ ನೀಡಲ್ಪಟ್ಟ ಹತ್ತು ಸೌಭಾಗ್ಯವಂತರಲ್ಲಿ ಹಝ್ರತ್ ಸಅದ್ ಬಿನ್ ಅಬೀ ವಖಾಸ್ ಸೇರುತ್ತಾರೆ. ಆ ಹತ್ತು ಸಹಾಬಿವರ್ಯರನ್ನು ಅಶ್ರ ಮುಬಶ್ಶಿರ ಎಂದು ಹೇಳಲಾಗುತ್ತದೆ. ಹಝ್ರತ್ ಸಅದ್ ಬಿನ್ ಅಬೀ ವಖಾಸ್(ರ) ಅವರಲ್ಲಿ ಕೊನೆಯದಾಗಿ ಮರಣಹೊಂದಿದವರಾಗಿದ್ದರು. (ಅಲ್‌ಅಸಾಬ ಫೀ ತಮೀಝೀಸ್ಸಹಾಬ ಭಾಗ–2, ಪುಟ–324, ದಾರುಲ್ ಫಿಕರ್ ಬೈರೂತ್ ಲೆಬನಾನ್ 2001)

ಈ ಎಲ್ಲ ಅಶ್ರ ಮುಬಶ್ಶಿರ ಸಹಾಬಿಗಳು ಮುಹಾಜಿರ್‌ಗಳಿಂದಾಗಿತ್ತು. (ಎಂದರೆ ಮಕ್ಕದಿಂದ ಮದೀನಕ್ಕೆ ಬಂದವರು.) ಪೈಗಂಬರ್(ಸ) ತಮ್ಮ ಮರಣದ ಸಮಯದಲ್ಲಿ, ಅವರಲ್ಲಿ ಸಂಪ್ರೀತರಾಗಿದ್ದರು.

ಹಝ್ರತ್ ಸಅದ್ ಬಿನ್ ಅಬೀ ವಖಾಸ್(ರ) ತನ್ನ ಸತ್ಯವಿಶ್ವಾಸ ಕೈಗೊಂಡ ಬಗ್ಗೆ ಹೇಳುತ್ತಾರೆ: ಯಾರೂ ಇಸ್ಲಾಮ್ ಧರ್ಮವನ್ನು ಸ್ವೀಕರಿಸಿರಲಿಲ್ಲ. ಆದರೆ ನಾನು ಆ ದಿವಸ ಇಸ್ಲಾಮ್ ಸ್ವೀಕರಿಸಿದೆ. ನಾನು ಏಳು ದಿನಗಳು ಕಾದುನಿಂತೆ. ಪರಿಸ್ಥಿತಿ ಏನಾಗಿತ್ತೆಂದರೆ, ನಾನು ಮುಸ್ಲಿಮರ ಮೂರರಲ್ಲಿ ಒಂದು ಭಾಗವಾಗಿದ್ದೆ. (ಸಹೀಹ್ ಬುಖಾರಿ ಕಿತಾಬ್ ಫಝಾಎಲ್ ಅಸ್‌ಹಾಬುನ್ನಬಿ(ಸ) ಬಾಬ್ ಮನಾಖಿಬ್ ಸಅದ್ ಬಿನ್ ಅಬಿ ವಖ್ಖಾಸ್ ಹದೀಸ್–3727) (ಸಹೀಹ್ ಬುಖಾರಿ ಕಿತಾಬ್ ಮನಾಖಿಬ್ ಅನ್ಸಾರ್ ಬಾಬ್ ಇಸ್ಲಾಮ್ ಸಅದ್ ಹದೀಸ್–3858)

ಎಂದರೆ, ಮೂರು ಜನರು ಇದ್ದರು. ಅವರು ಹೇಳುತ್ತಾರೆ: ನಾನು ನಮಾಝ್ ಕಡ್ಡಾಯವಾಗುವುದಕ್ಕೆ ಮುಂಚಿತವಾಗಿ ಮುಸ್ಲಿಮ್ ಆಗಿದ್ದೆ. (ಉಸದುಲ್‌ಗಾಬ ಫೀ ಮಾರಿಫತಿಸ್ಸಹಾಬ ಭಾಗ–2, ಪುಟ–453,ಸಅದ್ ಬಿನ್ ಮಾಲಿಕ್, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2003)

ಹಝ್ರತ್ ಸಅದರ(ರ) ಇಸ್ಲಾಮ್ ಧರ್ಮವನ್ನು ಸ್ವೀಕರಿಸುವ ಘಟನೆಯನ್ನು ಅವರ ಮಗಳು ಹೇಳುತ್ತಾಳೆ: ಹಝ್ರತ್ ಸಅದ್(ರ) ಹೇಳಿದರು: ನಾನು ಕನಸಿನಲ್ಲಿ ಕಂಡೆನು, ನಾನು ಅಂಧಕಾರದಲ್ಲಿ ಇರುವೆನು ಮತ್ತು ನನಗೆ ಏನೂ ಕಾಣುತ್ತಿರಲಿಲ್ಲ. ಅಚಾನಕ್ಕಾಗಿ ನಾನು ನೋಡಿದೆ, ಚಂದ್ರ ಉದಿಸಿದೆ, ನಾನು ಅದರ ಕಡೆಗೆ ಹೋಗುತ್ತಿರುವೆನು. ನಾನು ನೋಡುವುದೇನೆಂದರೆ, ನನಗೆ ಮುಂಚಿತವಾಗಿ ಝೈದ್ ಬಿನ್ ಹಾರಿಸ, ಹಝ್ರತ್ ಅಲಿ(ರ) ಮತ್ತು ಹಝ್ರತ್ ಅಬೂಬಕ್ಕರ್(ರ) ಚಂದ್ರನ ಕಡೆಗೆ ಹೋಗುತ್ತಿದ್ದಾರೆ, ನಾನು ಅವರೊಡನೆ ಕೇಳಿದೆ: ನೀವು ಯಾವಾಗ ತಲುಪಿದ್ದೀರಿ? ಅವರು ಹೇಳಿದರು: ನಾವು ಸಹ ಈಗಲೇ ತಲುಪಿರುವೆವು. ಹಝ್ರತ್ ಸಅದ್(ರ) ಹೇಳುತ್ತಾರೆ: ಪೈಗಂಬರ್(ಸ) ರಹಸ್ಯವಾಗಿ ಇಸ್ಲಾಮಿನ ಕಡೆಗೆ ಜನರನ್ನು ಕರೆಯುತ್ತಿರುವುದಾಗಿ ನನಗೆ ಗೊತ್ತಿತ್ತು. ಹಾಗೆ, ನಾನು ಶೀಬೆ ಅಜ್‌ಯಾದಿನಲ್ಲಿ ಬಂದು ಅವರನ್ನು

ಭೇಟಿಯಾದೆ. ಅಜ್‌ಯಾದ್ ಮಕ್ಕದ ಸಫಾ ಪರ್ವತದೊಂದಿಗಿರುವ ಒಂದು ಸ್ಥಳದ ಹೆಸರಾಗಿದೆ. ಅಲ್ಲಿ ಪೈಗಂಬರ್(ಸ) ಆಡುಗಳನ್ನು ಮೇಯಿಸಿದ್ದರು. ಅವರು ಅಸರ್ ನಮಾಝ್ ನಿರ್ವಹಿಸಿ ಕುಳಿತ್ತಿದ್ದರು.ನಾನು ಅಲ್ಲಿಗೆ ತಲುಪಿ ಬೈಅತ್ ಮಾಡಿ ಮುಸ್ಲಿಮ್ ಆದೆ. (ಉಸದುಲ್ ಗಾಬ ಫೀ ಮಾರಿಫತಿಸ್ಸಹಾಬ ಭಾಗ–2, ಪುಟ–455, ಸಅದ್ ಬಿನ್ ಮಾಲಿಕ್, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2003) (ರೌಶನ್ ಸಿತಾರೆ, ಗುಲಾಮ್ ಬಾರಿ ಸೈಫ್, ಸಂಪುಟ–2, ಪುಟ–63–64) (ಫರ್‌ಹಂಗ್ ಸೀರತ್ ಪುಟ–30, ಝುವಾರಿ ಅಕಾಡಮಿ ಕರಾಚಿ 2003)

ಹಝ್ರತ್ ಸಅದರ(ರ) ಮಗಳು ಆಯಿಶಾ ಬಿನ್ತ್ ಸಅದ್ ವರದಿ ಮಾಡುತ್ತಾರೆ: ನಾನು ನನ್ನ ತಂದೆಯಿಂದ ಹೀಗೆ ಕೇಳಿರುವೆನು: ನಾನು ಮುಸ್ಲಿಮ್ ಆದಾಗ ನನ್ನ ವಯಸ್ಸು ಹದಿನೇಳಾಗಿತ್ತು. ಕೆಲವು ವರದಿಗಳ ಪ್ರಕಾರ ಸತ್ಯವಿಶ್ವಾಸ ಕೈಗೊಂಡಾಗ ಅವರ ವಯಸ್ಸು 19 ಎಂದು ಹೇಳಲಾಗಿದೆ. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್ ಭಾಗ–3, ಪುಟ–103, ಸಅದ್ ಬಿನ್ ಅಬೀ ವಖ್ವಾಸ್, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1990)

ಮೊಟ್ಟಮೊದಲು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದ ಜನರಲ್ಲಿ, ಎಂದರೆ ಹಝ್ರತ್ ಅಬೂಬಕ್ಕರರ ತಬ್ಲೀಗಿನಿಂದ ಐದು ವ್ಯಕ್ತಿಗಳು ವಿಶ್ವಾಸವನ್ನು ಸ್ವೀಕರಿಸಿದರು. ಅವರನ್ನು ಇಸ್ಲಾಮಿನ ಗೌರವಾನ್ವಿತ ಮತ್ತು ಶ್ರೇಷ್ಠ ಪದವಿಯನ್ನು ಹೊಂದಿರುವ ಸಹಾಬಿಯರಲ್ಲಿ ಗಣಿಸಲಾಗಿದೆ. ಅವರಲ್ಲಿ ಮೂರನೇ ವ್ಯಕ್ತಿ ಸಅದ್ ಬಿನ್ ವಖಾಸ್ ಆಗಿದ್ದರು. ಇದು ಸೀರತ್ ಖಾತಮುನ್ನುಬಿಯ್ಯೀನಿನಲ್ಲಿ ಬರೆದಿರುವುದರಿಂದ ತೆಗೆಯಲಾಗಿದೆ. ಅವರು ಆಗ ಯುವಕರಾಗಿದ್ದರು. ಎಂದರೆ ಅವರ ವಯಸ್ಸು ಆಗ 19 ಆಗಿತ್ತು. ಇವರು ಬನೂ ಝುಹ್‌ರದಿಂದ ಆಗಿದ್ದರು. ಅತ್ಯಂತ ಧೈರ್ಯಶಾಲಿ ಮತ್ತು ಶೂರರಾಗಿದ್ದರು. ಹಝ್ರತ್ ಉಮರರ(ರ) ಕಾಲದಲ್ಲಿ ಇರಾಕ್ ಇವರ ಕೈಯಿಂದಲೇ ಜಯಿಸಿತು. ಇವರು ಅಮೀರ್ ಮುಆವಿಯಾರ ಕಾಲದಲ್ಲಿ ವಫಾತಾದರು.

(ಸೀರತ್ ಖಾತುಮುನ್ನಬೀಯೀನ್, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ. ಪುಟ–122–123)

ಹಝ್ರತ್ ಸಅದ್ ಬಿನ್ ವಖಾಸ್(ರ) ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಂದ ಹಲವು ಹದೀಸುಗಳನ್ನು ವರದಿ ಮಾಡಿರುವರು. ಹಝ್ರತ್ ಸಅದರ(ರ) ಮಗ ಮುಸಬ್ ವರದಿ ಮಾಡುತ್ತಾರೆ: ನನ್ನ ತಂದೆ ಸಅದ್ ನನ್ನೊಡನೆ ಹೇಳಿದರು: ನನ್ನ ತಾಯಿ ಪ್ರತಿಜ್ಞೆ ಮಾಡಿದ್ದರು, ಎಂದರೆ ಸಅದಿನ ತಾಯಿ, ಸಅದ್ ತನ್ನ ದೀನಿನಿಂದ ಹಿಂದಿರುಗುವ ವರೆಗೆ ಸಅದರೊಂದಿಗೆ ಮಾತನಾಡಲಿಕ್ಕಿಲ್ಲ ಎಂದು, ಎಂದರೆ ಇಸ್ಲಾಮಿನಿಂದ ಮುಖ ತಿರುಗಿಸುವ ವರೆಗೆ, ಹೀಗೆ ಅವರು ತಿನ್ನುವುದನ್ನೂ, ಕುಡಿಯುವುದನ್ನೂ ನಿಲ್ಲಿಸಿದರು. ಅವರು ಹೇಳುತ್ತಾರೆ: ನನ್ನ ತಾಯಿ ಹೇಳುತ್ತಿದ್ದಳು, ನೀನು ಯಾವಾಗಲೂ ಹೇಳುತ್ತಿಯಲ್ಲವೆ, ಅಲ್ಲಾಹನು ನಿನಗೆ ತನ್ನ ತಂದೆ ತಾಯಿಯೊಂದಿಗೆ ಉತ್ತಮವಾಗಿ ವರ್ತಿಸಲು ತಾಕೀತು ಮಾಡಿದ್ದಾನೆಂದು, ನೀನು ಹೇಳುತ್ತಿರುತ್ತಿಯಲ್ಲವೆ, ನಿನ್ನ ಧರ್ಮದಲ್ಲಿ, ಅಲ್ಲಾಹನು ಹೇಳಿದ್ದಾನೆ: ತನ್ನ ತಂದೆತಾಯಿಯೊಂದಿಗೆ ಔದಾರ್ಯದಿಂದ ಇರಬೇಕೆಂದು, ಅದರ ತಾಕೀತು ಇದೆಯಲ್ಲವೆ. ನಾನು ನಿನ್ನ ತಾಯಿ, ನಾನು ಹಾಗೆ ಮಾಡಲು ನಿನ್ನನ್ನು ಆಜ್ಞಾಪಿಸುತ್ತೇನೆ. ನೀನು ಈ ಧರ್ಮವನ್ನು ಬಿಡು, ನಾನು ಹೇಳುತ್ತಿರುವ ಮಾತನ್ನು ಕೇಳು, ವರದಿಗಾರ ಹೇಳುತ್ತಾನೆ: ಮೂರು ದಿನಗಳ ಕಾಲ ಅವರು ಈ ಸ್ಥಿತಿಯಲ್ಲಿ ಇದ್ದರು. ಅವರು ಬಲಹೀನತೆಯ ಕಾರಣ ಮೂರ್ಛೆ ಹೋದರು, ಅನಂತರ ಅಮ್ಮಾರ ಎಂದು ಕರೆಯಲಾಗುವ ಅವರ ಮಗ ಎದ್ದು ಅವರಿಗೆ ನೀರು ಕೊಟ್ಟರು, ಅನಂತರ ಪ್ರಜ್ಞೆ ಬಂದಾಗ ಅವರು ಸಅದರಿಗೆ ಶಾಪ ಪ್ರಾರ್ಥನೆ ಮಾಡಲು ತೊಡಗಿದರು. ಆಗ ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಈ ಆಯತನ್ನು ಇಳಿಸಿದನು: **ವವಸ್ಸೈನಲ್ ಇನ್ಸಾನ ಬಿವಾಲಿದೈಹಿ ಹುಸ್ನ**. (ಅಲ್‌ಅನ್‌ಕಬೂತ್:09) ಎಂದರೆ, ತನ್ನ ತಂದೆತಾಯಂದಿರೊಡನೆ ಔದಾರ್ಯದಿಂದ ವರ್ತಿಸಬೇಕೆಂದು ನಾವು ಮನುಷ್ಯನಿಗೆ ಉಪದೇಶಿಸಿದ್ದೇವೆ.

**ವವಸ್ಸೈನಲ್ ಇನ್ಸಾನ ಬಿವಾಲಿದೈಹಿ ಹುಸ್ನ**. ಇದು ಅನ್‌ಕಬೂತಿನ ಆಯತಾಗಿದೆ. ಅನಂತರ ಸೂರ ಲುಕ್ಮಾನಿನಲ್ಲಿ ಇದೆ: **ವಇನ್ ಜಾಹದಕ ಅಲಾ ಅನ್ ತುಶ್ರಿಕ ಬೀ**. (ಲುಖ್ಮಾನ್:16) ನನ್ನೊಂದಿಗೆ ಸೇರಿಸಿ ಆರಾಧಿಸಲು ಅವರಿಬ್ಬರೂ ನಿನ್ನನ್ನು ಒತ್ತಾಯಪಡಿಸಿದರೆ, ಆಗ ನೀನು ಅವರನ್ನು ಅನುಸರಿಸಬಾರದು. **ವಇನ್ ಜಾಹದಕ ಅಲಾ ಅನ್ ತುಶ್ರಿಕ ಬೀ** ಎಂದರೆ ಅಲ್ಲಾಹನಿಗೆ ಸಹಭಾಗಿಯನ್ನು ಕಲ್ಪಿಸಲು ಅವರು ಹೇಳಿದರೆ, ಅವರನ್ನು ಅನುಸರಿಸಬಾರದು, ಅದರಲ್ಲಿ ಹೀಗೆಯೂ ಬಂದಿದೆ, **ವಸಾಹಿಬುಹುಮಾ ಫಿದ್ದುನ್‌ಯಾ ಮಅ್‌ರೂಫ,** ಇಬ್ಬರೊಂದಿಗೆ, ಲೌಕಿಕ ಕಾರ್ಯಗಳಲ್ಲಿ ಅವರೊಡನೆ ಉತ್ತಮವಾದ ರೀತಿಯಲ್ಲಿ ವರ್ತಿಸು, ಸಂಬಂಧವನ್ನು ಇರಿಸು. ಅವರೊಂದಿಗೆ ಒಳಿತಿನಿಂದ ಇರು. (ಸಹೀಹ್ ಮುಸ್ಲಿಮ್ ಕಿತಾಬ್ ಫಝಾಎಲುಸ್ಸಹಾಬ, ಹದೀಸ್–1748)

ಈ ಜಗಳ ಶಿರ್ಕ್ ಬಗ್ಗೆ ಆಗಿದ್ದರೆ ಮಾತ್ರ ಅವರ ಮಾತನ್ನು ಅಂಗೀಕರಿಸಬಾರದು. ಈ ವಿಶದವಾದ ಸಂಗತಿ ಹೀಗೆ ಮುಂದುವರಿಯುತ್ತದೆ. ಆದರೆ ಲೌಕಿಕವಾದ ವಿಷಯಗಳಲ್ಲಿ ಅವರೊಂದಿಗೆ ಸಂಬಂಧವನ್ನಿರಿಸಬೇಕು. **ವಸಾಹಿಬುಹುಮಾ ಫಿದ್ದುನ್‌ಯಾ ಮಅ್‌ರೂಫ,** ಅವರೊಂದಿಗೆ ಸಂಬಂಧವನ್ನು ಇರಿಸು ಅವರೊಂದಿಗೆ ಸ್ನೇಹದಿಂದ ವರ್ತಿಸು.

ಹಝ್ರತ್ ಸಅದ್ ಬಿನ್ ಅಬೀ ವಖಾಸ್(ರ) ವರದಿ ಮಾಡುತ್ತಾರೆ: ನಾನು ನನ್ನ ತಾಯಿಯನ್ನು ತುಂಬಾ ಪ್ರೀತಿಸುತ್ತಿದ್ದೆ. ಈ ಮೊದಲಿನ ವರದಿ ಮುಸ್ಲಿಮಿನಲ್ಲಿ ಇತ್ತು. ಮುಂದೆ ಸೀರತಿನಲ್ಲಿ ಬರೆಯಲಾಗಿದೆ. ಬೇರೆಯೊಂದು ವಿಷಯಕ್ಕೆ ಸಂಬಂಧಿಸಿ, ಹಝ್ರತ್ ಸಅದ್ ಬಿನ್ ಅಬೀ ವಖಾಸ್(ರ) ಹೇಳುತ್ತಾರೆ: ನಾನು ನನ್ನ ತಾಯಿಯನ್ನು ತುಂಬ ಪ್ರೀತಿಸುತ್ತಿದ್ದೆ. ಆದರೆ ನಾನು ಇಸ್ಲಾಮ್ ಸ್ವೀಕರಿಸಿದಾಗ, ತಾಯಿ ಕೇಳಿದಳು: ನೀನು ಎಂತಹ ಧರ್ಮವನ್ನು ಕೈಗೊಂಡಿರುವೆ? ನೀನು ಈ ಹೊಸ ಧರ್ಮವನ್ನು ತ್ಯಜಿಸು, ಇಲ್ಲದಿದ್ದರೆ, ನಾನು ಏನೂ ತಿನ್ನಲಿಕ್ಕೂ ಇಲ್ಲ, ಕುಡಿಯಲಿಕ್ಕೂ ಇಲ್ಲ. ನಾನು ಸಾಯುವ ವರೆಗೆ, ಹಝ್ರತ್ ಸಅದ್ ಹೇಳುತ್ತಾರೆ: ನಾನು ನನ್ನ ತಾಯಿಗೆ ಹೇಳಿದೆ ಹೇ ನನ್ನ ಪ್ರೀತಿಯ ಅಮ್ಮ, ಹೀಗೆ ಮಾಡಬೇಡ, ಏಕೆಂದರೆ, ನಾನು ನನ್ನ ಧರ್ಮವನ್ನು ಬಿಡುವವನಲ್ಲ. ಹಝ್ರತ್ ಸಅದ್(ರ) ಹೇಳುತ್ತಾರೆ: ಒಂದು ದಿನ, ಒಂದು ರಾತ್ರಿ ನನ್ನ ತಾಯಿ ಏನೂ ತಿನ್ನಲಿಲ್ಲ, ಏನನ್ನೂ ಕುಡಿಯಲೂ ಇಲ್ಲ. ಅವರ ಸ್ಥಿತಿ ಹಾಳಾಗಲು ತೊಡಗಿತು. ನಾನು ತಾಯಿಯೊಂದಿಗೆ ಹೇಳಿದೆ: ಅಲ್ಲಾಹನಾಣೆ, ನಿಮಗೆ ಒಂದು ಸಾವಿರ ಜೀವವಿದ್ದರೂ, ಮತ್ತು ಅವುಗಳು ಒಂದೊಂದಾಗಿ ನಷ್ಟವಾದರೂ, ನಾನು ಯಾರಿಗಾದರೂ ಬೇಕಾಗಿ ನನ್ನ ಧರ್ಮವನ್ನು ತ್ಯಜಿಸುವುದಿಲ್ಲ. ಹೀಗೆ ಹೇಳಿದ್ದನ್ನು ನನ್ನ ತಾಯಿ ಕೇಳಿದಾಗ ತಿನ್ನಲು ಮತ್ತು ಕುಡಿಯಲು ಶುರುಮಾಡಿದರು. ಆ ಸಂದರ್ಭದಲ್ಲಿ ಅಲ್ಲಾಹನು ಈ ಆಯತನ್ನು ಅವತೀರ್ಣಗೊಳಿಸಿದನು: **ವಇನ್‌ಜಾಹದಕ ಅಲಾ ಅನ್‌ತುಶ್‌ರಿಕ ಬೀ ಮಾ ಲೈಸ ಲಕ ಬಿಹಿ ಇಲ್ಮ್.ಫಲಾ ತುತ್‌ಇಹಿಮ ವಸಾಹಿಬುಹುಮ ಫಿದ್ದುನ್‌ಯ ಮಅ್‌ರೂಫ**. (ಲುಖ್ಮಾನ್:16) **ಅ**ಂದರೆ ಅವರಿಬ್ಬರು ಒತ್ತಾಯಪಡಿಸಿದರೆ, ನೀನು ಅಲ್ಲಾಹನಿಗೆ ಸಹಭಾಗಿಯನ್ನು ನಿಶ್ಚಯಿಸು ಎಂದು ಅದರ ಬಗ್ಗೆ ನಿನಗೆ ಯಾವುದೇ ಅರಿವಿಲ್ಲ, **ಮಾಲೈಸ ಲಕ ಬಿಹಿ ಇಲ್ಮ್**. ಯಾವುದೇ ತಿಳುವಳಿಕೆ ಇಲ್ಲ. **ಫಲಾ ತುತ್‌ಇಮ**. ಹಾಗಾದರೆ, ನೀನು ಅವರಿಬ್ಬರ ಮಾತನ್ನು ಅಂಗೀಕರಿಸಬೇಡ. ಆದರೆ, ಲೌಕಿಕ ಕಾರ್ಯದಲ್ಲಿ ಅವರೊಂದಿಗೆ ಉತ್ತಮ ಸಂಬಂಧವನ್ನು ನೆಲೆನಿಲ್ಲಿಸು.

(ಉಸದುಲ್‌ಗಾಬ ಫೀ ಮಾರಿಫತಿಸ್ಸಹಾಬ ಭಾಗ–2, ಪುಟ–455, ಸಅದ್ ಬಿನ್ ಮಾಲಿಕ್, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್, 2003)

ಪೈಗಂಬರ್(ಸ) ಹಝ್ರತ್ ಸಅದರನ್ನು ಮಾವ ಎಂದು ಕರೆಯುತ್ತಿದ್ದರು. (ಅಸ್‌ಹಾಬ್ ಬದರ್, ಖಾಝಿ ಮುಹಮ್ಮದ್ ಸುಲೈಮಾನ್ ಸಲ್ಮಾನ್ ಮನ್ಸೂರ್ ಪೂರಿ, ಪುಟ–91, ಮಕ್‌ತಬ ಇಸ್ಲಾಮಿಯ ಲಾಹೋರ್ 2015)

ಒಂದು ಸಲ ಹಝ್ರತ್ ಸಅದ್(ರ) ಮುಂದಿನಿಂದ ಬರುತ್ತಿದ್ದರು. ಆಗ ಪೈಗಂಬರ್(ಸ) ಅವರನ್ನು ನೋಡಿ ಹೇಳಿದರು. ಇದು ನನ್ನ ಮಾವ ಆಗಿರುವರು. ಯಾರಿಗೆ ಇಂತಹ ಮಾವ ಇದ್ದಾರೆ, ಯಾರಿಗಾದರೂ ಇಂತಹ ಮಾವ ಇದ್ದರೆ ತೋರಿಸಲಿ. ಇಮಾಮ್ ತಿರ್ಮಿಝಿ ಇದರ ಕಾರಣ ಹೀಗೆ ಹೇಳಿರುವರು: ಪೈಗಂಬರರ(ಸ) ತಾಯಿಯ ಸಂಬಂಧ ಬನೂ ಝೊಹ್‌ರದೊಂದಿಗೆ ಆಗಿತ್ತು. ಹಝ್ರತ್ ಸಅದ್ ಬಿನ್ ಅಬೀ ವಖಾಸರ(ರ) ಸಂಬಂಧವೂ ಬನೂ ಝೊಹ್‌ರದೊಂದಿಗೆ ಆಗಿತ್ತು. (ಜಾಮಿ ತಿರ್‌ಮಿಝಿ, ಕಿತಾಬುಲ್ ಮನಾಖಿಬ್, ಬಾಬ್ ಮುನಾಖಿಬ್ ಅಬೂ ಇಸ್‌ಹಾಖ್ ಸಅದ್ ಬಿನ್ ಅಬಿ ವಖ್ವಾಸ್, ಹದೀಸ್–3752)

ಹಝ್ರತ್ ಅಬೂಹುರೈರ ರಝಿಯಲ್ಲಾಹು ಅನ್‌ಹುರಿಂದ ವರದಿಯಾಗಿದೆ. ಪೈಗಂಬರ್(ಸ) ಹಿರಾ ಪರ್ವತದಲ್ಲಿ ಇದ್ದರು. ಅದು ಕಂಪಿಸತೊಡಗಿತು. ಆಗ ಪೈಗಂಬರ್(ಸ) ಹೇಳಿದರು: ಹೇ ಹಿರಾ, ಕಂಪಿಸದಿರು; ಏಕೆಂದರೆ, ನಿನ್ನ ಮೇಲೆ ನಬಿ, ಸಿದ್ದೀಖ್ ಶಹೀದ್ ಅಲ್ಲದೆ ಬೇರೆ ಯಾರೂ ಇಲ್ಲ. ಆ ಪರ್ವತದಲ್ಲಿ ಆಗ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಇದ್ದರು, ಹಝ್ರತ್ ಅಬೂಬಕ್ಕರ್(ರ), ಹಝ್ರತ್ ಉಮರ್(ರ), ಹಝ್ರತ್ ಉಸ್ಮಾನ್(ರ), ಹಝ್ರತ್ ಅಲಿ(ರ), ಹಝ್ರತ್ ತಲ್‌ಹ ಬಿನ್ ಉಬೈದುಲ್ಲಾಹ್(ರ), ಹಝ್ರತ್ ಝುಬೈರ್ ಬಿನ್ ಅವಾಮ್(ರ), ಹಝ್ರತ್ ಸಅದ್ ಬಿನ್ ಅಬೀ ವಖಾಸ್(ರ) ಇದ್ದರು. ಇದು ಮುಸ್ಲಿಮಿನ ವರದಿಯಾಗಿದೆ.

(ಸಹೀಹ್ ಮುಸ್ಲಿಮ್ ಕಿತಾಬ್ ಫಝಾಎಲುಸ್ಸಹಾಬ ಹದೀಸ್–2417)

ಇಸ್ಲಾಮಿನ ಆರಂಭ ಘಟ್ಟದಲ್ಲಿ, ಮುಸ್ಲಿಮರು ರಹಸ್ಯವಾಗಿ ನಮಾಝುಗಳನ್ನು ನಿರ್ವಹಿಸುತ್ತಿರುವ ಕಾಲದಲ್ಲಿ, ಒಂದು ಸಲ ಹಝ್ರತ್ ಸಅದ್(ರ) ಮಕ್ಕದ ಒಂದು ಕಣಿವೆಯಲ್ಲಿ ಕೆಲವು ಸಹಾಬರೊಂದಿಗೆ ನಮಾಝ್

ನಿರ್ವಹಿಸುತ್ತಿದ್ದರು. ಆಗ ಅಲ್ಲಿ ಬಹುದೇವಾರಾಧಕರು ತಲುಪಿದರು ಮತ್ತು ಅವರು ಮುಸ್ಲಿಮರನ್ನು ಗೇಲಿ ಮಾಡಲು ಶುರುಮಾಡಿದರು. ಅವರ ಧರ್ಮದಲ್ಲಿ, ಎಂದರೆ ಇಸ್ಲಾಮಿನ ಬಗ್ಗೆ ನ್ಯೂನತೆಗಳನ್ನು ಹೇಳಲು ಶುರುಮಾಡಿದರು. ಜಗಳವಾಗುವ ಹಂತಕ್ಕೆ ಪರಿಸ್ಥಿತಿ ತಲುಪಿತು. ಹಝ್ರತ್ ಸಅದ್(ರ) ಒಬ್ಬ ಮುಶ್ರಿಕಿನ ತಲೆಗೆ ಒಂಟೆಯ ಒಂದು ಎಲುಬಿಂದ ಶಕ್ತವಾಗಿ ಪ್ರಹರಿಸಿದ ಕಾರಣ ಅವನ ತಲೆ ಹೊಡೆದು ರಕ್ತ ಹರಿಯಿತು. ಇದು ಇಸ್ಲಾಮಿನಲ್ಲಿ ಹರಿಸಲಾದ ಮೊದಲ ರಕ್ತವಾಗಿದೆ. (ಅಲ್‌ಅಸಾಬ ಫೀ ತಮೀಝೀಸ್ಸಹಾಬ, ಭಾಗ–2, ಪುಟ–324, ದಾರುಲ್ ಫಿಕರ್ ಬೈರೂತ್ ಲೆಬನಾನ್, 2001)

ಮಕ್ಕದಲ್ಲಿ ಸತ್ಯನಿಷೇಧಿಗಳು ಮುಸ್ಲಿಮರನ್ನು ಬಹಿಷ್ಕಾರ ಮಾಡಿದರು, ಬಹಿಷ್ಕರಿಸಿದರು ಮತ್ತು ಅವರನ್ನು ಅಬಿ ತಾಲಿಬಿನ ಕಣಿವೆಯಲ್ಲಿ ಮುಚ್ಚಿಡಲಾದಾಗ, ಆವರಿಸಿದಾಗ, ಆ ಮುಸ್ಲಿಮರು ಬಹಳ ಸಂಕಷ್ಟಕ್ಕೆ ಸಿಲುಕಿದ್ದರು. ಅವರಲ್ಲಿ ಒಬ್ಬರು ಹಝ್ರತ್ ಸಅದ್ ಬಿನ್ ಅಬೀ ವಖಾಸ್(ರ) ಸಹ ಆಗಿದ್ದರು. ಅದರ ಬಗ್ಗೆ ವಿವರಿಸುತ್ತಾ ಸೀರತ್ ಖಾತಮುನ್ನಬಿಯ್ಯೀನಿನಲ್ಲಿ ಹಝ್ರತ್ ಸಾಹಿಬ್‌ಝಾದ ಮಿರ್ಝಾ ಬಶೀರ್ ಅಹ್ಮದ್ ಸಾಹಿಬರು ಈ ರೀತಿಯಾಗಿ ಬರೆದಿರುವರು:

"ಆ ಕಾಲದಲ್ಲಿ ಸೆರೆಯಾಳಾಗಿದ್ದ ಮುಸ್ಲಿಮರು ಅನುಭವಿಸಬೇಕಾಗಿ ಬಂದ ಕಷ್ಟತೆಗಳ ಮತ್ತು ಸಂಕಷ್ಟಾವಸ್ಥೆಗಳ ಬಗ್ಗೆ ಓದುವಾಗ ದೇಹ ನಡುಗುತ್ತದೆ. ಸಹಾಬಿವರ್ಯರು ಹೇಳುತ್ತಾರೆ: ಕೆಲವು ಸಂದರ್ಭಗಳಲ್ಲಿ ಅವರು ಜಾನುವಾರುಗಳ ಹಾಗೆ ಕಾಡಿನ ಮರಗಳ ಎಲೆಗಳನ್ನು ತಿಂದು ದಿನ ಕಳೆದಿದ್ದರು. ಹಝ್ರತ್ ಸಅದ್ ಬಿನ್ ಅಬೀ ವಖಾಸ್(ರ) ಹೇಳುತ್ತಾರೆ: ಒಂದು ದಿನ ರಾತ್ರಿ ಸಮಯದಲ್ಲಿ ಅವರ ಕಾಲು ಪಾದ ಯಾವುದೇ ಒಂದು ವಸ್ತುವಿಗೆ ತಗುಲಿತು. ಅದು ಒದ್ದೆ ಮತ್ತು ಮೃದುವಾಗಿ ತೋರುತ್ತಿತ್ತು. ಬಹುಶಃ ಯಾವುದಾದರೂ ಖರ್ಜೂರದ ತುಂಡು ಆಗಿರಬಹುದು. ಆಗ ಅವರ ಹಸಿವಿನ ಅವಸ್ಥೆ ಏನಾಗಿತ್ತೆಂದರೆ, ಅವರು ಅದನ್ನು ಬೇಗನೆ ತೆಗೆದು ನುಂಗಿದರು. ಅವರು ಹೇಳುತ್ತಾರೆ: ಅದೇನಾಗಿತ್ತು ಎಂದು ಇಂದಿನ ವರೆಗೆ ನನಗೆ ಗೊತ್ತಿಲ್ಲ. ಇನ್ನೊಂದು ಸಂದರ್ಭದಲ್ಲಿ ಹಸಿವಿನ ಕಾರಣದಿಂದ ಅವರ ಸ್ಥಿತಿ ಏನಾಗಿತ್ತೆಂದರೆ, ಅವರಿಗೆ ಒಂದು ಒಣಗಿದ ಚರ್ಮದ ತುಂಡು ನೆಲದಲ್ಲಿ ಬಿದ್ದು ಸಿಕ್ಕಿತು. ಅದನ್ನು ಅವರು ನೀರಿನಿಂದ ಮೃದುಮಾಡಿ ಶುಚಿಗೊಳಿಸಿದ ನಂತರ ಹುರಿದು ತಿಂದರು. ಹಾಗು ಮೂರು ದಿನ ಈ ಅದೃಶ್ಯ ಆತಿಥ್ಯದಿಂದ ದಿನ ಕಳೆದರು." (ಸೀರತ್ ಖಾತುಮುನ್ನಬೀಯೀನ್, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ–166–167)

ಅಲ್ಲಾಹನು ಮುಸ್ಲಿಮರಿಗೆ ಹಿಜ್ರತಿನ ಆದೇಶ ನೀಡಿದಾಗ ಹಝ್ರತ್ ಸಅದ್(ರ) ಸಹ ಮದೀನದ ಕಡೆಗೆ ಹಿಜ್‌ರತ್ ಎಂದರೆ, ಪಲಾಯನ ಮಾಡಿದರು ಮತ್ತು ಅಲ್ಲಿ ತಮ್ಮ ಮುಶ್ರಿಕ್ ಸಹೋದರನಾದ ಉತ್‌ಬ ಬಿನ್ ಅಬೀ ವಖಾಸ್‌ನ ಮನೆಯಲ್ಲಿ ವಾಸಮಾಡಿದರು. ಉತ್‌ಬ ಮಕ್ಕದಲ್ಲಿ ಒಬ್ಬರನ್ನು ಕೊಂದಿದ್ದನು. ಆದ ಕಾರಣ ಅವನು ಮದೀನದಲ್ಲಿ ಬಂದು ನೆಲೆಸಿದನು.
(ರೌಶನ್ ಸಿತಾರೆ, ಗುಲಾಮ್ ಬಾರಿ ಸೈಫ್, ಪುಟ–2, ಪುಟ–66–67)

ಹಝ್ರತ್ ಸಅದ್(ರ) ಮೊಟ್ಟ ಮೊದಲು ಹಿಜ್‌ರತ್ ಮಾಡಿದವರಲ್ಲಿ ಸೇರಿದ್ದರು. ಅವರು ಪೈಗಂಬರ್(ಸ) ಮದೀನಕ್ಕೆ ಬರುವುದಕ್ಕೆ ಮುಂಚಿತವಾಗಿ ಮದೀನಕ್ಕೆ ಹಿಜ್‌ರತ್ ಮಾಡಿ ಬಂದಿದ್ದರು.
(ಉಮ್‌ದತುಲ್ ಖಾರಿ, ಶರಹ್ ಸಹೀಹ್ ಬುಖಾರಿ, ಸಂಪುಟ–1, ಪುಟ–305, ದಾರುಲ್ ಕುತುಬ್ ಇಲ್‌ಮಿಯ ಬೈರೂತ್, 2001)

ಪೈಗಂಬರ್(ಸ) ಹಝ್ರತ್ ಸಅದ್ ಬಿನ್ ಅಬೀ ವಖಾಸರ ಸಹೋದರ ಸಂಬಂಧವನ್ನು ಹಝ್ರತ್ ಸಅದ್ ಬಿನ್ ಮಆಧ್‌ರೊಂದಿಗೆ ಸ್ಥಾಪಿಸಿದ್ದರು. (ಅತ್ತಬಖಾತುಲ್ ಕುಬ್ರ, ಲಿಇಬ್ನೆ ಸಅದ್ ಭಾಗ–3, ಪುಟ–103, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್, 1990)

ಸಹೋದರ ಸಂಬಂಧ ಸ್ಥಾಪನೆಯ ಈ ಭಿನ್ನಾಭಿಪ್ರಾಯದ ಪರಿಹಾರ ಹೀಗೆ ಆಗುವುದು. ಮಕ್ಕದಲ್ಲಿ ಅವರ ಸಹೋದರ ಸಂಬಂಧ ಸ್ಥಾಪನೆ ಮೌಲಾನಾ ಗುಲಾಮ್ ಅಲಿ ಸಾಹಿಬರ ಪ್ರಕಾರ ಹಝ್ರತ್ ಮುಸ್‌ಅಬ್‌ರೊಂದಿಗೆ ಆಗಿತ್ತು. ಮಕ್ಕದಲ್ಲಿ ಅವರ ಸಹೋದರ ಸಂಬಂಧ ಹಝ್ರತ್ ಮುಸ್‌ಅಬ್‌ರೊಂದಿಗೆ ಆಗಿತ್ತು ಮತ್ತು ಮದೀನದಲ್ಲಿ ಹಝ್ರತ್ ಸಅದ್ ಬಿನ್ ಮಆಧ್‌ರೊಂದಿಗೆ ಆಯಿತು. (ರೌಶನ್ ಸಿತಾರೆ, ಗುಲಾಮ್ ಬಾರಿ ಸೈಫ್, ಸಂಪುಟ–2, ಪುಟ–64)

ಹಝ್ರತ್ ಸಅದ್(ರ) ಖುರೈಶಿನ ಶೂರ ಕುದುರೆಸವಾರರಲ್ಲಿ ಒಬ್ಬರಾಗಿದ್ದರು. ಯುದ್ಧಗಳಲ್ಲಿ ಪೈಗಂಬರರ(ಸ) ಸಂರಕ್ಷಣೆ ಮತ್ತು ಸುರಕ್ಷೆಯ ಜವಾಬ್ದಾರಿ ವಹಿಸಲ್ಪಟ್ಟ ಸಹಾಬಿವರ್ಯರಲ್ಲಿ ಒಬ್ಬರು ಹಝ್ರತ್ ಸಅದ್ ಬಿನ್ ಅಬೀ ವಖಾಸ್(ರ) ಸಹ ಇದ್ದರು. (ಅಲ್‌ಇಸ್ತಿಂಯಾಬ್ ಫೀ ಮಾರಿಫತಿಸ್ಸಹಾಬ ಭಾಗ–2, ಪುಟ–172, ದಾರುಲ್ ಕುತುಬ್ ಇಲ್‌ಮಿಯ ಬೈರೂತ್, ಲೆಬನಾನ್, 2010)

ಅಬೂ ಇಸ್‌ಹಾಖ್ ವರದಿ ಮಾಡುತ್ತಾರೆ: ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಹಾಬಿವರ್ಯರಲ್ಲಿ ನಾಲ್ಕು ವ್ಯಕ್ತಿಗಳು ಬಹಳ ಆಕ್ರಮಣಶಾಲಿಯಾಗಿದ್ದರು. ಹಝ್ರತ್ ಉಮರ್(ರ), ಹಝ್ರತ್ ಅಲಿ(ರ), ಹಝ್ರತ್ ಝುಬೈರ್(ರ) ಮತ್ತು ಹಝ್ರತ್ ಸಅದ್(ರ).
(ಅಲ್‌ಅಸಾಬ ಫೀ ತಮೀಝೀಸ್ಸಹಾಬ, ಭಾಗ–2, ಪುಟ–325, ದಾರುಲ್ ಫಿಕರ್ ಬೈರೂತ್ ಲೆಬನಾನ್ 2001)

ಮದೀನ ಹಿಜ್‌ರತಿನ ನಂತರ ಮುಸ್ಲಿಮರಿಗೆ ಸತ್ಯನಿಷೇಧಿಗಳ ಕಡೆಯಿಂದ ಹಲ್ಲೆಯ ಭಯಶಂಕೆ ಮತ್ತು ಚಿಂತೆ ಇರುತ್ತಿತ್ತು. ಆದ ಕಾರಣ ಆರಂಭದಲ್ಲಿ, ಮುಸ್ಲಿಮರು ಹೆಚ್ಚಾಗಿ ರಾತ್ರಿ ಸಮಯದಲ್ಲಿ ಎಚ್ಚೆತ್ತು ನಿಂತಿರುತ್ತಿದ್ದರು. ಪೈಗಂಬರ್(ಸ) ಸಹ ಸಾಮಾನ್ಯವಾಗಿ ರಾತ್ರಿ ಸಮಯದಲ್ಲಿ ಮಲಗುತ್ತಿರಲಿಲ್ಲ. ಈ ಬಗ್ಗೆ ಒಂದು ವರದಿ ಇದೆ. ಹಝ್ರತ್ ಆಯಿಶಾ(ರ) ಹೇಳುತ್ತಾರೆ: ಮದೀನಕ್ಕೆ ಬಂದ ಕಾಲದಲ್ಲಿ ಒಂದು ರಾತ್ರಿ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಮಲಗಲಾಗಲಿಲ್ಲ. ಪೈಗಂಬರ್(ಸ) ಹೇಳಿದರು: ನನ್ನ ಸಹಾಬಿಯರಲ್ಲಿ ಯಾರಾದರೂ ಒಳ್ಳೆಯ ವ್ಯಕ್ತಿ ಇಂದು ರಾತ್ರಿ ನನಗೆ ಕಾವಲು ನಿಂತಿದ್ದರೆ ಎಷ್ಟು ಚೆನ್ನಾಗಿತ್ತು. ಹಝ್ರತ್ ಆಯಿಶಾ(ರ) ಹೇಳುತ್ತಾರೆ: ಅಷ್ಟರಲ್ಲೇ ನಾವು ಆಯುಧಗಳ ಶಬ್ದವನ್ನು ಕೇಳಿದೆವು. ಪೈಗಂಬರ್(ಸ) ಯಾರೆಂದು ಕೇಳಿದರು. ಹೇಳಲಾಯಿತು, ಹೊರಗಿನಿಂದ ಹೀಗೆ ಶಬ್ದ ಬಂತು, ಬಂದವರು ಹೀಗೆ ಹೇಳಿದರು: ಸಅದ್ ಬಿನ್ ಅಬೀ ವಖಾಸ್, ನಾನು ಹಝ್ರತ್ ಸಅದ್ ಬಿನ್ ಅಬೀ ವಖಾಸ್ ಆಗಿರುವೆನು. ಪೈಗಂಬರ್(ಸ) ಕೇಳಿದರು: ನೀವು ಇಲ್ಲಿಗೆ ಏಕೆ ಬಂದಿರುವಿರಿ, ಅವರು ಹೇಳಿದರು: ನನ್ನ ಮನಸ್ಸಿನಲ್ಲಿ ಪೈಗಂಬರರ(ಸ) ಕುರಿತು ಭಯವುಂಟಾಯಿತು. ಆದ್ದರಿಂದ ನಾನು ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಕಾವಲು ನಿಲ್ಲಲ್ಲು ಹಾಜರಾಗಿರುವೆನು. ಪೈಗಂಬರ್(ಸ) ಸಅದಿಗಾಗಿ ದುಆ ಮಾಡಿದರು ಮತ್ತು ನಿದ್ದೆ ಹೋದರು. (ಸೀರತ್ ಖಾತುಮುನ್ನಬೀಯೀನ್, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್, ಎಂ.ಎ, ಪುಟ–282–283) (ಸಹೀಹ್ ಮುಸ್ಲಿಮ್ ಕಿತಾಬ್ ಫಝಾಎಲುಸ್ಸಹಾಬ ಬಾಬ್ ಫಝುಲ್ ಸಅದ್ ಬಿನ್ ಅಬಿ ವಖಾಸ್ ಹದೀಸ್–2410)

ಒಂದು ವರದಿ, ಬುಖಾರಿ ಮತ್ತು ಮುಸ್ಲಿಮ್ ಎರಡರಲ್ಲಿಯೂ ಬಂದಿದೆ. ಈ ಘಟನೆಯ ಪ್ರಸ್ತಾಪವಿದೆ, ಆದರೆ ಅದರೊಂದಿಗೆ ದುಆದ ವಿವರಣೆಯಿಲ್ಲ. ಎಂದರೆ ಪೈಗಂಬರ್(ಸ) ಏನು ದುಆ ಮಾಡಿದರು ಎಂದಿಲ್ಲ. ಆದರೆ, ಹಝ್ರತ್ ಸಅದರ ಮನಾಕಿಬಿನಲ್ಲಿ ಗುಣ ಸ್ವಭಾವದ ಭಾಗದಲ್ಲಿ ಇಮಾಮ್ ತಿರ್ಮಿಧಿ ವಿವರಿಸುತ್ತಾರೆ: ಅದರಲ್ಲಿ ಅವರ ಮಗ ಖೈಸ್‌ನಿಂದ ಹೀಗೆ ವರದಿಯಿದೆ: ನನ್ನ ತಂದೆ ಸಅದ್ ಹೇಳಿದ್ದರು: ಪೈಗಂಬರ್(ಸ) ಅವರಿಗಾಗಿ ಹೀಗೆ ದುಆ ಮಾಡಿದರು: **ಅಲ್ಲಾಹುಮ್ಮ ಅಸ್ತಜಿಬ್ ಲಿಸಅದಿ ಇಝಾ ದಆ**. ಎಂದರೆ, ಸಅದ್ ನಿನ್ನನ್ನು ಪ್ರಾರ್ಥಿಸಿದರೆ, ಅವರ ದುಆವನ್ನು ಅಂಗೀಕರಿಸು, ಮತ್ತು ಅಕ್ಮಲ್ ಫೀ ಅಸ್ಮಾಯುರ್ರಿಜಾಲಿನಲ್ಲಿ ಹೀಗೆ ಬಂದಿದೆ: ಪೈಗಂಬರ್(ಸ) ಅವರಿಗಾಗಿ ಹೀಗೆ ದುಆ ಮಾಡಿದರು: **ಅಲ್ಲಾಹುಮ್ಮ ಸದ್ದದ ಸಹ್ಮಹು ವ ಅಜಿಬ ದಾವತುಹು**. ಅಂದರೆ, ಹೇ ಅಲ್ಲಾಹ್, ಅವರ ಬಾಣ ಸರಿಯಾಗಿ ನಿಶಾನೆಗೆ ತಟ್ಟಲಿ, ಮತ್ತು ಅವರ ದುಆಗಳನ್ನು ಅಂಗೀಕರಿಸು.
(ರೌಶನ್ ಸಿತಾರೆ, ಗುಲಾಮ್ ಬಾರಿ ಸೈಫ್, ಸಂಪುಟ–2, ಪುಟ–67–68)

ಪೈಗಂಬರರ(ಸ) ಈ ದುಆದ ಕಾರಣದಿಂದ ಹಝ್ರತ್ ಸಅದ್ ದುಆದ ಅಂಗೀಕಾರದ ವಿಷಯದಲ್ಲಿ ಪ್ರಸಿದ್ಧರಾಗಿದ್ದರು. (ಅಲ್‌ಅಸಾಬ ಫೀ ತಮೀಝುಸ್ಸಹಾಬ, ಭಾಗ–2, ಪುಟ–324–325, ದಾರುಲ್ ಫೀಕರ್ ಬೈರೂತ್ ಲೆಬನಾನ್ 2001)

ಹಝ್ರತ್ ಸಅದ್ ಬಿನ್ ಅಬೀ ವಖಾಸ್(ರ) ಅಲ್ಲಾಹನಿಂದ ದುಆ ಸ್ವೀಕಾರದ ಅನುಗ್ರಹ ಲಭಿಸಿದ ವ್ಯಕ್ತಿಯಾಗಿದ್ದರು. ಒಬ್ಬ ವ್ಯಕ್ತಿ ಅವರ ವಿರುದ್ಧ ಸುಳ್ಳಾರೋಪ ಹೊರಿಸಿದರು.ಆಗ ಅವರು ಅವನ ವಿರುದ್ಧ ಹೀಗೆ ದುಆ ಮಾಡಿದರು: ಹೇ ಅಲ್ಲಾಹ್ ಈ ವ್ಯಕ್ತಿ ಸುಳ್ಳು ಹೇಳುತ್ತಿರುವನಾದರೆ, ಅವನ ಕಣ್ಣಿನ ದೃಷ್ಟಿ ನಷ್ಟವಾಗಲಿ ಮತ್ತು ಅವನ ಆಯಸ್ಸು ದೀರ್ಘವಾಗಲಿ. ಅವನನ್ನು ಸಂಕಷ್ಟದಲ್ಲಿ ಸಿಲುಕಿಸು. ಹೀಗೆ ಆ ವ್ಯಕ್ತಿಗೆ ಈ ಎಲ್ಲ ಕಾರ್ಯಗಳು ಸಂಭವಿಸಿತು. (ಜಾಮಿಉಲ್ ಉಲೂವ್ ಡಲ್‌ಹಕವ್ ಫೀ ಶರಹ್ ಖಮ್‌ಸೈನ್, ಸಂಪುಟ–2, ಪುಟ–350, ಮೊಅಸ್ಸುರ್ರಿಸಾಲ ಬೈರೂತ್ 2001)

ಒಂದು ವರದಿಯಲ್ಲಿ ಬರುತ್ತದೆ: ಖೈಸ್ ಬಿನ್ ಅಬೀ ಹಾಝಿಮ್ ಹೇಳುತ್ತಾರೆ: ಒಂದು ಸಲ ನಾನು ಮದೀನದ ಬಾಜಾರಿನಲ್ಲಿ ನಡೆಯುತ್ತಿದ್ದೆ. ನಾನು ಹಿಜಾರುಝ್ಝೈದ್ ಎಂಬ ಜಾಗಕ್ಕೆ ತಲುಪಿದೆ. ಜನರ ಒಂದು ಗುಂಪು ಸವಾರಿಯಲ್ಲಿ ಕುಳಿತಿದ್ದ ಒಬ್ಬ ವ್ಯಕ್ತಿಯ ಸುತ್ತ ನಿಂತಿದ್ದಾಗಿ ನಾನು ನೋಡಿದೆ. ಅವನು ಹಝ್ರತ್ ಅಲೀಯನ್ನು ಬೈಯ್ಯುತ್ತಿದ್ದನು. ಅಷ್ಟರಲ್ಲಿ ಹಝ್ರತ್ ಸಅದ್ ಬಿನ್ ಅಬೀ ವಖಾಸ್(ರ) ಅಲ್ಲಿಗೆ ಬಂದರು. ಜನರೊಂದಿಗೆ ನಿಂತರು. ಏನಾಗಿದೆ ಎಂದು ಅವರನ್ನು ಕೇಳಿದರು. ಜನರು ಹೀಗೆ ಉತ್ತರಕೊಟ್ಟರು: ಈ ವ್ಯಕ್ತಿ ಹಝ್ರತ್ ಅಲಿಯ ಬಗ್ಗೆ ಕೆಟ್ಟದಾಗಿ ಹೇಳುತ್ತಿದ್ದಾನೆ. ಹಝ್ರತ್

ಸಅದ್[ರ] ಮುಂದಕ್ಕೆ ನಡೆದಾಗ ಜನರು ದಾರಿ ಬಿಟ್ಟುಕೊಟ್ಟರು. ಅನಂತರ ಅವರು ಅವನ ಮುಂದೆ ನಿಂತು ಆ ವ್ಯಕ್ತಿಯೊಡನೆ ಹೀಗೆ ಕೇಳಿದರು: ಎಲೈ ಮನುಷ್ಯ, ನೀನು ಹಝ್ರತ್ ಅಲಿಯನ್ನು ಏಕೆ ದೂಷಿಸುತ್ತಿದ್ದೀಯಾ? ಹಝ್ರತ್ ಅಲೀಗೆ ಎಲ್ಲರಿಗಿಂತ ಮುಂಚೆ ಇಸ್ಲಾಮ್ ಸ್ವೀಕರಿಸಿದ ವ್ಯಕ್ತಿಯಲ್ಲವೇ? ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ನಮಾಝ್ ಅನುಷ್ಠಿಸಿದ ಮೊದಲ ವ್ಯಕ್ತಿಯಲ್ಲವೇ? ಅವರು ಜನರಲ್ಲಿ ಅತ್ಯಂತ ಮುತ್ತಖಿ, ದೇವಭಕ್ತರಲ್ಲವೇ? ಅವರು ಜನರಲ್ಲಿ ಅತ್ಯಂತ ಅರಿವುಳ್ಳವರಲ್ಲವೇ? ಹೀಗೆ ಹಝ್ರತ್ ಸಅದ್[ರ] ಹೇಳುತ್ತಾ ಹೋಗಿ ಹೀಗೆಯೂ ಕೇಳಿದರು. ಹಝ್ರತ್ ಪೈಗಂಬರ್[ಸ] ತನ್ನ ಮಗಳನ್ನು ಅವರಿಗೆ ವಿವಾಹ ಮಾಡಿಸಿಕೊಟ್ಟು ಅವರಿಗೆ ಪೈಗಂಬರರ[ಸ] ಅಳಿಯನಾಗುವ ಸೌಭಾಗ್ಯ ನೀಡಲಿಲ್ಲವೇ? ಅವರು ಪೈಗಂಬರರೊಂದಿಗೆ[ಸ] ಯುದ್ಧಗಳಲ್ಲಿ ಧ್ವಜವನ್ನು ಎತ್ತಿಹಿಡಿಯುವವರಾಗಿರಲಿಲ್ಲವೇ? ವರದಿಗಾರ ಹೇಳುತ್ತಾನೆ: ಅನಂತರ ಹಝ್ರತ್ ಸಅದ್ ಖಿಬ್ಲ ಕಡೆಗೆ ತಿರುಗಿ ದುಆ ಮಾಡಲು ಕೈಯೆತ್ತಿದರುಹಾಗು ಹೀಗೆ ದುಆ ಮಾಡಿದರು: ಹೇ ಅಲ್ಲಾಹ್, ಇವನು ಅಲ್ಲಾಹನ ಇಷ್ಟದಾಸರಲ್ಲಿ ಒಬ್ಬ ದಾಸನನ್ನು ಎಂದರೆ ಹಝ್ರತ್ ಅಲೀಯನ್ನು ದೂಷಿಸುತ್ತಿರುವನಾದರೆ, ಈ ಕೂಟ ಚದುರುವ ಮುಂಚಿತವಾಗಿ ನಿನ್ನ ಶಕ್ತಿಯ ಪ್ರಕಟಣೆಯನ್ನು ಮಾಡು. ಮುಸ್ತದ್‌ರಕಿನ ವರದಿ ಇದಾಗಿದೆ. ಖೈಸ್ ಎಂಬ ವರದಿಗಾರ ಹೇಳುತ್ತಾರೆ: ಅಲ್ಲಾಹನಾಣೆ, ನಾವು ಅಲ್ಲಿಂದ ಹೊರಟು ಹೋಗುವುದಕ್ಕೆ ಮುಂಚಿತವಾಗಿ ಆ ವ್ಯಕ್ತಿಯ ಸವಾರಿ ಅವನನ್ನು ಕೆಳಗೆ ಬೀಳಿಸಿತು. ಅವನ ತಲೆಗೆ ತನ್ನ ಕಾಲುಗಳಿಂದ ಕಲ್ಲು ಹೊಡೆಯಿತು. ಅದರಿಂದ ಅವನ ತಲೆ ಒಡೆದು ಮೃತಪಟ್ಟ.
(ಅಲ್‌ಮುಸ್ತದ್‌ರಿಕ್ ಕಿತಾಬ್ ಮಾರಿಫತಿಸ್ಸಹಾಬ ಬಾಬ್ ಸಅದ್ ಬಿನ್ ಅಬೀ ವಖ್ಖಾಸ್, ವರದಿ ಸಂಖ್ಯೆ 6121, ಸಂಪುಟ–3, ಪುಟ–571–572, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 2002)

ಮದೀನ ಹಿಜ್‌ರತ್ ಮಾಡಿದ ಕೂಡಲೇ ರಾತ್ರಿ ಸಮಯದಲ್ಲಿ ಹಝ್ರತ್ ಸಅದ್[ರ] ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಕಾವಲು ನಿಂತ ಹಾಗೆಯೇ, ಅದೇ ರೀತಿಯ ಒಂದು ಘಟನೆ ಖಂದಕ್ ಯುದ್ಧದ ಸಂದರ್ಭದಲ್ಲಿ ನಡೆದದ್ದು ಚರಿತ್ರೆಯಲ್ಲಿ ಕಾಣಬಹುದಾಗಿದೆ. ಇದರ ಬಗ್ಗೆ ವಿವರಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್[ರ] ಹೇಳುತ್ತಾರೆ: ಹಝ್ರತ್ ಆಯಿಷಾ ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಕಾವಲು ನಿಂತು ದಣಿಯುತ್ತಿದ್ದರು. ಇತರ ಸಹಾಬಿವರ್ಯರು ಕಾವಲು ನಿಲ್ಲುವ ಹಾಗೆಯೇ ಪೈಗಂಬರ್[ಸ] ಸಹ ಸಹಾಬರೊಂದಿಗೆ ಕಾವಲು ನಿಲ್ಲುತ್ತಿದ್ದರು. ರಾತ್ರಿಯ ತಂಪಿನಿಂದ ಸುಸ್ತಾಗುತ್ತಿದ್ದರು. ಆಗ ವಾಪಸ್ಸು ಬಂದು ಸ್ವಲ್ಪ ಸಮಯ ನನ್ನೊಂದಿಗೆ ಚಾದರದಲ್ಲಿ ಮಲಗುತ್ತಿದ್ದರು. ಶರೀರ ಸ್ವಲ್ಪ ಬಿಸಿಯಾದ ಕೂಡಲೆ ಪುನಃ ಕಾವಲು ನಿಲ್ಲಲು ಹೋಗುತ್ತಿದ್ದರು. ಹೀಗೆ ನಿರಂತರ ಎಚ್ಚರವಾಗಿರುವುದರಿಂದ ಒಂದು ದಿನ ಪೈಗಂಬರ್[ಸ] ಪೂರ್ಣವಾಗಿ ಬಳಲಿ ಹೋದರು, ಸುಸ್ತಾದರು. ರಾತ್ರಿ ಸಮಯದಲ್ಲಿ ಹೀಗೆ ಹೇಳಿದರು: ಈಗ ಯಾವುದಾದರೂ ನಿಷ್ಠಾವಂತ ಮುಸ್ಲಿಮ್ ಇಲ್ಲಿಗೆ ಬಂದಿದ್ದರೆ ನಾನು ಆರಾಮದಿಂದ ಮಲಗುತ್ತಿದ್ದೆ. ಅಷ್ಟರಲ್ಲೇ ಹೊರಗಿನಿಂದ ಹಝ್ರತ್ ಸಅದ್ ಬಿನ್ ಅಬೀ ವಖಾಸರ[ರ] ಶಬ್ದ ಕೇಳಿಬಂತು. ಪೈಗಂಬರ್[ಸ] ಕೇಳಿದರು: ಏಕೆ ಬಂದಿದ್ದೀಯಾ? ಅವರು ಹೇಳಿದರು: ನಿಮಗೆ ಕಾವಲು ನಿಲ್ಲಲ್ಲು ಬಂದಿರುವೆನು. ಆಗ ಪೈಗಂಬರ್[ಸ] ಹೇಳಿದರು: ನನಗೆ ಕಾವಲು ನಿಲ್ಲಬೇಕಾಗಿಲ್ಲ. ನೀನು ಖಂದಕಿನ ಬಿರುಕು ಬಿಟ್ಟ ಸ್ಥಳಕ್ಕೆ ಹೋಗು ಮತ್ತು ಅಲ್ಲಿ ಕಾವಲು ನಿಲ್ಲು. ಮುಸ್ಲಿಮರು ಸುರಕ್ಷಿತರಾಗುವಂತಾಗಲಿ. ಹೀಗೆ ಸಅದ್[ರ] ಆ ಸ್ಥಳಕ್ಕೆ ಕಾವಲು ನಿಲ್ಲಲ್ಲು ಹೋದರು. ಅನಂತರ ಪೈಗಂಬರ್[ಸ] ಸ್ವಲ್ಪ ಸಮಯಕ್ಕೆ ನಿದ್ದೆ ಹೋದರು. (ದೀಬಾಚ ತಫ್ಸೀರುಲ್ ಖುರ್‌ಆನ್, ಅನ್ವಾರುಲ್ ಉಲೂಮ್, ಸಂಪುಟ–20, ಪುಟ–279)

ಇನ್ನು ಸಅದ್ ಬಿನ್ ವಖಾಸರ[ರ] ಕುರಿತು ಉಳಿದ ಭಾಗ ಮುಂದಿನ ಖುತ್‌ಬಗಳಲ್ಲಿ ಹೇಳಲಾಗುವುದು.

ಈಗ ಇಂದೂ ನಾನು ಎರಡು ಮೂರು ಜನಾಝ ಗ್ಹಾಇಬ್ ನಿರ್ವಹಿಸುವೆನು.ಅವರ ಬಗ್ಗೆ ಹೇಳುತ್ತೇನೆ. ಅವರಲ್ಲಿ ಮೊದಲ ಪ್ರಸ್ತಾಪ ದಿವಂಗತ ಮಾಸ್ಟರ್ ಅಬ್ದುಸ್ಸಮೀಅ್ ಖಾನ್ ಸಾಹಿಬ್ ಕಾಟ್‌ಗಡಿಯದ್ದಾಗಿದೆ.ಅವರು ಜುಲಾಯಿ 6ರಂದು ರಬ್‌ವದಲ್ಲಿ ಮೃತಪಟ್ಟರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರು 1937ರಲ್ಲಿ ಖಾದಿಯಾನಿನಲ್ಲಿ ಜನಿಸಿದರು.ಅವರ ತಂದೆ ಅಬ್ದುರ್ರಹೀಮ್ ಸಾಹಿಬ್ ಕಾಟ್‌ಗಡಿ ಜಮಾಅತಿನ ಹಳೆಯ ಸೇವಕರಲ್ಲಿ ಒಬ್ಬರಾಗಿದ್ದರು. ಅವರ ತಾತ ಹಝ್ರತ್ ಚೌಧರಿ ಅಬ್ದುಸ್ಸಲಾಮ್ ಖಾನ್ ಸಾಹಿಬ್ ಕಾಟ್‌ಗಡಿ ಹಝ್ರತ್ ಮಸೀಹ್ ಮೌಊದ್‌ರ[ಅ] ಅನುಗ್ರಹೀತ ಕೈಯಲ್ಲಿ ಬೈಅತ್ ಮಾಡಿದ್ದರು. ಅವರ ತಾತ 1903ರಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬೈಅತ್ ಮಾಡುವ ಸೌಭಾಗ್ಯವನ್ನು ಪಡೆದರು. ಕೈಯಲ್ಲೇ ಬೈಅತ್ ಮಾಡಿ ಸಹಾಬಿಯಾದರು. ಮಾಸ್ಟರ್ ಸಮೀಅ್ ಸಾಹಿಬರ ಆರಂಭದ ಪ್ರೈಮರಿ ಶಿಕ್ಷಣ ಖಾದಿಯಾನಿನಲ್ಲೇ ನಡೆಯಿತು. ಅನಂತರ ಪಾರ್ಟಿಶನ್ ನಡೆದಾಗ ಮೆಟ್ರಿಕುಲೇಶನ್ ರಬ್‌ವದಲ್ಲಿ ಪೂರ್ತಿ ಮಾಡಿದರು. ಅವರಿಗೆ ಮಕ್ಕಳಾಗಿ ಒಬ್ಬ ಮಗ ಮತ್ತು ಮಗಳು. ಅವರ ಪತ್ನಿ ಮೂರ್‍ನಾಲ್ಕು ವರ್ಷಗಳ ಹಿಂದೆ ಮರಣಹೊಂದಿದ್ದರು. 1960ರಲ್ಲಿ ಬಿ.ಎಸ್.ಸಿ ಮಾಡಿದ ನಂತರ ಅದೇ ವರ್ಷ ತಾತ್ಕಾಲಿಕ ಪೋಸ್ಟ್ ಎಂಬಂತೆ ತಅ್‌ಲೀಮುಲ್ ಇಸ್ಲಾಮ್ ಸ್ಕೂಲಲ್ಲಿ ಕಲಿಸಲು ಶುರುಮಾಡಿದರು. 1962ರಲ್ಲಿ ಬಿ.ಎಡ್.ಪೂರ್ತಿ ಮಾಡಿದರು. ಸ್ಥಾಯಿ ಅಧ್ಯಾಪಕರಾಗಿ ನಿಶ್ಚಯಿಸಲ್ಪಟ್ಟರು. 1969ರಲ್ಲಿ ಪಂಜಾಬ್ ಯೂನಿವರ್ಸಿಟಿ ಲಾಹೋರಿನಿಂದ ಎಂ.ಎಡ್ ಮಾಡಿದರು. ಹೀಗೆ ಸೀನಿಯರ್ ಅಧ್ಯಾಪಕರಾದರು. ಅನಂತರ 1972ರಲ್ಲಿ ತಾಲೀಮುಲ್ ಇಸ್ಲಾಮ್ ಹೈಸ್ಕೂಲ್ ರಬ್‌ವದ ಹೆಡ್‌ಮಾಸ್ಟರಾಗಿ ನಿಯಮಿತರಾದರು. ಅನಂತರ ಸ್ಕೂಲ್ ನೇಶನಲೈಝ್ ಆಯಿತು. ಅನಂತರ 1970ರಲ್ಲಿ ಅವರು ಅಲ್ಲಿಂದ ವರ್ಗಾವಣೆಗೊಂಡರು ಆದರು. ಏಕೆಂದರೆ ಅದು ನೇಶನಲ್ ಸ್ಕೂಲ್ ಆಗಿತ್ತು. ಸರ್ಕಾರ ಅವರನ್ನು ಹೊರಗಿನ ತಮ್ಮ ಬೇರೆ ಸ್ಕೂಲಿಗೆ ವರ್ಗಾವಣೆಗೊಂಡರು ಮಾಡಿದರು. ಹೀಗೆ ಅವರು ವಿವಿಧ ಸ್ಕೂಲುಗಳಲ್ಲಿ ಕಲಿಸುತ್ತಿದ್ದರು. 2005ರಿಂದ 2009 ವರೆಗೆ ಝಿಈಮ್ ಅನ್ಸಾರುಲ್ಲಾಹ್, ಮತ್ತು 2013ರಿಂದ 2016ರ ವರೆಗೆ ಸದರ್ ಹಲ್ಕ ದಾರುರ್ರಹ್ಮತ್ ಪೂರ್ವ ರಬ್ವದಲ್ಲಿ ಸೇವೆ ಮಾಡುವ ಸೌಭಾಗ್ಯವನ್ನು ಪಡೆದರು. ಇವರು ನನ್ನ ಸಹ ಅಧ್ಯಾಪಕರಾಗಿದ್ದರು. ಸ್ಕೂಲಲ್ಲಿ ಬಹಳ ಉತ್ತಮ ರೀತಿಯಲ್ಲಿ ಕಲಿಸುತ್ತಿದ್ದರು. ಮುಖದಲ್ಲಿ ಎಂದೂ ಸೌಮ್ಯಭಾವವಿತ್ತು. ಬಹಳ ಉತ್ತಮ ರೀತಿಯಲ್ಲಿ ಮನವರಿಕೆ ಮಾಡಿಸುತ್ತಿದ್ದರು. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಅವರ ಪದವಿಗಳನ್ನು ಉನ್ನತಗೊಳಿಸಲಿ. ಅವರ ಮಕ್ಕಳನ್ನು ಸಹ ಯಾವಾಗಲೂ ಜಮಾಅತ್ ಮತ್ತು ಖಿಲಾಫತ್‌ನೊಂದಿಗೆ ಜೋಡಿಸಿಡಲಿ.

ಎರಡನೇ ಜನಾಝ ದಿವಂಗತ ಸಯ್ಯದ್ ಮುಜೀಬುಲ್ಲಾಹ್ ಸಾದಿಕ್ ಸಾಹಿಬರದ್ದಾಗಿದೆ. ಮೇ 28ರಂದು 83ನೇ ವಯಸ್ಸಿನಲ್ಲಿ ಮೃತಪಟ್ಟರು. **ಇನ್ನಾ ಲಿಲ್ಲಾಹಿ ವ ಇನ್ನಾ ಲಿಲ್ಲಾಹಿ ರಾಜಿಊನ್**. ಅವರು ಸಯ್ಯದ್ ಸಾದಿಕ್ ಅಲಿ ಸಾಹಿಬ್ ಮತ್ತು ಸಯ್ಯದ ಸಲ್ಮ ಸಾಹಿಬ್ ಬಿನ್ತ್ ಸಯ್ಯದ್ ಮಹ್ಬೂಬ್ ಆಲಮ್ ಬಿಹಾರಿ ಸಾಹಿಬರ ಮಗನಾಗಿದ್ದರು. ಖಾದಿಯಾನಿನ ಪರಿಶುದ್ಧ ನಾಡಲ್ಲಿ ಜನಿಸಿದರು. ಖಾದಿಯಾನಿನ ಪರಿಶುದ್ಧ ವಾತಾವರಣದಲ್ಲಿ ಬೆಳೆದರು. ಅವರ ತಂದೆ ಸಯ್ಯದ್ ಸಾದಿಕ್ ಅಲಿ ಸಾಹಿಬ್ ಆಫ್ ಸಹಾರನ್‌ಪುರ್ ಹಝ್ರತ್ ಖಲೀಫತುಲ್ ಮಸೀಹ್ ಅವ್ವಲರ ಅನುಗ್ರಹೀತ ಕೈಯಲ್ಲಿ ಬೈಅತ್ ಮಾಡುವ ಸೌಭಾಗ್ಯ ಪಡೆದರು. ಅವರ ತಾತ ಹಝ್ರತ್ ಸಯ್ಯದ್ ಮಹ್ಬೂಬ್ ಆಲಮ್ ಬಿಹಾರಿ ಸಾಹಿಬರು ಪಾರ್ಟಿಶನ್ ಸಮಯದಲ್ಲಿ 19 ಸೆಪ್ಟೆಂಬರ್ 1947ರಲ್ಲಿ ಖಾದಿಯಾನನಲ್ಲಿ ಯಾವುದೋ ವಿರೋಧಿಯ ಬಂದೂಕಿನಿಂದ ಶಹೀದ್ ಆಗುವ ಸೌಭಾಗ್ಯ ಪಡೆದರು. ಅದೇ ರೀತಿಯಲ್ಲಿ ಅವರ ತಾತನ ಸೋದರ ಮಹ್ಬೂಬ್ ಆಲಮ್ ಸಾಹಿಬರು ಸದರ್ ಅಂಜುಮನ್ ಅಹ್ಮದಿಯಾದ ಆಡಿಟರ್ ಆಗಿದ್ದರು. ಅವರು ಬಿಹಾರಿನಿಂದ ನಡೆದುಕೊಂಡು ಖಾದಿಯಾನಿಗೆ ಬರುವ ಸೌಭಾಗ್ಯವನ್ನು ಪಡೆದರು. ಆಮೇಲೆ ರಿಟಾಯರ್ಮೆಂಟ್ ನಂತರ ಸನ್ಮಾನ್ಯ ಅಮೀರ್ ಸಾಹಿಬ್ ಬ್ರಿಟೇನಿನ ಆಫೀಸಲ್ಲಿ ಸ್ವಯಂ ಸೇವಕ ಉದ್ಯೋಗಿಯಾಗಿ 16ವರ್ಷಗಳ ಕಾಲ ಸೇವೆ ಮಾಡುತ್ತಿದ್ದರು. ತುಂಬ ಪರಿಶ್ರಮದಿಂದ ತಮ್ಮ ಡ್ಯೂಟಿಯನ್ನು ಮಾಡುತ್ತಿದ್ದರು. ಅವರ ಮುಖದಲ್ಲಿ ಯಾವಾಗಲು ಸೌಮ್ಯ ಮತ್ತು ಮುಗುಳ್ನಗೆಯ ಕೋಮಲತೆ ಇರುತ್ತಿತ್ತು.ರಸಿಕ ಸ್ವಭಾವದವರಾಗಿದ್ದರು. ಕೆಲಸ ಬಹಳ ಶ್ರದ್ಧೆಯಿಂದ ಮಾಡುತ್ತಿದ್ದರು. ಎಂದೂ ತಮ್ಮ ಕೆಲಸವನ್ನು ಭಾರವೆಂದು ಭಾವಿಸುತ್ತಿರಲಿಲ್ಲ. ಮಾತ್ರವಲ್ಲ, ಬೇರೆಯವರನ್ನು ತೊಂದರೆಗೆ ಒಳಪಡಿಸುತ್ತಿರಲಿಲ್ಲ. ಬೇರೆಯವರ ಕೆಲಸ ಕೂಡ ಹೆಚ್ಚು ಹೆಚ್ಚು ಸ್ವತಃ ಮಾಡಲು ಪ್ರಯತ್ನಿಸುತ್ತಿದ್ದರು. ಅವರ ವಿವಾಹ ಸನ್ಮಾನ್ಯ ಬಾಬು ಮುಹಮ್ಮದ್ ಆಲಮ್ ಸಾಹಿಬ್ ರಿಟಾಯರ್‌ಡ್ ಸ್ಟೇಶನ್ ಮಾಸ್ಟರರ ಮಗಳು ಆಯಿಶಾ ಸಾದಿಖ ಸಾಹಿಬರೊಂದಿಗೆ ನಡೆಯಿತು. ಅವರು ರಬ್ವದಲ್ಲಿ ಇದ್ದರು. 1968ರಲ್ಲಿ ಅವರ ಪತ್ನಿಗೂ ರಬ್ವದಲ್ಲಿ ಲಜ್‌ನಾದ ವಿವಿಧ ವಿಭಾಗಗಳಲ್ಲಿ ಕೆಲಸಮಾಡುವ ಸೌಭಾಗ್ಯ ಲಭಿಸಿತು. ಅವರಿಗೆ ಇಬ್ಬರು ಮಗ ಮತ್ತು ಇಬ್ಬರು ಮಗಳು ಇರುವರು. ಡಾಕ್ಟರ್ ಕಲೀಮುಲ್ಲಾಹ್ ಸಾದಿಕ್ ಸಾಹಿಬ್ ಎಂ.ಟಿ. ಎ. ದಲ್ಲಿ ತುಂಬಾ ಸ್ವಯಂ ಸೇವಕರಾಗಿ ಕೆಲಸ ಮಾಡುತ್ತಿರುತ್ತಾರೆ. ಅಲ್ಲಾಹನ ಕೃಪೆಯಿಂದ ತಹಜ್ಜುದ್ ನಮಾಝ್ ನಿರ್ವಹಿಸುವವರಾಗಿದ್ದರು. ಉಮ್ರ ಮಾಡಲು ಹೋಗಿದ್ದರು. ಅವರ ಮೊಣಕಾಲಲ್ಲಿ ತುಂಬ ನೋವು ಇತ್ತು. ಅವರ ಪತ್ನಿ ಹೇಳುತ್ತಾರೆ: ಅವರಿಗೆ ವ್ಹೀಲ್ ಚೇರ್ ಒದಗಿಸಿಕೊಟ್ಟಾಗ ಅವರು ಹೇಳಿದರು, ನಾನು ಉಮ್ರದ ಪ್ರತಿಫಲವನ್ನು ಪಡೆಯಲು ಇಚ್ಛಿಸುತ್ತೇನೆ. ಆದ್ದರಿಂದ ನಡೆದುಕೊಂಡೇ ಹೋಗುತ್ತೇನೆ. ಅದೇ ರೀತಿಯಲ್ಲಿ ತನ್ನ ಚಂದಾಗಳ ಬಗ್ಗೆ ತುಂಬ ಚಿಂತೆ ಇರುತ್ತಿತ್ತು. ಅವರ ಮಕ್ಕಳು ಮತ್ತು ಇತರ ಹಲವು ಜನರು ನನಗೆ ಪತ್ರಗಳನ್ನು ಬರೆದಿದ್ದಾರೆ. ಅವರ ಒಳಿತುಗಳನ್ನು ಹೇಳಿದ್ದಾರೆ. ಮಕ್ಕಳು ಒಳಿತುಗಳನ್ನು ಸಾಮಾನ್ಯವಾಗಿ ಹೇಳುತ್ತಾರೆ. ಅವರ ಮಕ್ಕಳು ಮಾಶಾಅಲ್ಲಾಹ್

ಜಮಾಅತಿನೊಂದಿಗೆ ಸೇರಿಕೊಂಡಿರುವರು. ಅವರು ಖಿಲಾಫತ್ ಮತ್ತು ಜಮಾಅತಿನೊಡನೆ ಪ್ರೀತಿಯನ್ನು ಮಕ್ಕಳ ಹೃದಯಗಳಲ್ಲಿ ಉಂಟುಮಾಡಿರುವರು ಎಂದು ಇದರಿಂದ ಸ್ಪಷ್ಟವಾಗುತ್ತದೆ. ಬಹಳ ಉತ್ತಮ ರೀತಿಯಲ್ಲಿ ತರ್‌ಬಿಯತ್ ನೀಡಿದ್ದಾರೆ.ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದಂತೆ ನೆರೆಕರೆಯವರು ಮತ್ತು ವ್ಯಕ್ತಿಯೊಂದಿಗೆ ಭೇಟಿಯಾಗುತ್ತಿರುವವರು ಒಬ್ಬ ವ್ಯಕ್ತಿಯ ಒಳಿತುಗಳ, ವ್ಯಕ್ತಿಯ ಸ್ವಭಾವದ ಸರಿಯಾದ ಸಾಕ್ಷಿಗಳಾಗಿರುತ್ತಾರೆ. ಅವರು ಒಳಿತುಗಳನ್ನು ಸತ್ಯಪಡಿಸುವವರು ಅವರಾಗಿರುತ್ತಾರೆ. ಈ ಸಂಗತಿ ಮುಜೀಬುಲ್ಲಾಹ್ ಸಾದಿಕ್ ಸಾಹಿಬರಲ್ಲಿ ನಿಜವಾಗಿಯೂ ಸರಿಯಾಗಿದೆ. ಅವರ ಮುಸ್ಲಿಮೇತರ ನೆರೆಕರೆಯವನು ಸಹ ಅವರ ಸೇವೆ ಮಾಡುತ್ತಿದ್ದರು. ಮಕ್ಕಳಿಂದಲೂ ಸೇವೆ ಮಾಡಿಸುತ್ತಿದ್ದರು. ಅವರ ಮರಣದಿಂದ ತುಂಬ ದುಃಖಿತರಾದರು. ಅದೇ ರೀತಿಯಲ್ಲಿ ಅವರ ಆಫೀಸಿನಲ್ಲಿ ಕೆಲಸಮಾಡುವ ಪ್ರತಿಯೊಬ್ಬ ವ್ಯಕ್ತಿ ಅವರ ಸುಸ್ವಭಾವ ಮತ್ತು ಕೆಲಸದಲ್ಲಿ ನಿರತ ಮತ್ತು ಮಗ್ನರಾಗಿರುವುದರ ಹಾಗು ಪ್ರತಿಯೊಬ್ಬ ಉದ್ಯೋಗಿಯ ಸೇವೆ ಮಾಡುವ ಬಗ್ಗೆ ವಿಶೇಷವಾಗಿ ಪ್ರಸ್ತಾಪಿಸಿದ್ದಾರೆ. ಕೆಲಸ ಸಹ ಮಾಡುತ್ತಿದ್ದರು, ಜನರ ಸೇವೆ ಸಹ ಮಾಡುತ್ತಿದ್ದರು. ಚಾಹ ಇತ್ಯಾದಿ ಇತರರಿಗೆ ಹಣ ಪಾವತಿಸಿ ಕುಡಿಸುತ್ತಿದ್ದರು. ನಾನು ಕಳೆದ ವರ್ಷ ಇಸ್ಲಾಮಾಬಾದಿಗೆ ಬಂದಾಗ, ಅವರಿಗೆ ಇದ್ದ ಚಿಂತೆಯನ್ನು ಅವರು ನನ್ನನ್ನು ಭೇಟಿಯಾದಾಗ ವ್ಯಕ್ತಪಡಿಸಿದರು. ಅದೇನಾಗಿತ್ತೆಂದರೆ, ಈಗ ನಾವು ನಮ್ಮ ಹಿಂದೆ ಜುಮಾ ಹೇಗೆ ನಿರ್ವಹಿಸುವುದು, ಹೇಗಿದ್ದರೂ ನಾನು ಅವರನ್ನು ಸಮಾಧಾನಪಡಿಸಿದೆ. ಇನ್‌ಶಾ ಅಲ್ಲಾಹ್ ಹೆಚ್ಚಿನ ಜುಮಾ ಬೈತುಲ್ ಫುತೂಹ್‌ನಲ್ಲಿ ನಡೆಯುವುದು ಮತ್ತು ಇಸ್ಲಾಮಾಬಾದಿನಲ್ಲಿ ಜುಮಾ ನಡೆಯುವಾಗ ಅಲ್ಲಿಗೂ ಬರಬಹುದಾಗಿದೆ ಎಂದು ಹೇಳಿದೆ. ಈ ಮಾತು ಕೇಳಿ ಅವರ ಮುಖಕಾಂತಿ ಮರಳಿ ಬಂತು. ಇದೇ ಕಾರಣದಿಂದ ಅವರು ತಮ್ಮ ಮಕ್ಕಳನ್ನು ಮಸೀದಿಯ ಸಮೀಪವಿರಿಸಲು ಖಲೀಫತುಲ್ ಮಸೀಹ್ ರಾಬಿರ ಹಿಜ್‌ರತಿನ ನಂತರ ಮಸ್ಜಿದ್ ಫಝ್ಲಿನ ಸಮೀಪ ಮನೆ ಖರೀದಿಸಿದರು ಮತ್ತು ದಿನಾಲೂ ಒಂದು ಗಂಟೆ ಯಾತ್ರೆ ಮಾಡಿ ಕೆಲಸಕ್ಕಾಗಿ ಹೋಗಬೇಕಾಗುತ್ತಿತ್ತು. ಮಕ್ಕಳು ಮಸೀದಿಯೊಂದಿಗೆ ಅಟಾಚ್ ಆಗಿರಲು, ಸೇರಿ ಇರಲು, ಇದೇ ಚಿಂತೆ ಅವರಿಗೆ ಈಗಲೂ ಇತ್ತು. ನಾನು ದೂರ ಹೋದರೆ ನನ್ನ ಹಿಂದೆ ಜುಮಾ ಹೇಗೆ ನಿರ್ವಹಿಸುವುದು ಎಂದು. ಹೇಗಿದ್ದರೂ ಅತ್ಯಂತ ಪ್ರಾಮಾಣಿಕ ಮತ್ತು ಒಳ್ಳೆಯ ವ್ಯಕ್ತಿಯಾಗಿದ್ದರು. ಬಹಳ ನಿಷ್ಠೆಯಿಂದ ಅವರು ತನ್ನ ಜೀವನವನ್ನು ಸಾಗಿಸಿದರು. ಈ ನಿಷ್ಠೆಯನ್ನು ತಮ್ಮ ಮಕ್ಕಳಲ್ಲಿ ಉಂಟುಮಾಡಲು ಪ್ರಯತ್ನಿಸಿದರು. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಅವರ ಪದವಿಗಳನ್ನು ಉನ್ನತಗೊಳಿಸಲಿ. ಅವರ ಮಕ್ಕಳನ್ನು ಸಹ ಯಾವಾಗಲೂ ಜಮಾಅತ್ ಮತ್ತು ಖಿಲಾಫತ್‌ನೊಂದಿಗೆ ಅವರ ಇಚ್ಛೆಯ ಪ್ರಕಾರ, ಅದಕ್ಕಿಂತ ಹೆಚ್ಚಾಗಿ ಅಂಟಿಕೊಂಡಿರಲು ಸೌಭಾಗ್ಯ ನೀಡಲಿ. ಅವರ ಪತ್ನಿಯನ್ನೂ ತನ್ನ ಸಂರಕ್ಷಣೆಯಲ್ಲಿ ಇರಿಸಲಿ, ಅವರನ್ನು ಶಾಂತಿ ಮತ್ತು ಸಮಾಧಾನದಿಂದ ಇರಿಸಲಿ.

ಮೂರನೇ ಜನಾಝ್ಹ, ಅದರ ಬಗ್ಗೆ ನಾನು ಹಿಂದೆ ಸಹ ಹೇಳಿದ್ದೆ, ಕಳೆದ ಜುಮಾ ನಿರ್ವಹಿಸಲು ಬಾಕಿಯಿತ್ತು. ಅವರು ನಮ್ಮ ಹಳೆಯ ಉದ್ಯೋಗಿ ಮತ್ತು ಅಲ್ಲಾಹನ ಮಾರ್ಗದಲ್ಲಿ ಸೆರೆಯಾಳು ಆಗಿದ್ದ ದಿವಂಗತ ರಾಣಾ ನಈಮುದ್ದೀನ್ ಸಾಹಿಬ್ ಆಗಿರುವರು.ಅವರ ಜನಾಝ್ಹ, ನಾನು ಜುಮಾದ ನಂತರ ನರ್ವಹಿಸಲಿರುವ ಜನಾಝ್ಹಗಳಲ್ಲಿ ಸೇರಿಸುವೆನು.ಅಲ್ಲಾಹನು ಅವರೊಂದಿಗೆಲ್ಲ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. **ಆಮೀನ್**

****************

*(ಪುಟ ಸಂಖ್ಯೆ* **01**ರ *ಉಳಿದ ಭಾಗ)*

ನೋಡಿದರೆ ಎಲ್ಲೆಲ್ಲಿ ನಮಾಝ್ ನಿರ್ವಹಿಸಲು ಆಜ್ಞೆ ಇದೆಯೋ ಅಲ್ಲಿ ಜಮಾಅತ್ತಿನೊಂದಿಗೆ ನಮಾಝ್ ನಿರ್ವಹಿಸಬೇಕೆಂಬ ಪದಗಳು ಉಪಯೋಗಿಸಲಾಗಿದೆ. ಅದರಿಂದ ಸ್ಪಷ್ಠವಾಗಿ ತಿಳಿದು ಬರುವುದೇನೆಂದರೆ ಪವಿತ್ರ ಖುರ್‌ಆನ್‌ನ ದೃಷ್ಠಿಯಲ್ಲಿ ಜಮಾಅತ್ತಿನೊಂದಿಗಿನ ನಮಾಝ್ ಮಾತ್ರ ನಮಾಝ್ ಎಂದು ಪರಿಗಣಿಸಲಾಗಿದೆ. ಯಾವುದೆ ಅತೀ ಅವಶ್ಯಕ ಸಂಧರ್ಭ ಹೊರತುಪಡಿಸಿ. ಆದುದರಿಂದ ಯಾವ ವ್ಯಕ್ತಿಯು ಅಸ್ವಸ್ಥ ಅಥವಾ ನಗರದಿಂದ ಹೊರಗಿರುವಾಗ ಅಥವಾ ಮರೆವಿನಿಂದಾಗಿ ಅಥವಾ ಇತರ ಮುಸ್ಲಿಮರು ಹಾಜರಿದ್ದಾಗ ಹೊರತುಪಡಿಸಿ ಜಮಾಅತ್ತಿನೊಂದಿಗೆ ನಮಾಝ್ ಮಾಡದಿರುವುದು. ಅವನ ಮನೆಯಲ್ಲಿ ನಮಾಝ್ ನಿರ್ವಹಿಸಿಕೊಂಡರೂ ನಮಾಝ್ ಆಗದು. ಮತ್ತು ಅವನ ನಮಾಝ್ ವಂಚನೆ ಎಂದು ಪರಿಗಣಿಸಲಾಗುವುದು.

ಪವಿತ್ರ ಖುರ್‌ಆನಿನಲ್ಲಿ ನಮಾಝ್ ಕುರಿತು ಆಜ್ಞೆ ಬಂದಾಗಲೆಲ್ಲ ಅಖಿಮಿಸ್ಸಲಾತ್ ಎಂಬ ಪದದೊಂದಿಗೆಯೇ ಬಂದಿದೆ ಹೊರತು ಸಲ್ಲೂ ಎಂಬ ಪದ ಬಳಕೆಯಾಗಲಿಲ್ಲ. ಇದು ಸೂಚಿಸುವುದೇನೆಂದರೆ ಫರ್ಝ್ (ಕಡ್ಡಾಯವಾದ) ನಮಾಝನ್ನು ಜಮಾಅತ್ತಿನೊಂದಿಗೆ ನಿರ್ವಹಿಸುವುದೇ ಕಡ್ಡಾಯವಾಗಿರುತ್ತದೆ. ಜಮಾಅತ್ ಇಲ್ಲದೆ ಕೇವಲ ಅನಿವಾರ್ಯ ಪರಿಸ್ಥಿತಿಗಳಲ್ಲಿ, ಉದಾಹರಣೆಗೆ: ನಿಂತುಕೊಂಡು ನಮಾಝ್ ಮಾಡಲು ಅಶಕ್ತನಾಗಿದ್ದರೆ ಅವನಿಗೆ ಕುಳಿತುಕೊಂಡು ನಮಾಝ್ ನಿರ್ವಹಿಸಲು ಅನುಮತಿ ಇದೆ. ಅವನಿಗೆ ನಿಂತುಕೊಂಡು ನಮಾಝ್ ನಿರ್ವಹಿಸಲು ಸಾಧ್ಯವಾಗಿದ್ದರೂ ಆತನು ಕುಳಿತುಕೊಂಡು ನಮಾಝ್ ನಿರ್ವಹಿಸಿದರೆ ಪಾಪಿಷ್ಟನಾಗುವನು, ಅದೇ ರಿತಿ ಜಮಾಅತ್ತಿನೊಂದಿಗೆ ನಮಾಝ್ ಮಾಡುವ ಅವಕಾಶವಿದ್ದರೂ ಜಮಾಅತ್ತಿನೊಂದಿಗೆ ನಮಾಝ್ ನಿರ್ವಹಿಸದಿದ್ದರೆ ಅವನು ಸಹ ಪಾಪಿಷ್ಟನಾಗುತ್ತಾನೆ.

ಇಂದು ಹಲವಾರು ಜನರು ಜಮಾಅತ್ತಿನೊಂದಿಗೆ ನಮಾಝ್ ನಿರ್ವಹಿಸಲು ಉದಾಸೀನತೆ ತೋರುವವರಾಗಿದ್ದಾರೆ. ಮಾತುಕತೆಯಲ್ಲಿ ತೊಡಗಿರುತ್ತಾರೆ, ನಮಾಝ್ ಆಗಿ ಹೋಗಿರುತ್ತದೆ ನಂತರ ವಿಷಾಧ ಸೂಚಿಸುತ್ತಾರೆ. ನಮಾಝ್ ಹೋಯಿತು ಎಂದು. ಅಂತಹವರು ತುಂಬ ಜಾಗರೂಕತೆ ವಹಿಸಬೇಕು ಏಕೆಂದರೆ ಅಲ್ಪ ಪ್ರಮಾಣದ ಅಜಾಗರೂಕತೆಯಿಂದ ಬಹಳ ದೊಡ್ಡ ಪುಣ್ಯಗಳಿಂದ ವಂಚಿತರಾಗುತ್ತಾರೆ.

**(ತಫ್‌ಸೀರೆ ಕಬೀರ್ ಸಂಪುಟ–1, ಪುಟ–105, ಮುದ್ರಣ 2010 ಖಾದಿಯಾನ್)**

*(ಪುಟ ಸಂಖ್ಯೆ* **02**ರ *ಉಳಿದ ಭಾಗ)*

ಮಾಡಿ ತಮ್ಮ ಎದುರಾಳಿಯ ಬಾಯಿ ಮುಚ್ಚಿಸಬಹುದೆಂದು ಭಾವಿಸಿದ್ದರೇನು? ಅಂತೆಯೇ ಲಾಲಾ ಸಾಹೀಬರ ಒಂದು ಆಕ್ಷೇಪ ಹೀಗಿತ್ತು......"

"ಮಿರ್ಝಾ ಸಾಹಿಬ್ ನಿಮ್ಮ ವಿಶ್ವಾಸ ನೆನಪು ಮಾಡಿಕೊಳ್ಳಿ. ಮನುಷ್ಯನು ತೀರಿಕೊಂಡ ಮೇಲೆ ಮುಕ್ತಿ ಪಡೆದು ಒಂದು ಸ್ವರ್ಗದ ಮನೆಗೆ ಹೋಗುವನು. ಅಲ್ಲಿ ಉತ್ತಮವಾದ ಒಂದು ತೋಟವಿದೆ, ಒಳ್ಳೆಯ ಮಹಿಳೆಯರು ಅಥವಾ ಹೂರುಗಳಿದ್ದಾವೆ, ಸಾರಾಯಿಯ ಸರತ್ತುಗಳು ಇವೆ ಅಂದರೆ ಮುಕ್ತಿಯ ನಂತರವೂ ಲೌಕಿಕ ಸಾಮಾನುಗಳಿವೆ. ಅದಕ್ಕಿಂತ ಹೆಚ್ಚೇನೂ ಇಲ್ಲ. ಬದಲು ಅಲ್ಲಿ ಇಲ್ಲಿ ನಿಷಿದ್ಧಗೊಂಡ ವಸ್ತುಗಳು ಉದಾಹರಣೆಗೆ ಸರಾಯಿ ಮತ್ತು ಸ್ತ್ರೀಯರು ಅಲ್ಲಿ ಇರುವವು. (ಸುರ್ಮಾ ಚಶ್ಮ ಆರ್ಯ ರೂಹಾನಿ ಖಝಾಯೀನ್ ಸಂಪುಟ–2, ಪುಟ–150)

ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅದಕ್ಕೆ ಉತ್ತರವಾಗಿ ಬರೆಯುತ್ತಾರೆ: ನಿಮ್ಮ ಈ ಆಕ್ಷೇಪ ಮುಸ್ಲಿಮರ ಸ್ವರ್ಗದಲ್ಲಿ ಲೌಕಿಕ ಅನುಗ್ರಹಗಳು ಇರುವವು, ಇದು ಆಕ್ಷೇಪರ್ಹ ಮಾತೇನಲ್ಲ ಬದಲು ಅದರಿಂದ ನಿಮಗೆ ಮತ್ತು ನಿಮ್ಮ ಪರಮೇಶ್ವರನಗೆ ನಾಚಿಕೆ ಪಡಬೇಕಾಗಿದೆ ಏಕೆಂದರೆ ಮುಸ್ಲಿಮರ ಸರ್ವಶಕ್ತನಾದ ಅಲ್ಲಾಹನು ನಿರಪೇಕ್ಷನು, ಶಾಶ್ವತವಾದ ನೆಲೆಯಲ್ಲಿ ತಮ್ಮ ಅಗಣಿತ ಖಜಾನೆಗಳಿಂದ ಪರಲೋಕದಲ್ಲಿ ಪವಿತ್ರ ಖುರ್‌ಆನ್ ಮೇಲೆ ವಿಶ್ವಾಸ ತಂದವರಿಗೆ ನೀಡಿದ್ದಾನೆ. ಶಾರೀರಿಕ ಹಾಗೂ ಆಧ್ಯಾತ್ಮಿಕ ಎರಡು ಅನುಗ್ರಹಗಳಿಂದ ಅನುಗ್ರಹಿತರನ್ನಾಗಿ ಮಾಡಿದ್ದಾನೆ. ಏಕೆಂದರೆ ಅವನು ಬಲ್ಲವನಾಗಿದ್ದಾನೆ, ಅವರು ತನ್ನ ನಿಷ್ಠಾವಂತ ದಾಸರಾಗಿದ್ದಾರೆ ಎಂದು. ಅವರು ಕೇವಲ ಇಹಲೋಕದಲ್ಲಿ ಮಾತ್ರ ಆತ್ಮಾರ್ಥವಾಗಿ ಅವನಲ್ಲಿ ಆರಾಧನೆ ಮತ್ತು ಅನುಸರಣೆ ಮಾಡುತ್ತಿಲ್ಲ ಬದಲಾಗಿ ಆತ್ಮ ಶರೀರ ಸಮೇತ ಮಾಡುತ್ತಿದ್ದಾರೆ. ಅಂತೆಯೇ ಮನುಷ್ಯ ಸೃಷ್ಠಿಯ ಮಹಾನತೆ ಕೇವಲ ಆತ್ಮದಿಂದ ಹುಟ್ಟುವುದಿಲ್ಲ ಬದಲಾಗಿ ಆತ್ಮ ಮತ್ತು ಶರೀರದ ಸಮ್ಮಿಲನದಿಂದ ಹುಟ್ಟುತ್ತದೆ. ಆದ ಕಾರಣ ಅವನು ನಿಷ್ಠಾವಂತರನ್ನು ಮತ್ತು ವಿಧೇಯರನ್ನು ಪುನೀತಗೊಳಿಸಲು ಮತ್ತು ಅವರಿಗೆ ಪೂರ್ಣರೂಪದ ಪುಣ್ಯ ನೀಡಲು ಶಾಶ್ವತವಾದ ಮುಕ್ತಿಯ ಸಾಧನಗಳನ್ನು ಮತ್ತು ಸಂತೋಷಗಳನ್ನು ಎರಡೂ ವಿಧಗಳಲ್ಲಿ ಅವಲಂಬಿತನಾಗಿ ಮಾಡಿದ್ದಾನೆ. ಅವರ ಪ್ರೀತಿಯ ಸ್ವಾಮಿಯ ಸಾನಧ್ಯದ ಸ್ವಾದವನ್ನೂ ನೀಡಿದ್ದಾನೆ ಮತ್ತು ಇತರ ಅನುಗ್ರಹಗಳನ್ನು ಸಹ ಮಳೆಯ ರೂಪದಲ್ಲಿ ಅವರ ಮೇಲೆ ಸುರಿಸಿದ್ದಾನೆ. ಹೀಗೆ ಅವನು ಆ ಕಾರ್ಯಗಳನ್ನು ಮಾಡಿ ತೋರಿಸಿದ್ದಾನೆ, ಅದು ಅವನು ಸರ್ವಶಕ್ತನಾದುದಕ್ಕೆ, ಪ್ರತಾಪಶಾಲಿಯಾದುದಕ್ಕೆ ಮತ್ತು ಅತ್ಯಂತ ಕರುಣಾಳು ಎಂಬುದಕ್ಕೆ ಸಾಕ್ಷಿಯಾಗಿದೆ. ಆದರೆ ನಿಮ್ಮ ಪರಮೇಶ್ವರ ದರಿದ್ರ ಮತ್ತು ನಿಶ್ಶಕ್ತನಾಗಿ ಕಂಡುಬಂದನು ಮತ್ತು ತನ್ನ ವಿವಶತೆ ಹಾಗೂ ಬಡತನ ಹಾಗೂ ದಾರಿದ್ರ್ಯತೆ ಹಾಗೂ ನಿಶ್ಶಕ್ತ್ಯದಿಂದಾಗಿ ನಿಮಗೆ ಆಶ್ರಯವಿಲ್ಲದಂತೆ ಮಾಡಿದನು. ಶಾಶ್ವತವಾದ ಸಂತೋಷ ನೀಡಿದಂತಾಯಿತು. ಏನೂ ಮಾಡಲಾಗಲಿಲ್ಲ, ಆಧ್ಯಾತ್ಮಿಕ ಅನುಗ್ರಹಗಳನ್ನು ಶಾಶ್ವತವಾಗಿ ನೀಡಲಾಗಲಿಲ್ಲ. ಶಾರೀರಿಕ ಸಹ. ........ ಇಂತಹ ಜಿಪುಣ, ನಿಶ್ಶಕ್ತ ಮತ್ತು ದಡ್ಡ ಪರಮೇಶ್ವನೊಂದಿಗೆ ಪ್ರೀತಿ ಉಂಟಾಗಲು ಸಾಧ್ಯವೆ? ಪರಿಶುದ್ಧ ಮನಸ್ಸಿನಿಂದ ಅವನನ್ನು ನಂಬಬಹುದೇ? ಖಂಡಿತವಾಗಿಯು ಇಲ್ಲ. ಅಷ್ಟೇ ಅಲ್ಲ, ಅವನ ದೇವತ್ವ, ಔದಾರ್ಯ ಮತ್ತು ಗೌರವದ ನಿಜಸ್ಥಿತಿ ಬಯಲಾದಾಗ ಜಪಗಳನ್ನು ಮಾಡುವವರ ಆತ್ಮಗಳು ವಿಷಾಧಿಸುತ್ತಿರಬಹುದು ಮತ್ತು ನಾಚಿಕೆಪಡುತ್ತಿರಬಹುದು. ಇಂತಹವನೇ ಪರಮೇಶ್ವರನಾದರೆ ಮತ್ತು ಇದೇ ಅವನ ಮುಕ್ತಿಯಾದರೆ ಏಕೆ ನಾವು ಅನಾವಶ್ಯಕವಾಗಿ ಭಕ್ತಿ ತೋರಿಸಬೇಕು? ಮುಕ್ತಿಯಿಂದ ವಂಚಿತರನ್ನಾಗಿಸಿ ಹೊರದಬ್ಬುತ್ತಿರವಾಗ ಈ ವಿಷಯಾಧಾರಿತ ಕವನ ಸಾಲನ್ನು ಅತ್ತತ್ತು ಪಠಿಸುತ್ತಿರಬಹುದು:

**ಅಬ್ ತು ಕುಚ್ಛ್ ಸಮಜ್ ಕೆ ಜಾನ್ ತುಜ್‌ಪೆ ಕರೇಂಗೆ ಖುರ್‌ಬಾನ್**
**ಹಮ್‌ತೋ ಇಸ್‌ರೋಝ್ ಕೊ ಪಚ್‌ತಾತೆಹೈಂ ಜಬ್ ದಿಲ್ ಹಿ ದಿಯಾ**

(ನಾವು ಮನಸಾರೆ ನಿನ್ನ ಭಕ್ತಿ ಮಾಡಿದುದಕ್ಕೆ ಪಶ್ಚಾತ್ತಾಪ ಪಡುತ್ತೇವೆ, ಇನ್ನು ಮುಂದೆ ಸ್ವಲ್ಪವಾದರು ತಿಳಿದು ಜೀವದ ಬಲಿದಾನ ಮಾಡುವೆವು)

......... ಒಂದು ತಪ್ಪು ಅಥವಾ ಪಾಪಕ್ಕಾಗಿ ಒಂದು ಲಕ್ಷ ಮತ್ತು ಸಹಸ್ರ ಜನ್ಮ (ಪುನರ್ಜೀವನ) ಶಿಕ್ಷೆ ವಿಧಿಸಲ್ಪಟ್ಟರೆ, ಒಂದಷ್ಟು ಕ್ಷಣಮಾತ್ರಕ್ಕೂ ದೇವರಿಂದ ದೂರವಾಗುವುದು ಪಾಪವೆಂದಾದರೆ ಮುಕ್ತಿ ಪಡೆಯಲು ಯಾವ ಮಾರ್ಗ ಬಾಕಿ ಇದೆ? ಆದುದರಿಂದ ನೀವು ವಾಸ್ತವವನ್ನು ತಿಳಿದುಕೊಳ್ಳವವರಾದರೆ ನಿಮ್ಮ ನಿರಾಶಾಜನಕ ಸ್ಥಿತಿಯ ಮೇಲೆ ಶೋಕ ವ್ಯಕ್ತ ಪಡಿಸಿರಿ. ಏಕೆಂದರೆ ಪರಮೇಶ್ವರನು ಒಂದು ರೀತಿಯಲ್ಲಿ ನಿಮಗೆ ಮುಕ್ತಿ ನೀಡಲು ಅಗದು ಎಂದು ಸಾರಿಬಿಟ್ಟಿದ್ದಾನೆ. ಏಕೆಂದರೆ ಒಂಬತ್ತು ಮಣ ತೈಲವು ಇರದು, **ರಾಧೆಯು ಕುಣಿಯದು"** (ಸುರ್ಮಾ ಚಶ್ಮ ಆರ್ಯ ರೂಹಾನಿ ಖಝಾಯೀನ್ ಸಂಪುಟ-2, ಪುಟ-151)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಲಾಲಾ ಮುರಳಿಧರ ಸಾಹಿಬರಿಗೆ ಒಂದು ನೂರು ರೂಪಾಯಿಯ ಬಹುಮಾನದ ಪಂಥಾಹ್ವಾನ ನೀಡುತ್ತ ಹೇಳುತ್ತಾರೆ:

**"**ಮಾಸ್ಟರ್ ಸಾಹಿಬ್ ಅದೇ ಆಕ್ಷೇಪವಿದ್ದರೆ........ ಇಸ್ಲಾಮೀ ಸ್ವರ್ಗದಲ್ಲಿ ಕೇವಲ ಲೌಕಿಕ ಅನುಗ್ರಹಗಳ ವಿವರಣೆ ಇದೆ. ದೈವ ಸಾನಿಧ್ಯ ಮತ್ತು ಆಧ್ಯಾತ್ಮಿಕ ಸಂತೋಷಗಳ ವಿವರ ಎಲ್ಲೂ ಇಲ್ಲ, ಅಂತಾದರೆ, ನಾವು ಈ ಆಕ್ಷೇಪದ ನಿರ್ಣಯಕ್ಕಾಗಿ ಉತ್ತಮ ರೀತಿಯಲ್ಲಿ ತಿಳಿಯುವುದೇನೆಂದರೆ, ಮಾಸ್ಟರ್ ಸಾಹಿಬ್ ಯಾವುದೇ ಪತ್ರಿಕೆಯ ಮೂಲಕ ಅಧಿಕೃತವಾಗಿ ನಮಗೆ ಸೂಚನೆ ನೀಡಲಿ...... **"**ಹೌದು ನನ್ನ ಅಭಿಪ್ರಾಯ ಅದೇ ಆಗಿದೆ ಪವಿತ್ರ ಖುರ್‌ಆನಿನಲ್ಲಿ ದೈವಸಾನಿಧ್ಯ ಮತ್ತು ಆಧ್ಯಾತ್ಮಿಕ ಸಂತೋಷಗಳ ವಿವರ ಎಲ್ಲೂ ಇಲ್ಲ ಎಂದು. ಆದರೆ ವೇದಗಳಲ್ಲಿ ಇಂತಹ ಬೇಕಾದಷ್ಟು ವಿವರಗಳಿವೆ. ಆಗ ನಾವು ವಚನ ನೀಡುತ್ತೇವೆ ಕೇವಲ ಮೂರು ಅಥವಾ ನಾಲ್ಕು ವಾರಗಳವರೆಗೆ ಒಂದು ಸ್ಥಿರಾತ್ಮಕ ಪತ್ರಿಕೆ ಅದೇ ಉದ್ದೇಶವಾಗಿ ಪವಿತ್ರ ಖುರ್‌ಆನ್ ಹಾಗೂ ವೇದಗಳ ಮಧ್ಯೆ ಸ್ಪರ್ಧಿಸಿ ಬಹುಬೇಗ ಪತ್ರಿಕೆಯಲ್ಲಿ ಪ್ರಕಟಿಸೋಣ, ನೂರು ರೂಪಾಯಿಗಳು ಬಹುಮಾನ ರೂಪದಲ್ಲಿ ಒಬ್ಬ ಸುಪ್ರಸಿದ್ಧ ಬ್ರಹ್ಮಾ ಪಂಡಿತನ ಬಳಿ – ಅವರು ಆರ್ಯರ ಸಹೋದರ ಸಂಬಂಧಿಯಾಗಿದ್ದಾರೆ – ಅಮಾನತ್ ರೂಪದಲ್ಲಿ ಇಡುವೆವು. ಆಗ ಮಾಸ್ಟರ್ ಸಾಹಿಬ್ ಪ್ರಮಾಣಿಕವಾಗಿ ನಾಲ್ಕು ವೇದಗಳ ಮೂಲಕ ಅದನ್ನು ಅನುಮೋದಿಸಿದರೆ, ಸಾಕ್ಷ್ಯವಹಿಸಿದರೆ, ಆ ನೂರು ರೂಪಾಯಿಗಳು ಮಾಸ್ಟರ್ ಸಾಹಿಬರಿಗೆ ದೊರಕುವುದು. ಇಲ್ಲವಾಗಿದ್ದಲ್ಲಿ ನಾನು ಮಾಸ್ಟರ್ ಸಾಹಿಬರಿಂದ ಏನೂ ಬೇಡುವುದಿಲ್ಲ ಕೇವಲ ಈ ಶರತ್ತನ್ನು ಹೇಳುತ್ತೇನೆ...... ಪರಾಜಿತರಾದ ಸ್ಥಿತಿಯಲ್ಲಿ ಅವರನ್ನು ಪದೇ ಪದೇ ಅಪಮಾನಿಸುತ್ತಿರುವ ವೇದಗಳಿಂದ ಮುಕ್ತರಾಗಿ ಇಸ್ಲಾಮಿನ ಸತ್ಯಥವನ್ನು ಸ್ವೀಕರಿಸಲಿ. (ಯಾರ್ ಗಾಲಿಬ್ ಶೋ ಕೆ ಗಾಲಿಬ್ ಶೋ) ಆದರೂ ಮಾಸ್ಟರ್ ಸಾಹಿಬ್ ಮೌನವಹಿಸಿದರೆ ಇಂತಹ ವಿಷಯ ಯಾವ ಪತ್ರಿಕೆಯಲ್ಲೂ ಅಥವಾ ಭಿತ್ತಿಪತ್ರದಲ್ಲು ಪ್ರಕಟಿಸದಿದ್ದರೆ, ಪ್ರೇಕ್ಷಕರಾದ ನೀವು ತಿಳಿಯಬಹುದು ಅವರು ಪಲಾಯನ ಮಾಡಿದ್ದಾರೆ ಎಂದು. (ಸುರ್ಮಾ ಚಶ್ಮ ಆರ್ಯ ರೂಹಾನಿ ಖಝಾಯೀನ್ ಸಂಪುಟ-2, ಪುಟ-155)

ಮುಂದೆ ಇನ್‌ಶಾಅಲ್ಲಾಹ್ ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಮತ್ತೊಂದು ಪಂಥಾಹ್ವಾನವನ್ನು ಪ್ರಕಟಿಸುವೆವು.

**(ಮನ್‌ಸೂರ್ ಅಹ್ಮದ್ ಮಸ್‌ರೂರ್)**

*(ಪುಟ ಸಂಖ್ಯೆ 12ರ ಉಳಿದ ಭಾಗ)*

ಕಾಯುತ್ತಿದ್ದಾರೆ. ಅವರಲ್ಲಿ ಹಲವು ವಿಧದ ಜನರಿದ್ದಾರೆ ಮತ್ತು ಜೊತೆಯಲ್ಲಿ Mayor Jonne Phillip ಸಾಹಿಬ್ ಅವರು ಉಪಸ್ಥಿತರಿದ್ದಾರೆ. ಬಾಲಕಿಯರ ಒಂದು ಗುಂಪು ಸಹ ಉಪಸ್ಥಿತವಿದೆ. Aachen ನಗರದ ಕುದುರೆ ಸವಾರರು ಸಹ ಉಪಸ್ಥಿತರಿದ್ದಾರೆ. ಅವರೆಲ್ಲರೂ ಗೌರವಾನ್ವಿತ ಅತಿಥಿಯನ್ನು ಸ್ವಾಗತಿಸಿದರು.

ಒಂದು ಬೃಹತ್ ವಾಹನ ಬಂದು ನಿಲ್ಲುತ್ತದೆ. ಹಸ್ತಲಾಘವ ನಡೆಯುತ್ತಿದೆ. ಪುಷ್ಪಗಳನ್ನು ಕೊಡಲಾಗುತ್ತಿದೆ. ಬಾಲಕರ ಗುಂಪು ಸ್ವಾಗತ ಗೀತೆಗಳನ್ನು ಹಾಡುತ್ತಿದೆ ಮತ್ತು ಹಲವು Camara ಗಳು Flash ಆಗತೊಡಗಿವೆ. ಖಲೀಫತುಲ್ ಮಸೀಹ್ ಮಸೀದಿಯ ಗೋಡೆಯಲ್ಲಿ ಸ್ಥಾಪಿಸಿದ ಫಲಕದ ಮೇಲಿನಿಂದ ಪರದೆಯನ್ನು ಅನಾವರಣ ಮಾಡಿದರು ಮತ್ತು Tent ನೊಳಗೆ ಪ್ರವೇಶಿಸಿದರು. ಅಲ್ಲಿ ಉದ್ಘಾಟನಾ ಸಮಾರಂಭವನ್ನು ಏರ್ಪಡಿಸಲಾಗಿತ್ತು.

2012 ನೇ ವರ್ಷದಲ್ಲಿ ಈ ಮಸೀದಿಯ ನಿರ್ಮಾಣ ಕಾರ್ಯ ಪ್ರಾರಂಭವಾಗಿತ್ತು. ನವೀನ ರೀತಿಯಲ್ಲಿ ಈ ಕಟ್ಟಡವನ್ನು ನಿರ್ಮಿಸಲಾಗಿದೆ. ಒಟ್ಟು ಸ್ಥಳದ ವಿಸ್ತೀರ್ಣ 2600 ಚ.ಮೀ ಇದೆ. ಆರಾಧನಾ ಸ್ಥಳ 50 ಚ.ಮೀ ಒಳಗೊಂಡಿದೆ. ಅದರಲ್ಲಿ 200 ಜನರು ನಮಾಝ್ ನಿರ್ವಹಿಸಬಹುದಾಗಿದೆ. ಒಂದು 5 ಮೀಟರ್ ಎತ್ತರದ ಗುಂಬಜ್ ಕೂಡಾ ಇದೆ ಮತ್ತು 14 ಮೀಟರ್ ಎತ್ತರ ಗೋಪುರವೂ ಇದೆ.

ಗೋಡೆಗಳನ್ನು ಪೌರಾತ್ಯ design ನಿಂದ ಶೃಂಗರಿಸಲಾಗಿದೆ. ಇನ್ನೊಂದು ಮುಖ್ಯ ವಿಷಯವೇನೆಂದರೆ ವಾಹನ ನಿಲುಗಡೆಗಾಗಿ ಸಾಕಷ್ಟು ಜಾಗವಿದೆ. ಮಸೀದಿಯ ಕಿಟಕಿಗಳ ಮೇಲೆ ಅಲ್ಲಾಹನ 99 ಹೆಸರುಗಳಲ್ಲಿ ಕೆಲವು ಹೆಸರುಗಳನ್ನು ಬರೆಯಲಾಗಿದೆ. ಕೆಲವು ಜರ್ಮನ್ ಭಾಷೆಯಲ್ಲಿಯೂ ಇದೆ.

ಓರ್ವ ಖಲೀಫರ ಕೈಯಲ್ಲಿ ಒಟ್ಟುಗೂಡಿದ ಮುಸಲ್ಮಾನರ ಜಮಾಅತುಗಳಲ್ಲಿ ಅಹ್ಮದಿಯಾ ಜಮಾಅತ್ ಏಕೈಕವಾಗಿದೆ. ಧರ್ಮ ಧರ್ಮಗಳ ನಡುವೆ ಸೌಹಾರ್ಧತೆ ಅನಿವಾರ್ಯವಾಗಿದೆ ಎಂಬುದು ಖಲೀಫರ ನುಡಿಯಾಗಿದೆ.

(Aachener Nachrichten ಪತ್ರಿಕೆ ಮತ್ತು Aachener Zeitung ಪತ್ರಿಕೆ ಎರಡೂ ದಿನಪತ್ರಿಕೆಗಳಾಗಿವೆ. ಈ ಎರಡು ಪತ್ರಿಕೆಗಳು 113,495 ಸಂಖ್ಯೆಯಲ್ಲಿದೆ).

ಪ್ರೋಟೆಸ್ಟೆಂಟ್ ಚರ್ಚ್ Aachen ಬಗ್ಗೆ ತನ್ನ ವೆಬ್‌ಸೈಟ್‌ನಲ್ಲಿ ಸುದ್ದಿ ನೀಡುತ್ತ ಹೀಗೆ ಬರೆದಿದೆ: ಶನಿವಾರ ಸಂಜೆ Aachen ನಲ್ಲಿ ಮಸ್ಜಿದ್ ಮನ್ಸೂರ್ ಉದ್ಘಾಟನಾ ಸಂದರ್ಭದಲ್ಲಿ ಮಿರ್ಝಾ ಮಸ್‌ರೂರ್ ಅಹ್ಮದ್ ತಮ್ಮ ಅನುಯಾಯಿಯಗಳಿಗೆ ಹೇಳಿದರು. ಎಲ್ಲ ಮಾನವರ ಸೇವೆಯನ್ನು ಮಾಡಿರಿ. ಧಾರ್ಮಿಕ ನೇತಾರರು, ಅವರ ಅನುಯಾಯಿಗಳು ಅವರನ್ನು ಖಲೀಫ ಮತ್ತು ವಾಗ್ದಾತ್ತ ಮಸೀಹರ ಉತ್ತರಾದಿಕಾರಿ ಎನ್ನುತ್ತಾರೆ. ಅವರು ಹೇಳಿದರು. ಇಸ್ಲಾಮ್ ಎಲ್ಲ ಸತ್ಯವಿಶ್ವಾಸಿಗಳಿಗೆ ಇದೇ ಶಿಕ್ಷಣ ನೀಡುತ್ತಿದೆ. ಖಲೀಫ ಸಾಹಿಬರು ಹೇಳಿದರು. ಅಲ್ಲಾಹನು ದೌರ್ಜನ್ಯಕರ ಬಾದಶಾಹನಲ್ಲ. ಬದಲು ಅವನು ಮಾನವರಿಗೆ ಪ್ರೀತಿ ಮತ್ತು ದಯೆ ನೀಡಬಯಸುತ್ತಾನೆ." ಇದು ತನ್ನನ್ನು ಉಗ್ರ ಮುಸ್ಲಿಮರಿಂದ ಪ್ರತ್ಯೇಕಗೊಳಿಸಿದರು. Aachenನ ಲಾರ್ಡ್ ಮೇಯರ್ ಸಾಹೇಬರು ಅದನ್ನು "ಸಂತಸದ ದಿನ" ಎಂದು ಬಣ್ಣಿಸಿದರು. ಅದಾದ ನಂತರ ಮಸೀದಿಯ ಕುರಿತು ಮಾಹಿತಿಗಳನ್ನು ಬರೆದಿದ್ದಾರೆ. ಮುಂದೆ ವರಿಉ ಹೀಗೆ ಹೇಳಿದರು. ಜರ್ಮನಿಯ ಅಮಿರ್ ಸಾಹೆಬ್ ಹೇಳಿದರು: ಮಸೀದಿಯು ದೊಡ್ಡ ಎರಡು ಕುಟುಂಬಗಳ ಮನೆಯಷ್ಟಿದೆ.

ರಾಜ್ಯ ರೇಡಿಯೋ WDR ಸಹ ಸುದ್ದಿ ಪ್ರಕಟಿಸಿತು.

**(ಮುಂದುವರಿಯುವುದು)**


**ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನ್ ತೋಟಗಾರಿಕೆ ವಿಭಾಗದಲ್ಲಿ (ಶೋಬ ತರ್ಝಾಯೀನ್) ಸೇವೆಸಲ್ಲಿಸ ಬಯಸುವವರು ಗಮನಿಸಿರಿ**

ತೋಟಗಾರಿಕೆ ವಿಭಾಗ (ಶೋಬ ತರ್ಝಯೀನ್) ಖಾದಿಯಾನಿನಲ್ಲಿ ಹೊಸ ಮಂಜೂರಾದ Based Grass Cutter machine ಚಾಲಕನ ಹುದ್ದೆಗಾಗಿ ಅಭ್ಯರ್ಥಿ ಬೇಕಾಗಿರುತ್ತದೆ. ಈ ಚಾಲಕ ಹುದ್ದೆ ಬಯಸುವವರು ತಮ್ಮ ಅರ್ಜಿಯನ್ನು ಎರಡು ತಿಂಗಳು ಒಳಗಾಗಿ 'ನಝಾರತ್ ದೀವಾನ್ ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನ್'ನ ಹೆಸರಿನಲ್ಲಿ ಕಳುಹಿಸಬಹುದಾಗಿದೆ.

**ಶರತ್ತುಗಳು ಕೆಳಗಿನಂತಿವೆ:**

1. ಅಭ್ಯರ್ಥಿಯ ಬಳಿ Driving Licence ಮತ್ತು Drivingನ ಅನುಭವ ಅನಿವಾರ್ಯವಾಗಿರುತ್ತದೆ.
2. ಅಭ್ಯರ್ಥಿ ಅಲ್ಪ ಸ್ವಲ್ಪವಾದರೂ Technical ಕೆಲಸ ತಿಳಿದಿರಬೇಕು. ಏಕೆಂದರೆ ಅಗತ್ಯಗನುಗುಣವಾಗಿ ಆ ಕಟ್ಟರ್ ಮಿಶಿನನ್ನು ಸರಿಪಡಿಸಿಕೊಳ್ಳಬಹುದಾಗಿದೆ.
3. ಅಭ್ಯರ್ಥಿ Tractor Trolly ಓಡಿಸಲು ತಿಳಿದಿರಬೇಕು.
4. ಅಭ್ಯರ್ಥಿ ವಿಧೇಯ, ಪ್ರಾಮಾಣಿಕನಾಗಿರಬೇಕು, ಸಮಯ ಬೀರಿದಾಗ ಹೆಚ್ಚಾಗಿ ಕೆಲಸಕ್ಕೂ ಸಿದ್ಧನಾಗಿರಬೇಕು.
5. ಅಭ್ಯರ್ಥಿಗೆ ಯಾವ ಶಿಕ್ಷಣ ಅರ್ಹತೆ ಬೇಕಾಗಿರುವುದಿಲ್ಲ.
6. ಅಭ್ಯರ್ಥಿಗೆ ಜನನ ಪ್ರಮಾಣ ಪತ್ರಿಕೆಯನ್ನು ಪ್ರಸ್ತುತಪಡಿಸುವುದು ಅನಿವಾರ್ಯವಾಗಿರುತ್ತದೆ.
7. ಸಂದರ್ಶನದಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳು ಮಾತ್ರ ಚಾಲಕ ಸೇವೆಗೆ ಆಯ್ಕೆ ಮಾಡಿಕೊಳ್ಳಲಾಗುವುದು.
8. ನೂರ್ ಆಸ್ಪತ್ರೆ ಖಾದಿಯಾನಿನಿಂದ Medical Fitness Certificate ಪಡೆದುಕೊಂಡವರನ್ನು ಮಾತ್ರ ಚಾಲಕ ಸೇವೆಗೆ ಅರ್ಹರೆಂದು ಪರಿಗಣಿಸಲಾಗುವುದು.
9. ಚಾಲಕ ಅಭ್ಯರ್ಥಿಗೆ 2ನೇ ದರ್ಜೆ ಸಮಾನ ಭತ್ಯೆ ಹಾಗೂ ಇತರ ಸವಲತ್ತುಗಳನ್ನು ನೀಡಲಾಗುವುದು.
10. ಖಾದಿಯಾನ್‌ಗೆ ಆಮದ್ ರಫತ್‌ನ ವ್ಯಚ್ಚ ಅಭ್ಯರ್ಥಿ ಸ್ವತಃ ನೋಡಿಕೊಳ್ಳ ಬೇಕಾಗುತ್ತದೆ.
11. ಅಭ್ಯರ್ಥಿಯು ಆಯ್ಕೆಗೊಂಡಿದ್ದಲ್ಲಿ ಖಾದಿಯಾನಿನಲ್ಲಿ ವಸತಿ ವ್ಯವಸ್ಥೆಯು ಖುದ್ದಾಗಿ ಮಾಡಿಕೊಳ್ಳುವುದಾಗಿದೆ.

**ಟಿಪ್ಪಣಿ: ನಮೂದಿತ ಅರ್ಜಿಯೂ ನಝಾರತ್ ದೀವಾನ್ ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನ್‌ನಿಂದ ಪಡೆಯಬಹುದು.**

**(ನಾಝಿರ್ ದೀವಾನ್ ಖಾದಿಯಾನ್)**

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: ನಝಾರತ್ ದೀವಾನ್ ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನ್.**

**Phone: 01872-501130, (Mob): 9877138347, 9646351280**

**Email: diwan@qadian.in**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.1, Thursday, 27 August 2020, Issue No. 33

MANAGER
NAWAB AHMAD.
Mobile : +91 94170-20616
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**(ಬದರ್ ಸಂಚಿಕೆ 32ರ ವರದಿಯ ಉಳಿದ ಭಾಗ)**

### ಆಮೀನ್ ಸಮಾರಂಭ

ಅನಂತರ ಹುಝೂರ್ ಮರಳಿ ಬೈತುಸ್ಸುಬೂಹ್‌ಗೆ ತೆರಳಿದರು. ನಿಗದಿತ ಕಾರ್ಯಕ್ರಮದನ್ವಯ ಅಲ್ಲಿ ಆಮೀನ್ ಸಮಾರಂಭ ಏರ್ಪಡಿಸಲಾಗಿತ್ತು. ಕೆಳಗೆ ನಮೂದಿತ 25 ಬಾಲಕ ಬಾಲಕಿಯರಿಂದ ಹುಝೂರ್ ಪವಿತ್ರ ಖುರ್‌ಆನಿನ ಒಂದೊಂದು ವಚನವನ್ನು ಆಲಿಸಿದರು ಮತ್ತು ಕೊನೆಯಲ್ಲಿ ದುಆ ಮಾಡಿಸಿದರು.

ಆಮೀನ್ ಸಮಾರಂಭದಲ್ಲಿ ಭಾಗವಹಿಸುವ ಅದೃಷ್ಟಶಾಲಿ ಮಕ್ಕಳ ಹೆಸರುಗಳು ಇಂತಿವೆ:

ಅಝೀಝುಮ್ ರೌಶಾನ್ ಅಹ್ಮದ್ ಕಾಹ್ಲೂನ್, ಮುಹಮ್ಮದ್ ಅನ್ಸರ್ ಅಶ್ರಫ್, ತಾಹಿರ್ ಅಸ್ಲಮ್ ಕಹಲೂನ್, ಫಾಏಝ್ ಅಹ್ಮದ್ ಅವಾನ್, ಶಾಯಿಸ್ತ ಘೋರಿ, ರಾಜ ಹಸ್‌ನಾನ್ ಅಹ್ಮದ್, ರಾಜಾ ರೌಶಾನ್, ಮುಸವ್ವಿರ್ ರಶಿದ್, ವಲೀದ್ ಮಹ್ಮೂದ್ ಮೀರ್, ಸಫೀರ್ ಸಾದಿಖ್ ಜಂಜೂಅ.

ಅಜೀಝ ಮಲೀಹ ಅಝ್ಹರ್, ಮಲಹ ಅಹ್ಮದ್, ದಾನಿಯಾ ಅಹ್ಮದ್, ಮಲೀಹ ಝೈನಬ್ ಮಹ್ಮೂದ್, ಫೈಝಾ ಜಮ್‌ಶೀದ, ಆಫಿಯಾ ಅಹ್ಮದ್, ಝುಹ್‌ದ ಚೌಧರಿ, ಸಮಾವಲ್ ಅಹ್ಮದ್, ಜಾಝಿಬ ಎಜಾಝ್, ಫೌಝಿಯಾ ಅಹ್ಮದ್, ವರದಹ್ ಯೂಸುಫ್, ಅರೀಶ ನುಸ್ರತ್, ಮನಾಹಿಲ್ ರಹಮಾನ್, ನಮಲ್ ಗುಲ್, ರಾಬಿಯಾ ಲುಖ್ಮಾನ್ ಗುಲ್.

ಆಮೀನ್ ಸಮಾರಂಭದ ನಂತರ ಹುಝೂರ್ ಮಗ್ರಿಬ್ ಮತ್ತು ಇಶಾಅ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು. ನಮಾಝುಗಳ ನಂತರ ಹುಝೂರ್ ತಮ್ಮ ವಸತಿ ನಿಲಯಕ್ಕೆ ತೆರಳಿದರು.

### ಪತ್ರಿಕೆಗಳಲ್ಲಿ ಮಸ್ಜಿದ್ ಮನ್ಸೂರ್ ಉದ್ಘಾಟನೆಯ ವಾರ್ತೆಗಳು "ಮಸ್ಜಿದ್ ಮನ್ಸುರ್"

'ಮಸ್ಜಿದ್ ಮನ್ಸೂರ್' ಉದ್ಘಾಟನಾ ಕುರಿತು ಇಂದು ಆಖನ್ ನಗರದ ಎರಡು ವಾರ್ತಾ ಪತ್ರಿಕೆಗಳು ತಮ್ಮ 26 ಮೇ 2015 ರ ಸಂಚಿಕೆಗಳಲ್ಲಿ ಪ್ರಕಟಿಸಿದ್ದವು. ಅದೇ ರೀತಿ ಪ್ರೋಟೆಸ್ಟಂಟ್ ಚರ್ಚ್ ತನ್ನ ವೆಬ್‌ಸೈಟ್‌ನಲ್ಲಿ ಮಸೀದಿ ಉದ್ಘಾಟನೆಯ ಸುದ್ದಿ ನೀಡಿತು. ಸುದ್ದಿಗಳ ವಿವರ ಹೀಗಿದೆ.

(Aachener zeitung ಪತ್ರಿಕೆ ತನ್ನ 26 ಏಪ್ರಿಲ್ 2015 ರ ಪ್ರಸಾರದಲ್ಲಿ "ಮಸ್ಜಿದ್ ಮನ್ಸೂರ್" ಉದ್ಘಾಟನಾ ಸುದ್ದಿಯನ್ನು ನೀಡುತ್ತಾ ಹೀಗೆ ಬರೆಯಿತು).

**ಓರ್ವ ಗೌರವಾನ್ವಿತ ಅತಿಥಿ ಮತ್ತು ಒಂದು ಮಹೋನ್ನತ ಶಾಂತಿಯ ಸಂದೇಶ ಖಲೀಫ**

**ಮಿರ್ಝಾ ಮನ್ಸೂರ್ ಅಹ್ಮದ್ ಲಂಡನಿನಿಂದ ಆಗಮಿಸಿದ್ದರು.**

**Feldstrasse ಸ್ಥಳದಲ್ಲಿ ಮಸ್ಜಿದ್ ಮನ್ಸೂರ್ ಅನ್ನು ಉದ್ಘಾಟಿಸಿದರು.**

ಚದರಿ ಹೋಗಿದ್ದ ಜನರು ಪುನಃ ಒಂದೆಡೆ ಸೇರಿದರು. ತಮ್ಮ ಶಿರಗಳನ್ನು ಅಲ್ಲಾಡಿಸುತ್ತ ಎಲ್ಲ ಉಪಸ್ಥಿತರು ಒಂದು ನೋಟವನ್ನು ಕುತೂಹಲದಿಂದ ಕಾಣಲು ಪ್ರಯತ್ನಪಡುತ್ತಿದ್ದರು. ಒಂದು Camera Team ಎಲ್ಲ ಘಟನೆಗಳನ್ನು ಚಿತ್ರಿಸುತ್ತದೆ. ಒಂದು ಹೆಲಿಕಾಪ್ಟರ್ ಡ್ರೋನ್ ವೀಡಿಯೊ ಹಾಗೂ ಚಿತ್ರಗಳಿಗಾಗಿ ಆಕಾಶದಲ್ಲಿ ಹಾರಾಡುತ್ತಿತ್ತು. ಒಂದೆಡೆ ನಿಂತುಕೊಂಡ ಮಕ್ಕಳು ಆದರಣೀಯ ಅತಿಥಿಗಳ ಆಗಮನದ ಸಂದರ್ಭದಲ್ಲಿ ಸ್ವಾಗತ ಗೀತೆಗಳನ್ನು ಹಾಡುತ್ತಿದ್ದರು.

ಮಿರ್ಝಾ ಮಸ್ರೂರ್ ಅಹ್ಮದ್ ಲಂಡನ್ನಿನಿಂದ ಬಂದಿದ್ದಾರೆ. ಅವರು ಲೋಕದಾದ್ಯಂತ ಅಹ್ಮದಿಯರ ಖಲೀಫರಾಗಿದ್ದಾರೆ. ಅವರ ಸಂಖ್ಯೆ 10 ಮಿಲಿಯನ್‌ಗಿಂತ ಹೆಚ್ಚಾಗಿದೆ. ಈ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಒಂದು ಇಸ್ಲಾಮಿ ಪಂಥವಾಗಿದೆ. ಅದು 19ನೇ ಶತಮಾನದ ಅಂತ್ಯದಲ್ಲಿ ಸ್ಥಾಪನೆಗೊಂಡಿದೆ. Aachen ಪ್ರಪಂಚದಾದ್ಯಂತ ಅಹ್ಮದಿಯರ ಸಂಖ್ಯೆ 200 ಮಿಲಿಯನ್ ಆಗಬಹುದು. ಖಲೀಫತುಲ್ ಮಸೀಹ್ ಹೊಸ ಮಸೀದಿ "ಮಸ್ಜಿದ್ ಮನ್ಸೂರ್"ನ್ನು ಉದ್ಘಾಟಿಸಿದರು. ಅದು Feildstrasse ಸ್ಥಳದಲ್ಲಿ ಸ್ಥಾಪಿತವಾಗಿದೆ. ಅದರ ನಿರ್ಮಾಣ ಸ್ಥಳೀಯ ಅಹ್ಮದಿಯರ ಚಂದಾ ಹಣದಿಂದ ಸಾಧ್ಯವಾಗಿದೆ. ಜರ್ಮನಿಯಾದ್ಯಂತ ಅಹ್ಮದಿಯರ ಸಂಖ್ಯೆ 50 ಸಾವಿರಕ್ಕೆ ಸಮೀಪವಿದೆ.

ತಕ್ಷಣ ನೋಡುಗರ ದೃಷ್ಟಿ 14 ಮೀಟರ್ ಎತ್ತರದ ಗೋಪುರ ಮತ್ತು ಅದಕ್ಕೆ ಹೊಂದಿಕೊಂಡಿರುವ ಐದು ಮೀಟರ್‌ನಷ್ಟು ದೊಡ್ಡದಾದ ಗುಂಬಜಿನ ಮೇಲೆ ಬೀಳುತ್ತದೆ. ಆರಾಧನಾ ಸ್ಥಳದ ಒಟ್ಟು ವಿಸ್ತೀರ್ಣ 150 ಚ.ಮೀ ಇದೆ. ಮಸೀದಿಯಲ್ಲಿ 200 ಜನರು ನಮಾಝ್ ನಿರ್ವಹಿಸಬಹುದಾಗಿದೆ. ಸುಮಾರು ಮೂರು ವರ್ಷಗಳ ಹಿಂದೆ 2012 ರಲ್ಲಿ ಅದರ ಅಡಿಗಲ್ಲನ್ನು ಹಾಕಲಾಗಿತ್ತು. ಇಂದು ಅದರ ಉದ್ಘಾಟನೆ ನೆರವೇರುತ್ತಿದೆ.

ಖಲೀಫತುಲ್ ಮಸೀಹ್ ಉಪಸ್ಥಿತರಿಗೆ ಪರಸ್ಪರ ಒಳ್ಳೆಯ ರೀತಿಯಲ್ಲಿ ವ್ಯವಹರಿಸಲು ಉಪದೇಶ ನೀಡಿದರು.

ಹೇಳಿದರು. ಅಲ್ಲಾಹನು ದುಷ್ಟ ಬಾದಶಹನಲ್ಲ. ಅವನು ಮಾನವರೊಂದಿಗೆ ಪ್ರೀತಿ ಹಾಗೂ ರಹ್ಮಾನಿಯತ್‌ನಿಂದ ವ್ಯವಹರಿಸುವವನಾಗಿದ್ದಾನೆ. ನೂರಾರು ಜನರು ಒಂದು ತಾತ್ಕಾಲಿಕವಾಗಿ ನಿರ್ಮಿಸಲ್ಪಟ್ಟ ಟೆಂಟ್‌ನಲ್ಲಿ ಕುಳಿತುಕೊಂಡು ಖಲೀಫತುಲ್ ಮಸೀಹರ ಸಂಬೋಧನೆಯನ್ನು ಕೇಳಿದರು. ಅವರೊಂದಿಗೆ ನಗರದ ರಾಜಕಾರಣಿಗಳೂ ಭಾಗವಹಿಸಿದ್ದರು.

**(Aachen ಪತ್ರಿಕೆಯು ತನ್ನ 26 ಮೇ 2015 ನೇ ಪ್ರಕಟಣೆಯಲ್ಲಿ ಮಸ್ಜಿದ್ ಮನ್ಸೂರ್ Aachen ಉದ್ಘಾಟನೆಯ ಬಗ್ಗೆ ಈ ಕೆಳಗಿನಂತೆ ಸುದ್ದಿ ಪ್ರಕಟಿಸಿತು).**

### ಇಸ್ಲಾಮಿನ ಮೈತ್ರಿಪೂರ್ಣ ರೂಪ

Fieldstrasse ಸ್ಥಳದಲ್ಲಿ ಮಸ್ಜಿದ್ ಮನ್ಸೂರ್ ಉದ್ಘಾಟನೆಗೊಂಡಿತು. ಅದರ ಉದ್ಘಾಟನೆಗೋಸ್ಕರ ಜಾಗತಿಕ ಅಹ್ಮದಿಯಾ ಜಮಾಅತಿನ ಖಲೀಫರು ಸ್ವಯಂ ಲಂಡನ್ನಿನಿಂದ ಆಗಮಿಸಿದ್ದರು. ವಿವಿಧ ಧರ್ಮಗಳ ಮಧ್ಯೆ ಸೌಹಾರ್ದತೆಯನ್ನು ಸ್ಥಾಪಿಸುವ ಕುರಿತು ಅವರು ಒತ್ತು ನೀಡಿದರು.

ಪರಿಸರದಲ್ಲಿ ಒಂದು ಸಂತೋಷದ ಗಾಳಿ ಬೀಸುತ್ತಿದೆ. Fieldstrasse ಕ್ಷೇತ್ರದಲ್ಲಿ ಮಸ್ಜಿದ್ ಮನ್ಸೂರನ್ನು ಉದ್ಘಾಟಿಸಲಾಯಿತು. ಉದ್ಘಾಟನೆಗಾಗಿ ಜಾಗತಿಕ ಅಹ್ಮದಿಯಾ ಜಮಾಅತಿನ ಖಲಿಫರು ಆಗಮಿಸುತ್ತಿದ್ದಾರೆ. ಖಲೀಫತುಲ್ ಮಸೀಹ್ ಅವರು ಲಂಡನ್ನಿನಲ್ಲಿ ವಾಸಿಸುತ್ತಿದ್ದಾರೆ. ಎರಡನೆ ಬಾರಿಗೆ Aachen ಆಗಮಿಸುತ್ತಿದ್ದಾರೆ. ಮೊದಲನೆ ಸಲ ಅಡಿಗಲ್ಲು ಹಾಕುವ ಸಂದರ್ಭದಲ್ಲಿ ಬಂದಿದ್ದರು.

2003 ರಿಂದ ಅವರು ಲೋಕದಾದ್ಯಂತ ನೂರಾರು ಮಿಲಿಯನ್ ಮುಸಲ್ಮಾನರ ಆಧ್ಯಾತ್ಮಿಕ ನೇತಾರರಾಗಿರುವವರು. ಅವರು ಹಝ್ರತ್ ಮಸೀಹ್ ಮೌಊದ್(ಅ) ರವರ ಐದನೇ ಖಲಿಫರಾಗಿದ್ದಾರೆ. ಖಲೀಫರ ಆಯ್ಕೆಯು ಪ್ರಜಾತಂತ್ರ ರೀತಿಯಲ್ಲಿ ಜಮಾಅತಿನ ಒಂದು ಚುನಾವಣಾ ಸಮಿತಿಯಿಂದ ಆಗುತ್ತದೆ. ಮತ್ತೆ ಅದು ಅವರ ಜೀವನ ಪರ್ಯಂತವಿರುತ್ತದೆ.

230 ಅಹ್ಮದಿಯರು ಈ ಕ್ಷೇತ್ರದಲ್ಲಿ ನೆಲೆಸಿದ್ದಾರೆ. ಮಸೀದಿಯ ಅಕ್ಕಪಕ್ಕದಲ್ಲಿ ಬಹಳಷ್ಟು ಸ್ಥಳಾವಕಾಶವಿದೆ. ಅದಲ್ಲದೇ ಒಂದು Multi Functional room ಇದೆ. ಅದರಲ್ಲಿ ವಿವಿಧ ಕಾರ್ಯಕ್ರಮಗಳು ಮತ್ತು ಆಟೋಟಗಳನ್ನು ನಡೆಸಬಹುದಾಗಿದೆ.

ಈ ಸಮಯ ಈ ಕ್ಷೇತ್ರದಲ್ಲಿ ಜಮಾಅತಿನಲ್ಲಿ ಮಹಿಳೆಯರ ಸಂಖ್ಯೆ ಪುರುಷರಿಗಿಂತ ಹೆಚ್ಚಾಗಿದೆ. ನಮಾಝ್ ನಿರ್ವಹಿಸಲು ಅವರದ್ದೇ ಆದ ಒಂದು ಪ್ರತ್ಯೇಕ ಕೋಣೆ ಇದೆ. ಮಹಿಳೆಯರು 11 ವರ್ಷ ವಯಸ್ಸಿನವರೆಗಿನ ಮಕ್ಕಳನ್ನು ತಮ್ಮ ಜೊತೆಯಲ್ಲಿ ತರುತ್ತಾರೆ. ಒಂದು Sliding door ಮೂಲಕ ನಮಾಝಿನ ಸ್ಥಳವನ್ನು ಪುರುಷರಿಂದ ಪ್ರತ್ಯೇಕಿಸಲಾಗಿದೆ. ಗೋಡೆಯ ಮೇಲೆ "ಅಲ್ಲಾಹನು ಒಬ್ಬನೇ" ಎಂದು ಬಿಡಿ ಅಕ್ಷರದಲ್ಲಿ ಬರೆಯಲಾಗಿದೆ.

200 ಕ್ಕಿಂತ ಹೆಚ್ಚಿನ ಜನರು ಸಂತೋಷದಿಂದ ಖಲಿಫರನ್ನು

*(ಉಳಿದ ವರದಿ ಪುಟ ಸಂಖೆ 09 ರಲ್ಲಿ ಓದಿರಿ)*

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**

**NATIONAL TOLL FREE**

**1800–103–2131**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.